ನೆಂಪುನ ಬಗ್ಗೆ

ದಖ್ಖಿನ ಪೀಠ ಭೂಮಿ ಮತ್ತೆ ಉತ್ತರ ಭಾರತದ ತಿರ್ಗಾಟದ ನೆಂಪುಗ



ಲೇಖಕರ್

ದಾಮೋದರ ಕುಯಿಂತೋಡು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ



ದಶವರ್ಷ ಸಂಭ್ರಮದ ಪುಸ್ತಕಮಾಲಿಕೆ 2022

ನೆಂಪುನ ಒರ್ತೆ

ದಖ್ಖನ ಪೀಠಭೂಮಿ ಮತ್ತೆ ಉತ್ತರ ಭಾರತದ ತಿರ್ಗಾಟದ ನೆಂಪುಗ

ಲೇಖಕರ್ :

ದಾಮೋದರ ಕುಯಿಂತೋಡು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಡಿಕೇರಿ

Decennial Year Publication Series 2022

ನೆಂಪುನ ಒರ್ತೆ

ದಖ್ಖನ ಪೀಠಭೂಮಿ ಮತ್ತೆ ಉತ್ತರ ಭಾರತದ ತಿರ್ಗಾಟದ ನೆಂಪುಗ

A travelgue in Arebaase Language Nempuna Orthe

Written by
Damodhara Kuinthodu

ಸಲಹಾ ಸಮಿತಿ :

ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಡಾ. ವಿಶ್ವನಾಥ ಬದಿಕಾನ
ಶ್ರೀ ಭರತೇಶ ಅಲಸಂಡೆಮಜಲು

ಪ್ರಕಟಣೆ :
ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಪುಸ್ತಕ ದೊರೆಯುವ ಸ್ಥಳ :
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿಕೃಪ ಬಿಲ್ಡಿಂಗ್, ರಾಜಸೀಟ್ ರಸ್ತೆ, ಮಡಿಕೇರಿ
ದೂ : 08272-223055, ಮೊ.: 6362522677
arebaseacademy@gmail.com, www.arebasheacdemy.gov.in

ಪ್ರಕಟಣೆಯ ವರ್ಷ : 2022

ಪುಟಗಳು	: viii+80
ಬೆಲೆ	: ರೂ. 100/-
ಪ್ರತಿಗಳು	: 200
ಆಕಾರ	: ಡೆಮಿ 1/8
ಕಾಗದ	: 80ಜಿಎಸ್ಎಂ ಎನ್.ಎಸ್ ಮ್ಯಾಪ್ಲಿತೋ
ಮುಖಪುಟ ವಿನ್ಯಾಸ	: ದಿನೇಶ್ ಹೊಳ್ಳ
ಅಕ್ಷರ ಜೋಡಣೆ	: ಗಂಗಾಧರ ಡಿ, ಶ್ರೀ ವಿನಾಯಕ ಪ್ರೆಸ್ಸ್, ಕಲ್ಲುಗುಂಡಿ

: ಮುದ್ರಣ :
ದಿಗಂತ ಮುದ್ರಣ ಲಿ.
ಕೈಗಾರಿಕೆ ಪ್ರಾಂಗಣ, ಯೆಯ್ಯಾಡಿ, ಮಂಗಳೂರು-575008
ದೂ.: 0824-2212551, 9686675271

ಅಧ್ಯಕ್ಷರ ಮಾತ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಕಟಣಾ ಯೋಜನೆ ಅಡಿಲಿ ಶ್ರೀ ಕುಯಿಂತೋಡು ದಾಮೋದರ ಗೌಡರ ಪ್ರವಾಸ ಕತನ ಬಾರ್ತಿದು ಕುಸಿನ ಸಂಗತಿ. ಒಂದ್ ಗಾದೆ ಮಾತ್ ಉಟ್ಟು 'ದೇಸ ಸುತ್ತೋಕು, ಕೋಸ ಓದೋಕು' ತೇಳಿ. ನಮ್ಮ ಅನುಬವ ವಿಸ್ತಾರ ಆಕೆ, ಹಂಗೆನೇ ಬೊದ್ಕುನ ಹೊಸ ರೀತಿಲಿ ನೋಡಿಕೆ ಇದರ್‌ಂದ ಸಾದ್ಯ ಆದೆ. ಇಲ್ಲಿ ಲೇಕಕರ್‌ಗೆ ದೇಸ ಸುತ್ತುದು ಆಸಕ್ತಿಯ ವಿಸಯ. ಈ ಪುಸ್ತಕಲಿ ವಿಬಿನ್ನ ಪ್ರದೇಸಗಳ ಜನರ ಆಚಾರ ವಿಚಾರ, ಪ್ರವಾಸ ದಕ್ಕಿಸಿ ಕೊಟ್ಟ ಹೊಸ ಅನುಬವಗಳ್‌ನ ಇಲ್ಲಿ ದಾಕಲಿಸಿ ಕೊಟ್ಟೊಳೊ. ಕೆಲವುಕೆ ಬೇರೆ ಬೇರೆ ಕಡೆ ಪ್ರವಾಸ ಹೋಕುತೇಳಿ ಆಸೆ ಇದ್ದರೂ ನಾನ ಕಾರಣಗಳ್‌ಂದ ಹೋಕೆ ಸಾದ್ಯ ಆದುಲೆ. ಅಂತಹ ಹೊತ್ತುಲಿ ಈ ಪ್ರವಾಸ ಕೃತಿನ ಓದುದರ ಮೂಲಕನಾರು ಒಂದಷ್ಟ್ ಸಂಗತಿಗಳ್‌ನ ತಿಳ್ಕಣಿಕೆ ಸಾದ್ಯ ಆದೆ. ಹಂಗೆ ಪ್ರವಾಸ ಹೋಕೂಂತ ಆಸೆ ಇದ್ದವುಕೂ ಕೂಡ ಇಂತಹ ಕೃತಿಗಳ್‌ನ ಓದಿ ಆದ ಮೇಲೆ ನಾವೂ ಹೋಗಿಯೇ ಬರೋಮ ತೇಳುವ ನಿರ್ದಾರ ಗಟ್ಟಿ ಆದೆ.

ಅರೆಬಾಸೆಲಿ ಇಂತ ಪ್ರವಾಸ ಪುಸ್ತಕಗ ತುಂಬಾ ಕಡಿಮೆ. ನಮ್ಮ ಜನಗ ಕೂಡ ಎಷ್ಟೋ ಪ್ರವಾಸ ಹೋಗಿರುವೋ. ಅವು ಅದರ ಬರೆವ ಪ್ರಯತ್ನ ಕೂಡ ಮಡೊಕು. ಅರೆಬಾಸೆಲಿ ಇಂತಹ ಪುಸ್ತಕಗಳ ಅಗತ್ಯ ಉಟ್ಟು. ಕೃತಿಕಾರರಾದ ಶ್ರೀ ಕುಯಿಂತೋಡು ದಾಮೋದರ ಗೌಡರಿಗೆ ಅಬಿನಂದನೆಗ.

ಲಕ್ಷ್ಮೀನಾರಾಯಣ ಕಜೆಗದ್ದೆ

ನನ್ನ ಎರ್ಡ್ ಮಾತ್

ನಾನ್ ನನ್ನ ಕಾಲೇಜ್ ದಿನಗಲ್ಲಿ ಹೋದ ಎರ್ಡ್ ಪ್ರವಾಸ ಅನುಬವಗಳ ಪ್ರವಾಸ ಹೋದ ವರ್ಸನೇ ಕನ್ನಡಲಿ ಬರ್ದ್ ಇಸಿದ್ ಹಾಂಗೆ ಇತ್ತ್. ಈಗ ಅದ್ ಅರೆಬಾಸೆ ಸಾಹಿತ್ಯ ಆಗಿ ಪುಸ್ತಕ ರೂಪಲಿ ಹೊರಬಾತಿರ್‌ದು ನಮ್ಮ 'ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ'ಯ, ಮುಕ್ಯವಾಗಿ ಈ ಸಂಸ್ತೆಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀ ನಾರಾಯಣ ಕಜೆಗದ್ದೆಯವರ ಪ್ರೋತ್ಸಾಹಂದಾಗಿ. ಅದ್‌ಕ್ಕಾಗಿ ಅವ್ರೂಕ್ಕೆ ಎಲ್ಲಾ ಸದಸ್ಯರಿಗೂ ನನ್ನ ನಮನಗಳ ಈ ಮೂಲಕ ತಿಳ್ಸಿನೆ.

ಹಾಂಗೆನೆ ಈ ಪುಸ್ತಕದ ಅಕ್ಷರಗಳ್ನ ಡಿ.ಟಿ.ಪಿ. ಮಾಡಿಕೊಟ್ಟ ಸಂಪಾಜೆ ಕಲ್ಲುಗುಂಡಿಲಿರುವ ಶ್ರೀ ವಿನಾಯಕ ಪ್ರೆಸ್ಸಿನ ಯಜಮಾನ ಗಂಗಾಧರ ಡಿ. ನವುಕೂ ಅವರ ಶ್ರೀಮತಿ ಲಲಿತಕ್ಕನವುಕೂ ಹಾಂಗೂ ಅವರ ಸಹಾಯಕಿ ಶ್ರೀಮತಿ ಮಿತಾಶ್ರೀಗೂ ನನ್ನ ಕೃತಜ್ಞತೆನ ಸಲ್ಲಿಸಿನೆ.

ಈ ಪುಸ್ತಕದ ಮುದ್ರಣದ ಹೊಣೆ ಹೊತ್ತ್ ಪೊರ್ಲುಲಿ ಮುದ್ರಿಸಿಕೊಟ್ಟ ದಿಗಂತ ಮುದ್ರಣ ಸಂಸ್ಥೆಗೆ ನನ್ನ ವಂದನೆ.

ದಾಮೋದರ ಕುಯಿಂತೋಡು
ಮೊ. 9901315963

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅಧ್ಯಕ್ಷರ್
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ

ಸದಸ್ಯರ್
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಶ್ರೀಮತಿ ಚೊಕ್ಕಾಡಿ ಪ್ರೇಮ ರಾಘವಯ್ಯ
ಶ್ರೀ ಧನಂಜಯ ಅಗೋಳಿಕಜೆ
ಶ್ರೀ ದಂಬೆಕೋಡಿ ಎಸ್. ಆನಂದ
ಡಾ. ಕೂಡಕಂಡಿ ದಯಾನಂದ
ಶ್ರೀ ಕುಸುಮಾಧರ ಎ.ಟಿ.
ಡಾ. ವಿಶ್ವನಾಥ ಬದಿಕಾನ
ಶ್ರೀ ಜಯಪ್ರಕಾಶ್ ಮೋಂಟಡ್ಕ ಬಿಳಿನೆಲೆ
ಶ್ರೀ ಪುರುಷೋತ್ತಮ ಕಿರ್ಲಾಯ
ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು
ಶ್ರೀ ಕಿರಣ್ ಕುಂಬಳಚೇರಿ
ಶ್ರೀ ಭರತೇಶ ಅಲಸಂಡೆಮಜಲು

ರಿಜಿಸ್ಟ್ರಾರ್
ಶ್ರೀ ಚಿನ್ನಸ್ವಾಮಿ

ದಖ್ಖಿಣ ಪೀಠಭೂಮಿ

ಪ್ರವಾಸ ಎಂಬ ಮಾತ್ ಕೆಬಿಗೆ ಬಿದ್ದರೆ ಸಾಕ್, ಯಾರಿಗೆ ಕೆಬಿ ನೆಟ್ಟಂಗೆ ಆಕಿಲೆಂತೇಳಿ. ಇನ್ನ್ ಪ್ರವಾಸ ಹೋದುಂತಾಕನ ಅದೂ ಕಾಲೇಜ್ ದಿನಗಲ್ಲಿ ಅಂದರೆ ಆಗುವ ಕುಸಿ ಅಷ್ಟಿಷ್ಟಲ್ಲ. ಅದರ ಮಜನೇ ಬೇರೆ. ಆದರೆ ಒಂದು ಪ್ರವಾಸ ಹೋಗಿ ಬಾದು ಎಷ್ಟ್ ಪ್ರಯಾಸಂತ ಗೊತ್ತಾದು ಹೋದ ಮೇಲೆನೆ. ಯಾತ್ರೆನೂ ಅಷ್ಟೆ ಅಪಾಯ ಹೇಂಗೂ ಉಟ್ಟು. ಸಾಕಷ್ಟ್ ತಯಾರಿನೂ ಬೇಕಾದೆ.

ಪ್ರವಾಸಂತ ಹೇಳುದಕ್ಕೂ, ಯಾತ್ರೆಂತ ಹೇಳುದಕ್ಕೂ ದೊಡ್ಡ ವ್ಯತ್ಯಾಸ ಇಲ್ಲದಿದ್ದರೂ, ಅವೆರಡ್ ಒಂದೇ ಅಂತಲೂ ಹೇಳುವ ಹಾಂಗಿಲ್ಲೆ. ಯಾತ್ರೆ ಎಂಬ ಪದ ಕೆಬಿಗೆ ಬೀಳಿಕಾಕನ ಒಂದು ಪವಿತ್ರ ಬಾವನೆ ಹುಟ್ಟಿದೆ. ಯಾರೋ ಕೆಲವು ಜನ ಕಾಶಿಗೋ, ರಾಮೇಶ್ವರಕ್ಕೋ, ತಿರುಪತಿಗೋ ಹೊರ್‍ಟೊಳೊಂತ ಅನ್ನಿದೆ. ಪ್ರವಾಸಂತೇಳಿರೆ ಹಾಂಗಲ್ಲ. ಬೇರೆ ಬೇರೆ ಕಾರಣಕ್ಕಾಗಿ ಮುಖ್ಯಪಟ್ಟ ಸ್ತಳಗಳ ನೋಡಿಕೆ ಹೋದೂಂತ ಗ್ರಹಿಸಿವೆ. ಅದ್ ಚಾರಿತ್ರಿಕ ಸ್ತಳನೊ, ಕೈಗಾರಿಕಾ ಕೇಂದ್ರನೊ, ಬಂದರು ಪ್ರದೇಶನೊ, ಪ್ರಾಕೃತಿಕ ಕೇಂದ್ರನೊ ಆಗಿರುದು. ಹೀಂಗೆ ಸ್ತಳ ವಿಶೇಷನ ಕಣ್ಣಾರೆ ಕಂಡ್ ತಿಳ್ಕಂಬಕೆ ಹೋದು ಪ್ರವಾಸ. ಅದರೊಟ್ಟಿಗೆ ಪುಣ್ಯ ಸ್ತಳ ಇದ್ರೂ ಸರಿಯೆ. ಅಂತೂ ಬೇರೆ ಬೇರೆ ಪ್ರದೇಶ ಸುತ್ತುದಕ್ಕೆ ಪ್ರವಾಸಂತ ಹೇಳ್ದು. ಅದ್ ಸ್ವದೇಶನೂ ಆಗಿರ್‍ದು ವಿದೇಶನೂ ಆಗಿರ್‍ದು.

ಮತ್ತೆ ನೋಡಿ ಪ್ರವಾಸ ಆಗಿರ್‍ಲಿ, ಯಾತ್ರೆನೂ ಆಗಿರ್‍ಲಿ ಇವೆರಡರ ನಡೂಲಿ ಒಂದಿಷ್ಟ್ ವ್ಯತ್ಯಾಸ ಇದ್ರೂ, ಅವ್ಗಳ ಮೂಲಗುರಿ ಒಂದೇ ಅಂತ ನಂಗೆ ಕಂಡದೆ. ಈ ವಿಶಾಲ ಪ್ರಪಂಚದ ಉದ್ದಗಲಕ್ಕೂ ಸುತ್ತಾಡಿ ಬೌಗೋಲಿಕ ಸಂಗತಿಗಳ ನೋಡಿಕಂಡ್ ದೇಶ, ಜನ ಜೀವನ, ಬಾಸೆ, ಆಚಾರ, ವಿಚಾರ, ಸಂಸ್ಕೃತಿ, ನಾಗರೀಕತೆಗಳ ತಿಳ್ದಾಕನ ಪರಮಾತ್ಮನ ವಿಶ್ವ ರೂಪ ನಮ್ಮ ಗಮನಕ್ಕೆ ಬಂದದೆ. ನಮ್ಮ ಹೃದಯನೂ ವಿಶ್ವದಸ್ಟ್ ವಿಶಾಲ ಆದೆ. ಆಗ ನಮ್ಮ ಸಣ್ಣತನ, ಸಂಕುಚಿತ ಮನ್ಸ್, ತಾನಾಗಿ ಮಾಯ ಆದೆ. ಎಲ್ಲ ದೇಶ, ಬಾಸೆ, ಕುಲ, ಜಾತಿ, ಮತ, ಕರ್ಮ, ಬೇದ ಇಲ್ಲದೆ ಪ್ರೀತಿಂದ ಬರಮಾಡಿಕಂಡ್ ಸರ್ವ ಸಮತಾ ಬಾವನೆಂದ ಕೂಡಿ ಜೀವನ ನಡ್ಸಿರೆನೇ ಯಾತ್ರೆ ಪ್ರವಾಸಗಳ ಪೂರ್ತಿ ಪಲ ಬಾತ್‌ಂತ ತಿಳ್ಕಂಕ್. ಆಗ ಕುವೆಂಪುನವು ಹೇಳ್ದಾಂಗೆ ವಿಶ್ವ ಮಾನವ ಮಟ್ಟಕ್ಕೆ ಏರಿಕೆನೂ ಆದೆ.

ಹಾಂಗೆನೆ, ನೋಡಿ, ಜೀವನ ಅಂದರೆ ಏನ್ ? ಜೀವನವೂ ಯಾತ್ರೆಗಳ ಒಂದು ಸಮೂಹ ಅಲ್ಲನೊ ? ಎಲ್ಲ ವಿಷಯಗಳ ಸೇರ್ಸಿಕಂಡ್ ಎಲ್ಲ ವಿಚಾರಗಳಲಿ ದೊಡ್ಡದಾದ್ ಜೀವನ ಯಾತ್ರೆ. ಕ್ರಿಶ್ಚಿಯನ್ ಮತ್ತು ಇಸ್ಲಾಮ್ ಮತಗಳ ಪ್ರಕಾರ ಜನ್ಮಾಂತರಗ ಇಲ್ಲೆ ಯಾ ಅವುಗಳ ಬಗ್ಗೆ ಸ್ಪಷ್ಟತೆ ಇಲ್ಲೆ. ಅವರ ಪ್ರಕಾರ ನಾವೆಲ್ಲ ದೇವ್ರಲ್ಲಿ ಅಡಕವಾಗಿದ್ದವು. ಈ ಬೂಮಿಗೆ ಬಂದ್ ಕೆಲ ಕಾಲ ಇದ್ದ್ ಮತ್ತೆ ಪುನ ದೇವರಲ್ಲಿಗೇ ಹೋಗಿ ಒಂದಾದವೆ ಅಂತ ಅವು ನಂಬುದು. ಈ ನಂಬಿಕೆಯ ಪ್ರಕಾರ ಅವಂಗೆ ತಿಳ್ದೊ ತಿಳಿಯದೆನೊ ಸತ್ತಮೇಲೆ ದೇವರಲ್ಲಿಗೆ ಪಯಣ ಬೆಳ್ಸಿವೆ. ಆದ್ರೆ ನಮ್ಮ ಅಂದರೆ ಹಿಂದೂ ಮತ ದರ್ಮದ ಪ್ರಕಾರ ಜನ್ಮ ಜನ್ಮಾಂತರಗಳ ಮೂಲಕ ಆತ್ಮ ಸುದ್ದ ಮಾಡಿಕಂಡ್ ಕಡೆಗೆ ದೇವರ ಸೇರ್ದುಂತ ನಂಬಿಕೆ. ಅದನ್ನೆ ನಾವು ಮುಕ್ತಿ ಅಂತ ಹೇಳ್ದು.

ಇನ್ನೊಂದು ಯಾತ್ರೆನೂ ಉಟ್ಟು. ಅದ್ ಜೀವನ ಯಾತ್ರೆಗೆ ಬೆಳ್ಕ್ ಕೊಡುವಂತದ್ದ್. ತುಂಬಾ ಹಿಂದೆ ಸರ್ ಸಿ.ಆರ್. ರೆಡ್ಡಿಂತೇಳೊವು ಕಾಲೇಜ್‌ಲಿ ಇಂಗ್ಲಿಷ್ ಪಾಠ ಮಾಡಿಕಾಕನ ತರಗತಿಲಿ ಮಕ್ಕಳಿಗೆ 'Make a Pilgrimage to the Library' ಅಂತ ದೊಡ್ಡ ಸ್ವರಲಿ ಉಪದೇಶ ಕೊಡುತಿದ್ದೊಗಡ. ಈ ಯಾತ್ರೆ ಮಾಡ್ದೊವೆಲ್ಲ ವಿದ್ಯಾವಂತರಾಗಿ ಒಳ್ಳೆ ಬದ್ಕ್‌ನ ನಡ್ಸಿಯೊಳೊ. ಆದ್ರೆ ಈ ಕಾಲದ ಮಕ್ಕಳ್ ಅಂತ ಯಾತ್ರೆ ಹೋಕೆ ಮನ್ಸ್ ಮಾಡ್ದು ಕಡಿಮೆಂತ ಹೇಳಕ್.

ಇನ್ನ್ ಯಾತ್ರೆ ಎಂಬ ಪದನ ವ್ಯಂಗ್ಯ ಆಗಿ ಉಪಯೋಗಿಸುವ ಕ್ರಮ ನೀವ್ಗೆ ಗೊತ್ತಿರ್ದು. ಯಾರಾದರೊಬ್ಬ ಸತ್ತರೆ 'ಅಂವ ಯಾತ್ರೆ ಹೊರ್ಟತ್'ಂತ ಹಂಞ ಹಗ್‌ರಾಗಿ ಹಂಞ ನಗೆ ಬೆರ್ಸಿ ಹೇಳಿ ಬುಟ್ಟವೆ. ಈ ಯಾತ್ರೆ ಎಲ್ಲ ಯಾತ್ರೆಗಿಂತ ದೊಡ್ಡದ್ ಮತ್ತು ಕಡೆ ಯಾತ್ರೆ.

ಇನ್ನ್ ವರಾನ್ವೇಷಣೆ, ವದೂ ಅನ್ವೇಷಣೆ, ಅಂತ ಉಟ್ಟಲ್ಲ, ಅಂದರೆ ಗೂಡೆಗೆ ಒಂದು ಹೈದನ ಹುಡ್ಕುದು, ಇಲ್ಲರೆ ಹೈದಂಗೆ ಒಂದು ಗೂಡೆನ ಹುಡ್ಕುದು. ಇದು ಕೂಡ ಒಂದು ತರದ ಯಾತ್ರೆನೆ. ಹೈದಂಗೆ ಗೂಡೆ ಹುಡ್ಕುದಕ್ಕಿಂತ ಗೂಡೆಗೆ ಹೈದನ ಹುಡ್ಕುದು ಹಂಞ ಕಷ್ಟದ ಯಾತ್ರೆ. ಎಲ್ಲ ಯಾತ್ರೆಗಳಿಗೆ ಒಂದು ರೀತಿನ ತಯಾರಿ ಇದ್ದದೆ. ಆದ್ರೆ ಇದರ್ಲಿ ಗೆದ್ದ್ ಬಾಕೆ ಏನ್ ತಯಾರಿ ಬೇಕೂಂತ ಹೇಳ್ದು ಕಷ್ಟದ ಸಂಗ್ತಿ. ಹೈದಂಗೆ ಮದುವೆ ಆತ್ಲೆಂತೇಳುವ ಬದಲ್ ಗೂಡೆಗೆ ಹೈದ ಸಿಕ್ಕಿತ್ಲೆಂತ ಗೋಳು ಹೊಯ್ಕಂಬವರ ಸಂಖ್ಯೆ ಹೆಚ್ಚಿರುವ ಈ ಕಾಲಲಿ ಒಂದು ಸರೋವರ್ಲಿ ಮೀಂದ್ ಎಲ್ಲ ಪಾಪಗಳ

ಪರಿಹರ್ಸಿಕಂಡ್ರೂ ಬದರಿಲಿ ಸಾಕ್ಷಾತ್ ನಾರಾಯಣನ ದರ್ಶನ ಮಾಡಿಕಂಡ್ರೂ, ಮಾನಸ ಸರೋವರ್ಲಿ ಮುಳ್ಗಿ ದೇವತ್ವ ಪಡ್ದಿದ್ದರೂ ಈ ಯಾತ್ರೆಲಿ ಜಯ ಪಡಿದು ಸುಲಬ ಅಲ್ಲ. ದುಡ್ಡುನ ಕೊಪ್ಪರಿಗೆ ಇದ್ರೂ ಗೂಡೆಗೆ ಮೊದುವೆ ಮಾಡಿಕೆ ಆಗದವು ಒಳೊ. ಸರಸೋತಿನ ಅವತಾರದ ಹಾಂಗೆ ವಿದ್ಯಾ ಸಂಪನ್ನೆಯಾದ ಮಗಳಿಗೆ ಹೈದನ ಗೊತ್ತು ಮಾಡಿಕೆ ಒದ್ದಾಡಿದವು ಒಳೊ. ರತಿನ ಹಾಂಗೆ ಬಾರೀ ಪೊರ್ಲುನ ಗಣಿಯಾಗಿದ್ದ್ ಮನ್ಮತನಂತ ಗಂಡನೇ ಬೇಕೂಂತ ಹಟ ಇಲ್ಲದಿದ್ರೂ ಮೊದ್ವೆ ಆಗದೇ ಉಳ್ದೊವು ಒಳೊ. ವಿದ್ಯೆ, ರೂಪ, ಸಂಪತ್ತ್, ಎಲ್ಲ ಇದ್ದ್ ಹೈದ ಸಿಕ್ಕದೇ ಹೋದ ಸಂಗತಿನೂ ಉಟ್ಟು.

ಅದೆಲ್ಲ ಇರ್‍ಲಿ. ನಾನ್ ಹೇಳಿಕೆ ಹೊರ್‍ಟದ್. ಹೇಳಿಕೆ ಮನ್ಸ್ ಮಾಡ್ದ್ ಈ ಯಾವ ಯಾತ್ರೆಗಳೂ ಅಲ್ಲ. ನಾನೀಗ ನೀವ್ಗೆ ಹೇಳ್ದು ನಮ್ಮ 'ದಕ್ಷಿಣ ಭಾರತ' ಪ್ರವಾಸನ. ನೀವ್ಗೆ ಈಗಾಗಲೇ ಬೇಜಾರ್ ಆತೊ ಏನೊ. ಇಂವ ಹರಿಕತೆ ಮಾಡಿಕೆ ಹೊರ್‍ಟಾಂಗೆ ಕಂಡದೆಂತ ಆಗಿರ್‍ದು. ಇನ್ನ್ ನಾನ್ ತಡ ಮಾಡದೆ ನೇರ ವಿಷಯಕ್ಕೆ ಬನ್ನೆ.

ನಾನಾಗ ಮಡಿಕೇರಿ ಸರಕಾರಿ ಕಾಲೇಜಿಲಿ ಒಂದನೇ ವರ್ಸದ ಡಿಗ್ರಿ ಕ್ಲಾಸಿಲಿ ಓದುತಿದ್ದ ಕಾಲ. 1958ನೇ ವರ್ಸ ವಾಸ ಕಾಲೇಜಿನ ಪಕ್ಕಲೇ ಇದ್ದ ಬೋರ್ಡಿಂಗ್ಲಿ. ಅದೇ ವರ್ಸ ಅಕ್ಟೋಬರ ತಿಂಗಳ್ ತಾರೀಕ್ 17ರಂದ್ ಬೊಳ್ಪಿಗೆ ಸುಮಾರ್ 5ಗಂಟೆಗೆ ನಾವ್ಗಾಗಿ ಗೊತ್ತು ಮಾಡ್ದ ಬಸ್ಸ್ ಹತ್ತಿ ಮಡಿಕೇರಿ ಸರಕಾರಿ ಕಾಲೇಜ್ ಹತ್ರಂದ ಪ್ರವಾಸ ಹೊರ್‍ಟೊ. ಹಬ್ಬಿದ ಮಂಜ್ ಬೂದೇವಿ ಬೆಳ್ಳಿ ಸೀರೆ ಹೊದ್ದಾಂಗೆ ಕಾಂಬತಿತ್ತ್. ಆಕಾಸಂದ ಮಂಜಿನ ಸಣ್ಣ ಸಣ್ಣ ಹನಿಗ ಸಣ್ಣ ಮಳೆ ಹನಿಗಳ ಹಾಂಗೆ ಬೀಳ್ತಿತ್ತ್. ಮೂಡ್ ದಿಕ್ಕಿಲಿ ರಂಗೇರಿ ಸೂರ್ಯನ ಬರುವಿಕೆನ ಸೂಚಿಸ್‌ತಿತ್ತ್. ಚಳಿ ಜೋರಾಗಿತ್ತ್. ಬರುವ ಮಕ್ಕಳನ್ನೆಲ್ಲ ಪೇಟೆ ದಾರಿಲಿ ಅಲ್ಲಲ್ಲಿ ಹತ್ಸಿಕಂಡ್ ಮಡಿಕೇರಿಂದ ಮೈಸೂರ್ ಕಡೆ ಹೊರ್‍ಟೊ.

ನಾವ್ ಒಟ್ಟಿಗೆ ಮೂವತ್ತೊಂಬತ್ತ್ ಮಕ್ಕ ಇದ್ದೊ. ಇವರ್‍ಲಿ ಇಪ್ಪತ್ತೆರಡ್ ಮಕ್ಕ ಹೈದಂಗ, ಹದಿನೇಳ್ ಗೂಡೆಗ. ನಮ್ಮ ಪ್ರವಾಸದ ಹೊಣೆ ಹೊತ್ತ್ ಬಂದೊವು ನಮ್ಮ ಚರಿತ್ರೆ ಉಪನ್ಯಾಸಕರಾದ ಶ್ರೀ ಬಿ.ಸಿ. ಪೊನ್ನಪ್ಪನವು ಮತ್ತು ಹೊಸ ಅರ್ಥಶಾಸ್ತ್ರದ ಉಪನ್ಯಾಸಕಿಯಾದ ಕುಮಾರಿ ಅಕ್ಕವ್ವ ಮೇಡಮ್‌ನವು. ನಮ್ಮ ಇಡೀ ಪ್ರವಾಸಕ್ಕೆ ಗೊತ್ತು ಮಾಡ್ದ ಬಸ್ಸಿಲೇ ನಾವ್ ಪ್ರವಾಸ ಹೊರ್‍ಟದ್. ಬಸ್ಸ್ ಪೊರ್ಲಿತ್ತ್.

ನಮ್ಮ ಪ್ರವಾಸಕ್ಕೆ ಗೂಡೆಗಳೂ ಬಂದದರ್‌ಂದ ಒಂದಿಷ್ಟ್ ಕಳೆನೂ ಬಂದಿತ್ತ್.

ನಮ್ಮ ಕ್ಲಾಸಿನ ಯಾವ ಗೂಡೆಗಳೂ ಬಂದಿತ್ಲೆ. ಅದೇ ಬೇಜಾರ್. ಹುಡುಗರ್ಲಿ ನಾನ್, ಮುಂಡೋಡಿ ರಾಮಚಂದ್ರ ಮತ್ತು ಮಡಿಕೇರಿ ನಾರಾಯಣ ಸ್ವಾಮಿ ಮಾತ್ರ. ಉಳ್ದೋವೆಲ್ಲ ಎರಡನೇ ವರ್ಸದ ಮತ್ತು ಮೂರನೇ ವರ್ಸದ ಪದವಿ ಕ್ಲಾಸಿಲಿ ಕಲಿತಿದ್ದ ಹೈದಂಗ ಮತ್ತು ಗೂಡೆಗ.

ಮಡಿಕೇರಿಂದ ಹೊತಾರೆ ಹೊರ್ಟ ನಾವ್ ಹಾಸನ, ಅರಸೀಕೆರೆ ದಾಟಿ ಮದ್ಯಾಹ್ನ ಹೊತ್ತಿಗೆ ಬದ್ರಾವತಿ ತಲ್ಪಿದೊ. ಅಲ್ಲಿ ಇಳ್ದದೇ ಸರಿ ಯಾವ ಸೆಕೆಂತೇಳಿರೆ, ಮೈ ಬೆಂದ್ ಹೋಗುವ ಹಾಂಗೆ ಆಗ್ತಿತ್. ಆ ಉರಿ ಸೆಕೆಲೆ ಮದ್ಯಾಹ್ನದ ಊಟ ಮುಗ್ಸಿ ಮುಂದೆಗೆ ಪ್ರಯಾಣ ಬೆಳ್ಸಿದೊ.

ಹರಿಹರಲಿ : ಬದ್ರಾವತಿಂದ ಹರಿಹರಕ್ಕೆ ಹೋಗುವ ದಾರಿಲಿ ದಾವಣಗೆರೆಂದ ಒಸಿ ಮುಂದೆ ಒಂದು ದೊಡ್ಡ ಕೆರೆ ಸಿಕ್ಕಿದೆ. ಅದ್ ಯಾರೂ ಮಾಡ್ದ ಕೆರೆ ಅಲ್ಲ ಗಡ. ಪ್ರಕೃತಿ ಕೊಟ್ಟ ಕೆರೆ. ಅದ್ ಅಂದಾಜ್ ಹತ್ತ್ ಹನ್ನೆರಡ್ ಚದರ ಮೈಲಿನಷ್ಟ್ ವಿಸ್ತಾರ ಉಟ್ಟುಂತ ಹೇಳ್ದೊ. ಈ ಕೆರೆಗೆ ಸುತ್ತು ಹಾಕಿ ನಾವು ಹೋಕಾದೆ. ಶಾಂತ ಸಾಗರಂತ ಆ ಕೆರೆಗೆ ಹೆಸ್ರ್. ಹಿಂದೆ ಅದನ್ನ್ ಸೂಳೆ ಕೆರೆ ಅಂತ ಕರಿತಿದ್ದೊ. ಈ ಹೆಸ್ರ್ ಯಾಕೆ ಬಾತ್‌ಂತ ಗೊತ್ಲೆ. ನಾವು ಅಲ್ಲೆ ಹರಿಹರಲಿ ಉಳ್ಕಂಡ್ ಮಾರ್‍ನೆ ದಿನ ಬೊಳ್ಪಿಗೆ ಹೊಸ್ಪೇಟೆಗೆ ಹೊರ್ಟೊ.

ಒಂದೇ ದಿನ ಸುಮಾರ್ ಮುನ್ನೂರು ಮೈಲಿಗಳಷ್ಟ್ ದೂರ ಪ್ರಯಾಣ ಮಾಡಿದ್ದೊ. ಅಷ್ಟ್ ದೂರ ಬಸ್ಸಿಲಿ ಪ್ರಯಾಣ ಮಾಡ್ದ್ ಇದೇ ಸುರು. ತುಂಬಾ ಬೊಚ್ಚಿ ಹೋಗಿತ್ತ್. ಒಂದೇ ದಿನಲಿ ಇಸ್ಟ್ ಬೊಚ್ಚಿರೆ ನಮ್ಮ ಪ್ರವಾಸ ಮುಗಿಯಕಾಕನ ಹೇಂಗಾದುಂತ ಹೆದ್ರಿಕೆನೂ ಆತ್. ಆದ್ರೂ ಪ್ರವಾಸದ ಹುರುಪಿಲಿ ಅದೆಲ್ಲಾ ಮರೆಯಾಗಿತ್ತ್. ಹೇಂಗು ನಮ್ಮದ್ ಬಿಸಿ ರಕ್ತದ ಪ್ರಾಯ ಬಸ್ಸಿಲಿದ್ದ ರೇಡಿಯೋ ಲಾಯ್ಕಾಗಿ ಹಾಡ್ತಿತ್. ನಮ್ಮ ಗೂಡೆಗಳೂ ಹಾಡ್ತಿದ್ದೊ. ಹೈದಂಗಳಲಿ ಹಾಡವವ ನಾನ್ ಒಬ್ಬನೆ. ನಮ್ಮ ಉಪನ್ಯಾಸಕರ್ ತಮಾಸೆ ಮಾಡ್ತಿದ್ದೊ. ನಮ್ಮ ಮೇಡಮ್‌ನವೂ ನಮ್ಮೊಂದಿಗೆ ಸೇರ್ತಿದ್ದೊ. ಹೊತ್ತು ಹೋದೇ ಗೊತ್ತಾಗ್‌ತಿತ್ಲೆ.

ನಾನ್ ರೈಲ್‌ಲಿ ಪ್ರಯಾಣ ಮಾಡಿತ್ಲೆ. ರೈಲ್ ಪ್ರಯಾಣ ಮಾಡದವಂಗೆ ಹಡ್ಗಿನ ಪ್ರಯಾಣ ಹೇಂಗೆ ಗೊತ್ತಾದು. ವಿಮಾನ ಪ್ರಯಾಣಂತೂ ಕನಸಿನ ಗಂಟಾಗಿತ್ತ್. ಆದ್ರೂ ಬಸ್ಸಿನ ಪ್ರಯಾಣದ ಮಜನೇ ಬೇರೆಂತ ನನ್ನ ನಂಬಿಗೆ. ಬಸ್ಸಿಲಿ ಪ್ರಯಾಣಿಸಿಕನ ಇಕ್ಕಡೆಲಿ ಕಾಂಬ ಪ್ರಕೃತಿನ ನೋಟ, ಗಿಡ, ಮರ, ಹೊಲ, ಸಸ್ಯರಾಶಿ, ಜನಜಂಗುಳಿ, ವೇಸ, ಬಾಸೆ ಎಲ್ಲ ಕಂಡ್ ಹೊಸ ಹೊಸ ವಿಷಯಗಳ ತಿಳಿಯಕಾದೆ. ರೈಲ್ ಪ್ರಯಾಣಲಿ ಈ ಅವಕಾಶ ಇದ್ರೂ ವಿಮಾನ ಪ್ರಯಾಣಲಿ ಅದ್ ಇಲ್ಲೆ.

ಹೊಸಪೇಟೆ ಕಡೆಗೆ :

ಹರಿಹರಂದ ಹೊಸಪೇಟೆಗೆ ಹೆಚ್ಚ್‌ಕಡಿಮೆ ಎಪ್ಪತ್ತೈದ್ ಮೈಲ್. ಹರಿಹರಂದ ಬೊಳ್ಪಿಗೆ ಹೊರ್ಟೊವು ಹೊಸಪೇಟೆ ಮುಟ್ಟಿಕಾಕನ ಹತ್ತ್‌ಗಂಟೆ ಆಗಿತ್ತ್. ಹೊಟ್ಟೆ ಚುರುಗುಟ್ಟ್‌ತಿತ್ತ್. ಬೊಳ್ಪಿಗಿನ ಕಾಪಿ ತಿಂಡಿ ಮುಗ್ಸಿಕಂಡ್ ಅಲ್ಲಿಗೆ ಹತ್ರ ಇರುವ ತುಂಗಬದ್ರ ಆಣೆಕಟ್ಟ್ ನೋಡಿಕೆ ಹೋದೊ.

ನಾ ನೋಡ್ದ ಸುರೂನ ಆಣೆಕಟ್ಟ್ ಇದ್. ಸಾಕಷ್ಟ್ ದೊಡ್ಡದಾಗುಟ್ಟು. ಆಣೆಕಟ್ಟಿನ ಅಗಲ ನಲುವತ್ತೈದ್ ಅಡಿ; ಉದ್ದ ಹತ್ರ ಹತ್ರ ಒಂದು ಮೈಲ್‌ಂತೇಳಕ್. ಅದರ ಒಂದು ಕೊಡಿಗೆ ಮೈಕುಂಠ ಅಂತ ಹೆಸ್ರ್. ಇನ್ನೊಂದು ಕೊಡಿಗೆ ಕೈಲಾಸ ಅಂತ ಹೆಸ್ರ್. ಕರ್ನಾಟಕ ಸರ್ಕಾರ ಮತ್ತು ಆಂದ್ರ ಸರ್ಕಾರ ಎರ್ಡ್ ಸೇರಿಕಂಡ್ ಮಾಡ್ದ ಆಣೆಕಟ್ಟ್. ಹಾಂಗಾಗಿ ನೀರ್ಲಿ ಎರ್ಡೂ ರಾಜ್ಯಗಳಿಗೆ ಪಾಲುಟ್ಟು. ವೈಕುಂಠಂತೇಳುವ ಒಂದು ಕೊಡಿ ಕರ್ನಾಟಕಕ್ಕೆ ಸೇರ್ದ್ ; ಕೈಲಾಸಂತೇಳ್ವ ಕೊಡಿ ಆಂಧ್ರಕ್ಕೆ ಸೇರ್ದ್. ಎರ್ಡೂ ಕೊಡಿಗಳಲ್ಲಿರುವ ಕಾಲುವೆಗಳ್ಲಿ ಹರಿವ ನೀರ್ ಆಯಾಯ ರಾಜ್ಯಕ್ಕೆ ಹರ್ದದೆ.

ಈ ಆಣೆಕಟ್ಟ್‌ಂದಾಗಿ ಎರ್ಕ್‌ವ ನೀರ್ ಸುಮಾರ್ 60ಚ.ಕೀ. ಮೀಟರ್‌ಗಳಷ್ಟ್ ವಿಸ್ತಾರ. ಈ ಎರ್ಡ್ ರಾಜ್ಯಗ ತಮ್ಮೊಳಗೆ ಹಂಚಿಕಣಕಾದ ನೀರ್‌ನ ಪ್ರಮಾಣದ ಬಗ್ಗೆ ಇರುವ ತಕರಾರ್ ಇನ್ನು ತೀರ್ಮಾನ ಆತ್ಲೆ ಗಡ.

ಈ ಆಣೆಕಟ್ಟ್ ವಿವಿದೋದ್ದೇಶ ಯೋಜನೆಯ ಅಡಿಲಿ ಕಟ್ಟಿದ ಆಣೆಕಟ್ಟ್. ಅಂದರೆ ಬರೇ ನೀರಾವರಿ ಅಲ್ಲದೆ ವಿದ್ಯುತ್ ತಯಾರಿ, ಮೀನು ಸಾಕಣೆ, ಜಲಯಾನ ಇತ್ಯಾದಿ ಇದರ ಗುರಿ. ಇಲ್ಲಿ ಎರ್ಕಿದ ನೀರ್ನ ಮೇಲೆ ಮದ್ಯಾಹ್ನದ ಬಿಸಿಲ್ ಬೀಳಿಕಾಕನ ಬೆಳ್ಳಿನ ಹಾಸಿಗೆ ಹಾಸಿದ ಹಾಂಗೆ ಕಂಡದೆ. ಆಣೆಕಟ್ಟಿನ ಕೆಳಗಡೆಲಿ ಇರುವ ಹೂತೋಟ ಬಾರಿ ಪೊರ್ಲಾಗುಟ್ಟು. ಇಷ್ಟೆಲ್ಲಾ ನೋಡಿ ಆಕಾಕನ ನಡು ಮದ್ಯಾಹ್ನ ಆಗಿತ್ತ್. ಹೊಟ್ಟೆ ಹಸಿತಿತ್ತ್ ಉಂಬಕ್ಕೆ ಹೊಸ್ಪೇಟೆಗೆ ಹೋದೊ. ಹೊಸ್ಪೇಟೆ ಹಾಂಗೆ ಬೆಳೆವ ನಗರ. ಹೊಸ ಹೊಸ ಕಟ್ಟಡಗ ಈಗ ಏಳ್ತಾ ಉಟ್ಟು. ಅಕ್ಕಪಕ್ಕಲಿರುವ ಹರ್ಕ್‌ಮುರ್ಕ್ ಕಟ್ಟಡಗ ಇದ್ದ ರೂಪಕ್ಕೆ ಅಪಚಾರ ಆಗಿತ್ತ್.

ಹಂಪಿ : ಹೊಸಪೇಟೆಂದ ಹಂಪಿಗೆ ಬರೇ ಎಂಟ್‌ಮೈಲ್ ದೂರ. ಹಂಪಿ ವಿಜಯನಗರ ಸಾಮ್ರಾಜ್ಯದ ಅವಶೇಷ ಇರುವ ಪ್ರದೇಶ. ಅಂದಿನ ಕಾಲದ ರಾಜದಾನಿ. ಇಲ್ಲಿ ಇಂದ್ ನಾವ್ ಕಾಂಬೊದು ಅಳ್ದ್ ಉಳ್ದ ಅವಶೇಷ ಮಾತ್ರ. ಒಂದು ಕಾಲಲಿ ಸಂಪತ್ ಸಮೃದ್ಧಿಂದ ಕೂಡಿದ್ದ, ಜನ ತುಂಬಿಕಂಡಿದ್ದ

ರಾಜ್ಯದ ರಾಜದಾನಿ. ಈಗ ಕಾಡ್ ಬೆಳ್ದ್ ನರಿ ನಾಯಿಗಳಿಗೆ ಆಸರೆ ಆಗುಟು. ಹಿಂದೆ ರಾಜ ಬಟರ ವೀರ ಮಾತ್ ಕೇಳ್ತಿದ್ದಲ್ಲಿ ಈಗ ನರಿ ನಾಯಿಗಳ ಕೂಗು ಕೇಳ್ತಿದ್ದದೆ. ಸಿರಿ ಸಂಪತ್ತಿಂದ ತುಂಬಿ ತುಳುಕುತಿದ್ದ ನಾಡ್ ಎಷ್ಟರಮಟ್ಟಿಗೆ ಹಾಳಾದುಂತ ನೋಡೊಕುತ್ತಾದರೆ ಹಂಪಿಗೆ ಹೋಕು.

ವಿಜಯನಗರ ಸಾಮ್ರಾಜ್ಯಂತ ಜಗತ್ತಿಲಿ ಹೆಸ್‌ರ್ ಪಡ್ದ ಸಾಮ್ರಾಜ್ಯದ ಮುಖ್ಯ ನಗರ ಇಂದ್ ಹಂಪಿತೇಳ್ವ ಹೆಸ್ರ್‌ಂದ ಹಾಳ್ ಕೊಂಪೆಯಾಗಿ ಇರುದರ್ನ ನೋಡಿಕಾಕನ ಯಾರಿಗೇ ಆಗಲಿ ಮರುಕ ಹುಟ್ಟದೇ ಇರದ್. ಅಂವ ಕಂನಡಿಗ ಆಗಿದ್ದರಂತೂ ಹೇಳುದೇ ಬೇಡ. ಹೇಂಗಿದ್ದ ಸಾಮ್ರಾಜ್ಯ ಹೆಂಗಾಗಿ ಹೋತಲ್ಲ ! ಅಂತ ಬೇಜಾರ್ ಆದೆ.

ವಿಜಯನಗರ ಸಾಮ್ರಾಜ್ಯ ಸ್ತಾಪನೆ ಆದ್ದ್ ಒಂದು ವಿಚಿತ್ರ ಸಂಗತಿಂದ ಅಂತ ಹೇಳ್ವೆ. ಆನೆ ಗುಂಡಿ ಎಂಬ ಜಾಗಕ್ಕೆ ಸರಿ ವಿರುದ್ದ ದಿಕ್ಕಿಲಿ ತುಂಗಬದ್ರಾ ನದಿನ ದಕ್ಷಿಣ ದಂಡೆಲಿರುವ ಈ ಜಾಗಲಿ ಒಮ್ಮೆ ಬೇಟೆ ಮಾಡಿಕಾಕನ ನಾಯಿ ಮೊಲನ ಬೆರ್ಸಿಕಂಡ್ ಬರ್ತಿತ್ತ್. ಆ ಜಾಗಕ್ಕೆ ಬಾಕಕನ ಮೊಲ ಓಡುದರ ನಿಲ್ಲಿಸಿ ತಿರ್ಗಿ ನಿಂತ್ ನಾಯಿನ ಎದ್‌ರಿಸಿತ್ ಗಡ. ಈ ಸಂಗತಿನ ಕೇಳಿದ ವಿದ್ಯಾರಣ್ಯ ಯತಿಗ ಅದೇ ಜಾಗನ ವೀರಕ್ಷೇತ್ರಂತ ಕರ್ದ್ ಹುಕ್ಕ ಮತ್ತು ಬುಕ್ಕ ಎಂಬ ಅಣ್ಣ ತಮ್ಮಂದಿರ ಕರ್ದ್ ಅವರ ಸಹಾಯಂದ ಹಿಂದೂ ಸಾಮ್ರಾಜ್ಯ ಸ್ತಾಪನೆ ಮಾಡ್ದೊ ಅಂತ ಹೇಳುವೆ. ಮುಂದೆ ಅದ್ ಬೆಳ್ದ್ ವಿಜಯನಗರ ಅಂತ ಹೆಸ್ರಿಗೆ ಬಾತ್. ಈ ನಾಯಿ ಮೊಲದ ಕತೆಗ ಬೇರೆ ಬೇರೆ ಕಡೆಗಳಲಿ ಸಹ ಉಟ್ಟು. ಹಾಂಗೇನೆ ಈ ಸಾಮ್ರಾಜ್ಯ ಸ್ಥಾಪನೆ ಬಗ್ಗೆ ಕೂಡ ಬೇರೆ ಬೇರೆ ಅಬಿಪ್ರಾಯಗ ಉಟ್ಟು. ಸಾಮ್ರಾಜ್ಯ ಸ್ತಾಪನೆ ಮಾಡಿದವರ್ಲಿ ಐದ್‌ಜನ ಅಣ್ಣತಮ್ಮಂದಿರ್ ಇದ್ದೊ. ಅವರ್ಲಿ ಹರಿಹರ ಮತ್ತು ಬುಕ್ಕ ಮುಖ್ಯಸ್ತರ್‌ಂತ ಚರಿತ್ರಕಾರರ್ ಹೇಳುವೆ. ಇದನೆಲ್ಲ ನಮ್ಮ ಚರಿತ್ರೆ ಮಾಸ್ಟ್ರ ಬಿ.ಸಿ. ಪೊನ್ನಪ್ಪನವು ಕ್ಲಾಸಿಲಿ ಬಾರಿ ಲಾಯ್ಕಾಗಿ ವಿವರಿಸಿದ್ದೊ. ಅವರ ಪಾಟ ಅಂದ್ರೆ ನಂಗೆ ಬಾರಿ ಕುಸಿ.

ಚರಿತ್ರೆ ಕಾಲಲಿ ವಿಜಯನಗರ ಸಾಮ್ರಜ್ಯದ ರಾಜದಾನಿ ಅಂದಿನ ಜಗತ್ತಿನ ದೊಡ್ಡ ನಗರಗಳಲ್ಲಿ ಒಂದಾಗಿತ್ತ್‌ಂತ ಅಲ್ಲಿಗೆ ಬಂದಿದ್ದ ಪ್ರವಾಸಿಗರ್ ಬರ್ದ್ದೊಳೊ. ನಗರ ಅರುವತ್ತ್ ಚದರ ಮೈಲ್‌ಗಳಷ್ಟ್ ವಿಸ್ತಾರ ಹೊಂದಿತ್ತ್‌ಗಡ. ನಗರ ಬೀದಿಗಳಲ್ಲಿ ವಜ್ರ, ವೈಡೂರ್ಯ, ಮುತ್ತು, ರತ್ನಗಳನ್ನ್ ರಾಶಿ ರಾಶಿ ಹಾಕಿ ಮಾರುತಿದ್ದೊಂತೇಳುವೆ. ಜಗತ್ತಿನ ಮಹಾ ಸಂಪತ್ತಿನ ನಗರಗಳಲ್ಲಿ ಇದೂ

ಒಂದು ಗಡ. ಈಗ ನಗರದ ಎಲ್ಲಾ ಅವಶೇಸ ಸರಿಯಾಗಿ ನೋಡೊಕುತ್ತಾದರೆ ದಿನ, ವಾರ, ತಿಂಗ ಅಲ್ಲ ವರ್ಷನೇ ಬೇಕಾದು. ಆದರೆ ನಾವ್ಗೆ ಅಷ್ಟ್ ಸಮಯ ಎಲ್ಲಿಟ್ಟು? ಬೇಗ ಬೇಗ ನೋಡಿಕಂಡ್ ಹೊರಡಕಾಗಿತ್ತ್.

ಹೊಸಪೇಟೆಂದ ಹಂಪಿಗೆ ಹೋಕಾಕನ ದಾರಿನ ಪಕ್ಕಲಿ ಅನಂತಶಯನ ಎಂಬ ದೇವಸ್ತಾನ ಸಿಕ್ಕಿದೆ. ಈ ದೇವಸ್ತಾನನ ಕಟ್ಟಿಸಿದಂವ ಕೃಷ್ಣ ದೇವರಾಯಂತೇಳ್ವೆ. ಈ ದೇವಾಲಯುನ ಕಟ್ಟಿದ ರೀತಿ ಇತರ ದೇವಾಲಯಗಳಿಗಿಂತ ತುಸು ಬೇರೆ. ನೋಡಿಕೆ ಬಾರಿ ಪೊರ್ಲುಟ್ಟು. ಇದಕ್ಕಿಂತ ಹಂಞ ಮುಂದೆ ರಾಜರಾಣಿಯರ್ ಮೀಯುವ ಕಟ್ಟಡ ಉಟ್ಟು. ಇದರ್‌ಂದ ಮುಂದೆ ಅರಮನೆ, ದರ್ಬಾರ್ ಮಹಲ್ ಇರುವ ಜಾಗ. ಈಗ ಅಲ್ಲಿರುದು ಕಟ್ಟಡದ ಅಡಿಪಾಯ ಮಾತ್ರ. ಅಡಿಪಾಯದ ಪಕ್ಕಗಳಲ್ಲಿರುವ ಕೆತ್ತಿದ ಕೆತ್ತನೆಗ ಈಗಳೂ ಆಕರ್ಷಣೆನ ಕಳ್ಕಂತ್ಲೆ. ಅರಮನೆನ ಮುಂಗಡೆ ನೀರ್ ಸಾಗ್ಸಿಕೆ ಮಾಡ್ದ ಕಲ್ಲಿನ ನಳ್ಳಿಗ ಉಟ್ಟು. ಕುದುರೆಗಳಿಗೆ ಕುಡಿಯುವ ನೀರ್ ಕೊಡಿಕೆ ಮಾಡ್ದ ದೊಡ್ಡ ದೊಡ್ಡ ಕಲ್ಲಿನ ಮರ್ಗಿಲ್‌ಗ ಉಟ್ಟು. ಅಲ್ಲಿ ನಿಂತ್ ನೋಡಿರೆ ದೂರಲಿ ಹೇಮಕೂಟಂತೇಳ್ವ ಪರ್ವತ ಕಂಡದೆ. ರಾಮಾಯಣದ ಕಾಲಲಿ ಸುಗ್ರೀವ ಮತ್ತು ಅವನ ಆಪ್ತರ್ ಅಲ್ಲಿಯೇ ವಾಲಿಗೆ ಹೆದ್ರಿ ಇದ್ದದ್ ಗಡ. ಹೇಮ ಕೂಟದ ಬಲಕ್ಕೆ ಕೃಷ್ಣದೇವಾಲಯನೂ ಎಡಕ್ಕೆ ವಿಷ್ಣು ದೇವಾಲಯನೂ ಉಟ್ಟು. ಕಲ್ಲಿಂದ ಕೆತ್ತಿ ಮಾಡ್ದ ಸಾಸಿವೆ ಕಾಳ್ ಗಣಪತಿ ಇರುದು ಆ ಗುಡ್ಡೆನ ಕೆಳಬಾಗಲಿ. ಸಾಸಿವೆ ಕಾಳ್‌ಂತೇಳ್ವ ಹೆಸ್ರ್ ಸಣ್ಣ ಗಾತ್ರನ ಸೂಚಿಸಿದೆ. ಆದರೆ ಆ ಮೂರ್ತಿ ಮಾತ್ರ ತುಂಬಾ ದೊಡ್ಡದ್. ಇನ್ನೊಂದು ಕಡೆ ಕಡಲೆಕಾಳು ಗಣಪತಿಂತ ಉಟ್ಟು. ಅದು ಕೂಡ ಅಷ್ಟೇನು ಸಣ್ಣದಲ್ಲ. ಆದರೆ ಸಾಸಿವೆಕಾಳು ಗಣಪತಿಯಸ್ಟ್ ದೊಡ್ಡದಲ್ಲ. ಇದುವೇ ಹೆಸ್ರಿಗೂ ಗಾತ್ರಕ್ಕೂ ಇರುವ ತಮಾಸೆ. ಇವೆರಡೂ ಒಂದೊಂದೇ ಕಲ್ಲಿನ ಮೂರ್ತಿಗ.

ಕೃಷ್ಣ ದೇವಾಲಯದ ಬಲ ಪಕ್ಕಲಿ ಉಗ್ರ ನರಸಿಂಹ ಎಂಬ ದೊಡ್ಡ ಒಂದೇ ಕಲ್ಲಿನ ಮೂರ್ತಿ ಉಟ್ಟು. ಇದರ್ನ ಕ್ರಿ.ಶ. 1527ರಲ್ಲಿ ಮಾಡ್ದ್‌ಗಡ. ಆ ಮೂರ್ತಿನ ಕೈ, ಮೋರೆ ಹಂಞ ಹಾಳಾಗುಟ್ಟು. ಅದರ ಪಕ್ಕಲಿ ಒಂದು ದೊಡ್ಡ ಶಿವಲಿಂಗ ಉಟ್ಟು. ಅಲ್ಲಿ ತುಂಗಬದ್ರಾ ಹಳ್ಳದ ಕಾಲುವೆನೂ ಉಟ್ಟು. ಹಿಂದೆ ಕಾಲುವೆನ ನೀರ್ ಯಾಗೋಳು ಶಿವಲಿಂಗನ ತೊಳ್ದ್ ಸುದ್ದ ಮಾಡ್ತಿತ್ತ್ ಗಡ. ಅಲ್ಲಿ ಕಮಲಾಪುರಕ್ಕೆ ಹೋಗ್ವ ದಾರಿಲಿ ಮೇಲ್ ಪಕ್ಕಲಿ ನೆಲದ ಅಡಿಲಿ ಬೂಗರ್ಬ ವಿರೂಪಾಕ್ಷ ದೇವಸ್ತಾನ ಉಟ್ಟು. ಅಲ್ಲಿನೆ ತುಂಬಾ ಶಿವನ ಮೂರ್ತಿಗ

ಒಳದ್. ಇಲ್ಲಿ ಕೂಡ ಕಾಲುವೆ ನೀರ್ ಮೂರ್ತಿಗಳನ್ನ ತೊಳ್ದ್ ಸುದ್ದ ಮಾಡ್ತಿತ್‌ಗಡ.

ಹಂಪಿಗೆ ನೀವ್ ಹೋದರೆ ತಪ್ಪದೆ ನೋಡಿಯೇ ನೋಡಕಾದ್ದ್ ವಿರೂಪಾಕ್ಷ ದೇವಸ್ತಾನ ಮತ್ತು ವಿಜಯ ವಿಠಲ ದೇವಸ್ತಾನ. ಅವೆರಡ್ ಬಾರೀ ಪೊರ್ಲುನ ಕಟ್ಟಡಗ. ನಾವ್ ಕನ್ನಡಲಿ ಹೇಳಿವೆ ಅಲ್ಲ ಭವ್ಯ, ಅದ್ಭುತ, ಸುಂದರ ಅಂತ ಹಾಂಗುಟ್ಟು. ಅಲ್ಲಿನ ಶಿಲ್ಪ ಕಲೆಗಳ ಕೆತ್ತನೆ ಅದೇನ್ ಪೊರ್ಲು. ಅದೇನ್ ಕೈ ಚಳಕ. ನೋಡ್ತಾ ಇದ್ದರೆ ನಾವ್ ನಮ್ಮನ್ನೇ ಮರ್ತ್ ಬುಟ್ಟವೆ. ವಿರೂಪಾಕ್ಷ ದೇವಸ್ತಾನದ ಮಹಾದ್ವಾರಲಿ ಗೋಪುರ ಉಟ್ಟು. ಅದರ ಎತ್ತರ ನೂರ ಅರುವತ್ತೈದಡಿ. ಅದರ ಕೊಡಿವರೇಗೆ ಹತ್ತಿಕೆ ಮೆಟ್ಲ್‌ನೂ ಉಟ್ಟು. ದೇವಸ್ತಾನದ ಒಳಗಿನ ಆಯ ಇನ್ನೂರ ಎಂಟ್ ಅಡಿ ಉದ್ದ ನೂರ ಮೂವತ್ನಾಲ್ಕ್ ಅಡಿ ಅಗಲ. ದೇವಸ್ತಾನದ ನಡು ಬಾಗಲಿ ತುಂಗಾಬದ್ರಾ ಹಳ್ಳದ ಕಾಲುವೆ ಹರ್ದ್ ಹೋದೆ. ದೇವಾಲಯದ ಒಳಗಿನ ಗೋಡೆಗಳ್ಲಿ ಪೊರ್ಲುನ ಬಣ್ಣದ ಚಿತ್ರಗಳ ನೋಡಕ್. ಇದೇ ದೇವಸ್ತಾನದ ಆವರಣದ ಒಳಗೆ ಬುವನೇಶ್ವರಿ ಮತ್ತು ಗುಲಗಿಂಗಿ ಮಹಾದೇವಸ್ವಾಮಿಯೆಂಬ ಎರ್ಡ್ ಬೇರೆ ಬೇರೆ ದೇವಸ್ತಾನಗ ಉಟ್ಟು. ಇದರ ಹಿಂದ್‌ಗಡೆ ವಿದ್ಯಾರಣ್ಯರ್ ತಪಸ್ಸ್ ಮಾಡ್ತಿದ್ದ ಲೋಕಪಾವನ ತೀರ್ಥಂತೇಳುವ ಜಾಗ ಇರುದು. ಇದನ್ನೆಲ್ಲಾ ಕಟ್ಟಿಸಿದ್ ಕೃಷ್ಣದೇವರಾಯಂತೇಳುವೆ. ಇಲ್ಲಿ ಆಳ್ದ ಅರಸರಲ್ಲಿ ಇವನೇ ದೊಡ್ಡ ಹೆಸ್ರ್ ಪಡ್ದಂವ.

ವಿಜಯವಿಠಲ ದೇವಸ್ತಾನ ಕೂಡ ಕಟ್ಟಿಸಿದ್ ಕೃಷ್ಣದೇವರಾಯನೆ. ಇಲ್ಲಿರುವ ಶಿಲ್ಪಕಲೆ ಪ್ರಪಂಚಲೇ ಬಾರಿ ಪೊರ್ಲುಂತೇಳುವೆ. ವಿದೇಶಿ ಪ್ರವಾಸಿಗರೆ ಹಾಂಗೆ ಹೇಳಿಯೊಳೊ. ಅದರ ಪೊರ್ಲುನ ಸವಿಯೊಕುಂತಾದರೆ ನೀವು ಕಣ್ಣಾರೆ ನೊಡೊಕು. ದೇವಸ್ತಾನದ ದೊಡ್ಡ ಪ್ರತಿ ಕಂಬಗಳ್ಲಿ ಸಣ್ಣ ಗಾತ್ರದ ಬೇರೆ ಬೇರೆ ಏಳ್ ಕಂಬಗ ಒಳೊ. ನಾವು ಆ ಕಂಬಳ್ನ ತಟ್ಟಿರೆ ಬಾರತೀಯ ಸಂಗೀತದ ಏಳ್ ಸ್ವರಗ ಹೊರ್ಡ್ತದೆ. ಇದೇ ದೇವಸ್ತಾನದ ನಡೂಲಿ ಒಂದೇ ಕಲ್ಲಿಂದ ಕೆತ್ತಿ ಮಾಡ್ದ 'ಕಲ್ಲು ತೇರು' ಎಂಬ ರತ ಉಟ್ಟು. ಅದರ ಕೊಡಿಲಿ ಬಾರಿ ಲಾಯ್ಕಾದ ಕೆತ್ತನೆಗ ಕಂಡದೆ. ಗಾಳಿಂದಾಗಲಿ, ಮಳೆಂದಾಗಲಿ ಸೂರ್ಯನ ಕಾವಿಂದಾಗಲಿ ಹಾಳಾಗದೆ ಹಾಂಗೇ ಇರ್ದು ವಿಶೇಷಂತೇಳಕ್.

ವಿಜಯನಗರ ಅರಸರ ಕಾಲಲಿ ಅಲ್ಲಿಗೆ ಪ್ರವಾಸ ಬಂದ ವಿದೇಶಿಗರಲ್ಲಿ ಕ್ರಿ.ಶ. 1442ರಲ್ಲಿ ಬಂದ ಪಾಯಸ್, ಕ್ರಿ.ಶ.1522ರಲ್ಲಿ ಬಂದ ಅಬ್ದುಲ್

ರಜಾಕ್, ಹಾಂಗೆನೆ ವಿನ್ಸೆಂಟ್ ಸ್ಮಿತ್ ಎಂಬ ಚರಿತ್ರೆಕಾರ ಈ ಸಾಮ್ರಾಜ್ಯನ, ಶ್ರೀ ಕೃಷ್ಣ ದೇವರಾಯನ ಮನಸಾರೆ ಹಾಡಿ ಹೊಗಳಿಯೊಳೊ. ಈ ಸಾಮ್ರಾಜ್ಯ ಸಾಹಿತ್ಯ, ಕಲೆ, ಸಂಗೀತ, ನೃತ್ಯಕ್ಕೆ ಪಂಡಿತೋತ್ತಮರಿಗೆ ಆಶ್ರಯತಾಣಾಗಿತ್ತ್.

ಹಂಪಿಲಿ ನೋಡಿಕೆ ದೇವಸ್ತಾನಗಳ ಕೊರ್ತೆ ಇಲ್ಲೆ. ದೊಡ್ಡ ದೊಡ್ಡ ಕಟ್ಟಡಗ, ಕಲ್ಲಿನ ಮೂರ್ತಿಗ ಹಾಳಾದ ಸ್ತಿತಿಲಿ ದಿಕ್ಕಿಲ್ಲದೆ ಚೆಲ್ಲಾಡಿಕಂಡ್ ಉಟ್ಟು. ಕೆಲವು ಕಡೆ ಅಂಗಾಂಗಗಳ ಕಳ್ಕಂಡ್ ಅಂಗ ಹೀನರಾಗಿರುವ ಕಲ್ಲಿನ ಮೂರ್ತಿಗಳನ್ನೆಲ್ಲ ಅಲ್ಲಿಗೆ ಬಂದೊವ್ಕೆ ನೋಡಿಕೆ ಅನುಕೂಲ ಆಗುವ ಹಾಂಗೆ ಕ್ರಮಲಿ ಜೋಡ್ಸಿ ಇಸಿಯೊಳೊ. ಅದನೆಲ್ಲ ನೋಡಿಕಾಕನ ಇಲ್ಲಿನ ಪೋರ್ಲ್‌ಗೆ ಮನಸ್ಸ್ ಸೋತು ಹೋದ್ರೂ ಒದಗಿದ ಹೀನ ಸ್ತಿತಿಗಾಗಿ ಮರುಕ ಹುಟ್ಟಿದೆ. ಇದ್ಕೆ ಯಾರ್ನ ದೂರುದು?. ಯಾರ್ ಹೊಣೆಗಾರರ್‌ಂತ ಹೇಳ್ದು? ತಾಳಿ ಕೋಟೆ ಯುದ್ಧಲಿ ಗೆದ್ದ ಮುಸಲ್ಮಾನರನ್ನೆ ಹೇಳ್ದು ಸರಿಯಲ್ಲಂತೇಳ್ವೆ. ಅಲ್ಲಿ ಶೈವ ಮತ್ತು ವೈಷ್ಣವರೊಳಗೆ ಮನಸ್ತಾಪ ಇತ್ತ್. ಅವರ ಕಾಣದ ಕೈಗ ಕೆಲ್ಸ ಮಾಡಿಟು ಅಂತಲೂ ಹೇಳ್ವೆ. ಸಣ್ಣ ಮನ್ಸ್, ಸಣ್ಣತನದ ಕೆಲ್ಸ. ಶೀವ ಆಗಲಿ ವಿಷ್ಣು ಆಗಲಿ ಹೆಸ್ರ್ ಮಾತ್ರ ಬೇರೆ ದೇವರೊಬ್ಬನೆ. ಅಲ್ಲನೊ? ಇಷ್ಟೆಲ್ಲ ನೋಡಿ ಆಕನ ಕತ್ತಲಾಗ್‌ತ್ತಾ ಬಂದಿತ್ತ್. ನಡ್ದ್ ನಡ್ದ್ ಕೈ ಕಾಲ್‌ನೂ ಬಚ್ಚಿತ್ತ್. ರಾತ್ರಿ ಉಳಿಯಕೆ ಗೊತ್ತು ಮಾಡಿದ್ದ ಕುಟೀರಕ್ಕೆ ಹೋದೊ.

ಹಂಪಿಂದ ಮರಳಿದ ನಾವು ತಣ್ಣೀರ್ಲಿ ಮಿಂದ್ ಊಟ ಮುಗ್ಸಿದೊ. ಆಮೇಲೆ ಕೆಲವು ಮಕ್ಕ ರಾತ್ರಿಲಿ ವಿದ್ಯುತ್ ಬೆಳಕ್‌ಲಿ ಆಣೆಕಟ್ಟ್ ಕಾಣುವ ಪೊರ್ಲುನ ನೋಡಿಕೆಂತೇಳಿ ಹೋದೊ. ನಂಗೆ ತುಂಬಾ ಬೊಚ್ಚಿ ಹೋಗಿತ್ತ್. ಹಾಂಗಾಗಿ ನಾನ್, ರಾಮಚಂದ್ರ, ನಾರಾಯಣ್ ಸ್ವಾಮಿ ಇನ್ನ್ ಕೆಲವು ಹಾಸಿಗೆ ಹಾಸಿ ವಿಜಯನಗರ ಸಾಮ್ರಾಜ್ಯದ ಏಳ್ ಬೀಳ್‌ಗಳ ನೆನ್‌ಸ್ತಾ ನಿದ್ರೆ ಹೋದೊ.

ಹೈದ್ರಾ ಬಾದ್‌ನ ಕಡೆಗೆ :

ಮಾರ್ನೆ ದಿನ ಅಂದ್ರೆ ಒಕ್ಟೋಬರ್ ತಿಂಗಳ್ ತಾರೀಕ್ 19ನೇ ಐತವಾರ ಬೊಳ್ಪಿಗೆ ಐದ್‌ಗಂಟೆಗೆನೇ ಎದ್ದ್ ನಿತ್ಯ ಕರ್ಮನ ಮುಗ್ಸಿ ಕಾಪಿ, ತಿಂಡಿ ತಕಂಡ್ ಹೈದ್ರಾಬಾದ್‌ಗೆ ಪ್ರಯಾಣ ಬೆಳ್ಸಿದೊ.

ಹಂಪಿಂದ ಹೈದ್ರಾಬಾದಿಗೆ 350 ಮೈಲ್ ದೂರ. ನಮ್ಮ ವಾಹನಕ್ಕೆ ಚಾಲಕರ್ ಇಬ್ಬರ್ ಇದ್ದೊ. ಇಬ್ಬರೂ ಅವರ ಕೆಲ್ಸಲಿ ನಿಪುಣರೆ. ವಾಹನ ಒಂದೇ ಸಮನೆ ಓಡ್ತಿತ್ತ್. ಸುಮಾರ್ ಹತ್ತ್ ಹನ್ನೊಂದು ಗಂಟೆಗೆ ರಾಯ್ಚೂರ್

ಮುಟ್ಟಿದೊ. ಅಲ್ಲಿನ ಕೋಟೆ ಪಕ್ಕಲೆ ನಮ್ಮ ದಾರಿ. ಕೋಟೆನ ಪೌಳಿ ಎಲ್ಲ ಅಲ್ಲಲ್ಲಿ ಜರ್ದ್ ಹೋಗಿ ಪಾಳ್ ಬಿದ್ದುಟು. ಕೆಲವು ಕಟ್ಟಡಗ ನಿರಾಶ್ರಿತರ ನಿವಾಸ ಆಗುಟು. ಕಳೆ ಗಿಡ ಬೆಳ್ದ್ ನಿಂತ್ ಕಾಡ್ ಕೊಂಪೆನ ಹಾಂಗುಟ್ಟು. ನಾವ್ ಅಲ್ಲಿ ಬಸ್ಸ್ ನಿಲ್ಸಿ ಇಳ್ದ್ ಪಕ್ಕಲಿ ಹರಿವ ಹಳ್ಳದ ಕಡೆಗೆ ಹೋದೊ. ಅಲ್ಲಿನ ಜನ ಮಾತಾಡುವ ಬಾಸೆ ವಿಚಿತ್ರ ಆಗಿ ಕೇಳ್ತಿತ್ತ್. ಅವರ ಮಾತ್ ಕನ್ನಡ ಆದ್ರೂ ಅವರ ಬಾಸೆಲಿ ಕನ್ನಡದೊಟ್ಟಿಗೆ ತೆಲುಗು ಮತ್ತು ಉರ್ದು ಬಾಸೆ ಮಿಸ್ರ ಆಗಿ ಸರಿಯಾಗಿ ಗೊತ್ತಾಗ್‌ತಿತ್ಲೆ. ನಾವ್ ರಾಯ್ಚೂರ್ ಹಾದ್ ಹೋಕಾಕನ ಆ ಜಾಗಕ್ಕಾಗಿ ವಿಜಯನಗರ ಅರಸರಿಗೂ ಇಲ್ಲಿನ ಮುಸ್ಲಿಮ್ ಅರಸರಿಗೂ ಆಗಾಗ ಆಗ್‌ತಿದ್ದ ಯುದ್ದದ ಸಂಗತಿಗ ಮನ್ಸ್‌ಲಿ ಹಾದ್ ಹೋತ್. ಅಂತೂ ನಾವ್ ಹೈದ್ರಾಬಾದ್ ಮುಟ್ಟಿಕಾಕನ ಹಿಂಬೊತ್ತು ಏಳ್ ಗಂಟೆ ಆಗಿತ್ತ್.

ಹೈದ್ರಾಬಾದಿಲಿ ನಾವ್ಗೆ ಯೂನಿವರ್ಸಿಟಿ ಹಾಸ್ಟೆಲ್‌ಲಿ ಉಳ್ಕಂಕೆ ವ್ಯವಸ್ತೆ ಮಾಡಿದ್ದೊ. ಆದರೆ ಅಲ್ಲಿಗೆ ಹೋಕೆ ದಾರಿ ಗೊತ್ತಾಗದೆ ಸುತ್ತಾಡಿ ಸುತ್ತಾಡಿ ಸುಸ್ತಾತ್. ಅಷ್ಟೊತ್ತಿಗೆ ನಮ್ಮ ಆಗಮನನೇ ಕಾಯ್ತಿದ್ದ ಡಾ. ಸುಬ್ಬಯ್ಯನವು ನಮ್ಮ ಪತ್ತೆ ಮಾಡಿ ಉಸ್ಮಾನಿಯಾ ಯೂನಿವರ್ಸಿಟಿ ಹಾಸ್ಟೆಲಿಗೆ ಕರ್ಕಂಡ್ ಹೋದೊ. ಶ್ರೀಮಾನ್ ಸುಬ್ಬಯ್ಯನವು ಕೊಡಗಿನವು. ಅವು ಅಲ್ಲಿನ ಹೆಸ್ರ್ ಪಡ್ದ ವೈದ್ಯರಾಗಿದ್ದೊ. ಅವರ ಮನೆವು ಕೂಡ ನಮ್ಮನ್ನ್ ಕಾದ್‌ಕಂಡ್ ನಿಂತಿದ್ದೊ. ನಾವ್ ಹೋದ ಕೂಡ್ಲೆ ನಾವ್ಗಾಗಿ ಗೊತ್ತು ಮಾಡ್ದ ಕೋಣೆಗಳ್ಲಿ ನಮ್ಮ ಸಾಮಾನ್‌ಗಳ್ನ ಮಡ್ಗಿ ಸ್ನಾನದ ಏರ್ಪಾಡಿಗೆ ತೊಡ್ಗಿದೊ.

ಹೈದ್ರಾಬಾದಿಲಿ : ನಾವ್ ಉಳ್ಕಂಡ ಹಾಸ್ಟೇಲ್ ಎಲ್ಲಾ ಮಟ್ಟಿಗೆ ಅನುಕೂಲ ಆಗಿತ್ತ್. ಹೇಂಗೂ ಯೂನಿವರ್ಸಿಟಿ ಹಾಸ್ಟೇಲ್ ತಾನೆ. ನಾವ್ಗೆ ಊಟ ಕಾಪಿ, ತಿಂಡಿ ಎಲ್ಲ ವ್ಯವಸ್ತೆ ಅಲ್ಲಿನೇ ಇತ್ತ್. ಅಲ್ಲಿನ ವಾತಾವರಣ ಮನ್ಸಿಗೆ ಹಿಡ್ಸಿತ್. ಎರ್ಡ್ ದಿನ ಕಳ್ದ್ ಅಲ್ಲಿಂದ ಹೊರ್ಡುವ ದಿನ ಬಾಕನ ನಾವ್ಗೆ ಹೊರ್ಡಿಕೆನೇ ಮನ್ಸ್ ಬಾತ್ಲೆ.

ಹೈದ್ರಾಬಾದ್ ದೊಡ್ಡ ನಗರ, ಸಿಕಂದರಬಾದ್ ಅದಕ್ಕೆ ತಾಗಿಕಂಡ್ ಇರುವ ಇನ್ನೊಂದು ನಗರ. ಅದಕ್ಕೆ ಅದನ್ನ್ ಅವಳಿ ನಗರಾಂತ ಕರಿದು. ಸಿಕಂದರಬಾದ್ ಹೈದರಾಬಾದಿನ ಹಳೆ ರಾಜದಾನಿಗಡ. ಇಲ್ಲಿ ನೋಡಿಕೆ ಬೇಕಷ್ಟ್ ಆಕರ್ಷಕ ಸ್ತಳಗ ಉಟ್ಟು.

ನಾವ್ ತಾರೀಕ್ ಇಪ್ಪತ್ತರಂದ್ ಬೊಳ್ಪಿಗೆ ಉಪಹಾರಕ್ಕೆ ಮುಂದೆನೇ

ನಾವಿದ್ದ ಹಾಸ್ಟೆಲಿನ ಪಕ್ಕಲಿರುವ ಯೂನಿವರ್ಸಿಟಿ ಕಾಲೇಜ್ ನೋಡಿಕೆ ಹೋದೊ. ಆ ಕಾಲೇಜಿನ ಕಟ್ಟಡ ಪೂರ್ತಿ ಕಗ್ಗಲ್ಲಿಂದಲೇ ಕಟ್ಟಿದ್. ಅದರ ರೂಪು ರೇಖೆ ಎಲ್ಲ ಬಾರೀ ಲಾಯ್ಕಿತ್ತ್. ಅದನ್ನ್ ನೋಡಿ ಬಂದ್ ಕಾಪಿ, ತಿಂಡಿ ಮುಗ್ಸಿ ಗೋಲ್ಕಂಡ ಕೋಟೆ ನೋಡಿಕೆ ಹೋದೊ.

ಗೋಲ್ಕೊಂಡಕ್ಕೆ : ಗೋಲ್ಕೊಂಡ ಒಂದು ಚಾರಿತ್ರಿಕ ಊರು. ಅಲ್ಲೊಂದು ವಿಶಿಷ್ಟ ಕೋಟೆ ಉಟ್ಟು. ಹೈದ್ರಾಬಾದ್ ನಗರದ ಪಶ್ಚಿಮಕ್ಕಿರುವ ಈ ಕೋಟೆಗೆ ಒಂಬತ್ತ್ ಮೈಲ್ ದೂರ. ಒಂದು ಕಾಲಲಿ ಇದ್ ಬಾರಿ ಹೆಸ್ರ್ ಪಡ್ದ ನಗರ ಆಗಿತ್ತ್‌ಗಡ. ಕ್ರಿ.ಶ. 1292ರಲ್ಲಿ ರುದ್ರಮ ದೇವಿ ಎಂಬವಳ್ ಈ ಪ್ರದೇಶನ ಆಳ್ತಿತ್ತ್. ವಾರಂಗಲ್ ಅದರ ರಾಜದಾನಿ. ಅದೇ ಸಮಯಲಿ ಮಾರ್ಕೋಪೋಲೋ ಎಂಬ ವಿದೇಶಿ ಪ್ರವಾಸಿ ಬಂದದ್. ಅಂವ ಗೋಲ್ಕೊಂಡನ ರತ್ನಗಳ ತವರ್ಮನೆ ಅಂತ ತನ್ನ ಪ್ರವಾಸಿ ಪುಸ್ತಕಲಿ ಬರ್ದುಟು. ಇಡೀ ಪ್ರಪಂಚಲಿ ಅತೀ ಮುಖ್ಯ ಆದ ಕೊಹಿನೂರ್, ಜಾರ್‌ಲೂಫ್, ನಿಜಾಮ, ಹೀಂಗೆಲ್ಲ ಕರೆವ ವಜ್ರದ ಹರ್ಳ್‌ಗಳ್ನ ಗೋಲ್ಕೊಂಡ ರಾಜ್ಯದೊಳಗಿರುವ ಗನಿಗಳ್‌ಂದ ತೆಗ್ದದ್ದ್. ಈ ಕಾರಣಗಳಿಗಾಗಿ ಹಿಂದೆ ಗೋಲ್ಕೊಂಡನ ಪ್ರಪಂಚದ ನಿದಿ, ಬಂಡಾರಂತ ಕರೆತಿದ್ದೊ.

ಮುಂದೆ ಗೋಲ್ಕೊಂಡ ಮುಸ್ಲಿಮ್ ರಾಜ್ಯ ಆತ್. ಅದ್ ದೊಡ್ಡ ರಾಜ್ಯ ಆಗಿ ಬೆಳ್ದದ್ ಕುತುಬ್ ಶಾಹಿ ಎಂಬವನ ಕಾಲಲಿ. ಹನ್ನೊಂದನೇ ಶತಮಾನಲಿ ವಾರಂಗಲ್‌ಲಿ ಆಳ್‌ತಿದ್ದ ಹಿಂದೂ ಅರಸರ ಕಾಲಲಿ ಅಲ್ಲಿ ಬರೆ ಮಣ್ಣ್‌ನ ಗೋಡೆ ಇದ್ದದ್ ಗಡ. ಕ್ರಿ.ಶ. 1321ರಲ್ಲಿ ಅದನ್ನ್ ದಿಲ್ಲಿ ಸುಲ್ತಾನ ಮಹಮದ್–ಬಿನ್–ತುಗ್ಲಕ್ ವಶಪಡ್ಸಿಕಂಡತ್. ಅಲ್ಲಿನ ಆಡಳಿತ ನೋಡಿಕಂಬಕೆ ಅಲ್ಲಾ–ಉದ್ದಿನ್–ಬಹಮಿನ್ ಶಹಾ ಎಂಬವನ ನೇಮಿಸಿತ್ತ್. ಮುಂದೆ ಇಂವ ಮಹಮದ್–ಬಿನ್–ತುಗ್ಲಕ್‌ನ ವಿರುದ್ದ ದಂಗೆ ಎದ್ದ್ ಸ್ವತಂತ್ರ ಅರಸ ಆತ್. ಇವನ ರಾಜ್ಯಕ್ಕೆ ಬಹಮನಿ ರಾಜ್ಯ ಅಂತ ಹೆಸರಾತ್ತ್. ಈ ಬಹಮನಿ ರಾಜ್ಯ ಕಡೆಗೆ ಪ್ರತ್ಯೇಕ ರಾಜ್ಯಗಳಾಗಿ ಒಡ್ದ್ ಐದ್ ರಾಜ್ಯಗಳಾಗಿ ಹೆಸ್ರ್‌ಗೆ ಬಾತ್. ಆ ರಾಜ್ಯಗಳಲ್ಲಿ ಗೋಲ್ಕೊಂಡ ಒಂದು.

ಗೋಲ್ಕೊಂಡ ರಾಜ್ಯ ವೈಬವದ ತುತ್ತತುದಿಗೇರ್ದ್ ಮೊಹಮದ್ ಕ್ವಾಲಿ ಕುತುಬ್ ಶಹ ಎಂಬವನ ಕಾಲಲಿ. ಅವನ ಕಾಲ 1530ರ್‌ಂದ 1612ರ ವರೇಗೆ. ಇವಂಗಿಂತ ಮುಂದೆ ಆಳ್ದಂವ ಇಬ್ರಾಹಿಮ್ ಶಹ ಎಂಬವ. ಇಬ್ರಾಹಿಮ್ ಶಹನೆ ಹೈದ್ರಾಬಾದ್ ನಗರನ ಕ್ರಿ.ಶ. 1509ರಲ್ಲಿ ಕಟ್ಟಿಸಿದ್.

ಗೋಲ್ಕೊಂಡ ಕೋಟೆ ಜನರ್‌ಂದ ತುಂಬಿ ಹೋಗಿ ಅನಾರೋಗ್ಯ ಕಾಡ್ತಿತ್‌ಗಡ. ಅದಕ್ಕೆ ಮ್ಯೂಸಿ ನದಿನ ದಂಡೆಲಿ ಒಂದು ಹೊಸ ನಗರ ಕಟ್ಟಿಕೆ ಮನ್ಸ್ ಮಾಡ್ತ್. ಅವಂಗೆ ಒಬ್ಬಳ್ ಹಿಂದೂ ಪ್ರಿಯತಮೆ ಇತ್ತ್. ಅವಳ ಹೆಸ್ರ್ ಬಾಗ್ಯಮತಿ ಅಂತ. ಆ ಹೊಸ ನಗರಕ್ಕೆ ಅವ್ಳ ಹೆಸ್ರ್‌ನೆ ಇಸಿ ಬಾಗ್ಯನಗರ ಅಂತ ಕರ್ತ್. ಅವಳ್ ತೀರಿ ಹೋದ ಮೇಲೆ ಆ ಹೆಸ್ರ್ ತೆಗ್ದ್ ಹೈದರಾಬಾದ್‌ಂತ ಮಾಡ್ತ್. ಇಲ್ಲಿ ಮಹಮದ್ ಕ್ವಾಲಿಂತೇಳಂವ ತುಂಬಾ ಕಟ್ಟಡ ಕಟ್ಟಿಸುಟು. ಹೆಸ್ರ್ ಪಡ್ದ ಚಾರ್‌ಮಿನಾರ್, ಚಾರ್‌ಕಮಾನ್, ಜಮ್ಮಿಮಸೀದಿ ಇದೆಲ್ಲ ಅವನೇ ಕಟ್ಟಿಸಿದ್. ಅಂವ ಕಟ್ಟಡ ಕಟ್ಟಿಸಿಕಾಗಿ ಪ್ರತಿ ವರ್ಷ 300,000 ಫೌಂಡ್ ಹಣ ಖರ್ಚ್ ಮಾಡ್ತಿತ್ತ್ ಗಡ.

ಇವನ ಕಾಲದ ನಂತ್ರ ರಾಜ್ಯ ಆಳ್ದ್ ಅಬ್ದುಲ್ ಕುತುಬ್ ಶಾಹಿ. ಅವನ ಕಾಲ ಸಂಕಷ್ಟದ ಕಾಲ. ಯಾಕೇಂತೇಳಿರೆ ಮೊಗಲ ಅರಸ ಔರಂಗಜೇಬ ಗೋಲ್ಕೊಂಡದ ಮೇಲೆ ಕಣ್ಣ್ ಹಾಕಿತ್ತ್. ಕ್ರಿ.ಶ. 1656ರಲ್ಲಿ ಅಂವ ಸೀದಾ ಗೋಲ್ಕೊಂಡದ ರಾಜಕೀಯಲಿ ಕೈ ಹಾಕಿಕೆ ಸುರ್‌ಮಾಡ್ತ್. ಅದೇ ಗೋಲ್ಕೊಂಡ ಅರಸನ ಅವನತಿಗೆ ಕಾರಣ ಆತ್. ಅಬ್ದುಲ್ ಹಸನ ಎಂಬವ ಸತ್ತಮೇಲೆ ಗೋಲ್ಕೊಂಡ ಪೂರ್ತಿ ಆಗಿ ಔರಂಗಜೇಬನ ವಶ ಆತ್. ಆದರೆ 1707ರಲ್ಲಿ ಔರಂಗಜೇಬ ತೀರಿ ಹೋದ ಮೇಲೆ ಅದ್ ತುಂಡ್ ತುಂಡ್ ರಾಜ್ಯ ಆಗಿ ಒಡ್ತ್. ಅಲ್ಲಿ ಆಡಳಿತ ನೋಡಿಕಂಡ್ ಇದ್ದ ಅಸಫ್ ಜಹ ಅಥವಾ ನಿಜಾಮ ಉಲ್‌ಮಲ್ಕ್ ಎಂಬವ ಹೈದರಾಬಾದ್‌ನ ರಾಜದಾನಿಯಾಗಿ ಮಾಡಿಕಂಡ್ ಒಂದು ಸ್ವತಂತ್ರ ರಾಜ್ಯ ಸ್ತಾಪನೆ ಮಾಡ್ತ್.

ಗೋಲ್ಕೊಂಡ ಈಗ ಹಾಳಾದ ಸ್ತಿತಿಲಿ ಉಟ್ಟು. ಅಲ್ಲಿ ಈಗ ಕಾವಲ್‌ಗಾರನ ಬುಟ್ಟರೆ ಬೇರೆ ಯಾರೂ ವಾಸಮಾಡ್ದುಲೆ. ಗೋಲ್ಕೊಂಡ ಎಂಬ ಹೆಸ್ರ್ ಅಲ್ಲಿಗೆ ಗೊಲ್ಲ ಕೊಂಡ ಎಂಬುದರ್‌ಂದ ಬಂದದ್ ಅಂತ ಹೇಳ್ವೆ. ಗೊಲ್ಲ ಕೊಂಡ ಅಂದ್ರೆ ಕುರುಬರ ಬೆಟ್ಟಂತ ಆದೆ. ಒಬ್ಬ ಕುರುಬ ಆ ಜಾಗನ ಕ್ವಾಲಿ ಸುಲ್ತಾನಂಗೆ ತೋರ್ಸಿದ್. ಮತ್ತೆ ಅಂವ ಅಲ್ಲಿ ಕೋಟೆ ಕಟ್ಟಿಸಿತ್. ಹಾಂಗಾಗಿ ಗೊಲ್ಲ ಕೊಂಡಂತಾಗಿ ಮುಂದೆ ಗೋಲ್ಕೊಂಡ ಎಂಬ ಹೆಸ್ರ್ ಬಾತ್‌ಂತ ಸ್ತಳ ಚರಿತ್ರೆ ಹೇಳ್ದೆ.

ಚರಿತ್ರೆಲಿ ಹೆಸ್ರ್ ಪಡ್ದ ಕೋಟೆಗಳ್ಲಿ ಗೋಲ್ಕೊಂಡ ಕೋಟೆನೂ ಒಂದು. ಇದ್ ಸಮುದ್ರ ಮಟ್ಟಂದ ಸುಮಾರ್ 2000 ಅಡಿ ಎತ್ರಲಿ ಉಟ್ಟು. ಈ ಕೋಟೆ ವಿಜಯನಗರ ಕೋಟೆನ ಹಾಂಗೆ ವಿಶಾಲ ಸಮತಟ್ಟ್ ಜಾಗಲಿರುವ

ಕೋಟೆ ಅಲ್ಲ. ಈ ಕೋಟೆ ಗುಡ್ಡ ಬೆಟ್ಟನ ಸುತ್ತುವರ್ದ್‌ಕಂಡ್ ಇದ್ದ್ ದುರ್ಗಮ ಕೋಟೆ ಆಗಿಟ್ಟು. ದಾಳಿ ಮಾಡಿ ಈ ಕೋಟೆನ ಗೆಲ್ಲುದು ಅಸಮ ಸಾಹಸನೇ ಸರಿ.

ಈ ಕೋಟೆಗೆ ಏಳ್ ಪೌಳಿಗ ಉಟ್ಟು. ಅಂದರೆ ಏಳ್ ಸುತ್ತಿನ ಕೋಟೆ. ಇದ್ ಒಂದಕ್ಕೊಂದು ಸುತ್ತುವರ್ದ್‌ಕಂಡ್ ಉಟ್ಟು. ಕೋಟೆನ ತೀರಾ ಹೊರಕಡೆನ ಪೌಳಿ ಕಡಿಮೆ ಪಕ್ಷ ಆರ್ ಅಡಿ ಅಗಲ ಇದ್ದ್ ಐವತ್ತೈದ್ ಅಡಿ ಎತ್ತರ ಉಟ್ಟು. ಕೋಟೆಯ ಸುತ್ತ ಬುರುಜುಗ ಉಟ್ಟು. ಬುರುಜು ಅಂದರೆ ಕಾವಲುಗೋಪುರ. ಕೋಟೆನ ಉದ್ದ ಅಂದಾಜ್ ನಾಲ್ಕ್ ಮೈಲ್. ಬುರುಜುಗ ಒಟ್ಟು ಎಂಬತ್ತೇಳ್ ಉಟ್ಟು. ನೂರಾರ್ ಕವಲ್‌ಗಳ ವ್ಯವಸ್ತೆ ಉಟ್ಟು. ಮೆಕ್ಕಾ, ಫತೇಹ, ಮೋತಿ, ಜಾಮಲಿ, ಬಂಜರ, ನಯ ಕ್ವಿಲ್ಲಾ ದ್ವಾರವಾಜ, ಪಟಾನಚೆರು ಮತ್ತು ಬಹುಮನಿ ದ್ವಾರವಾಜ ಆ ಎಂಟ್ ಮಹಾದ್ವಾರಗ. ಇವುಗಳ್ಳಿ ಆ ಕಡೇ ಎರಡರ ಪೂರ್ತಿ ಮುಚ್ಚಿದ್ದ್ ಉಳ್ದ ಆರ್ ದ್ವಾರವಾಜಗಳ ಸಂದರ್ಶಕರ ಅನುಕೂಲತೆಗಾಗಿ ತೆಗ್ದ್ ಇರಿಸಿವೆ.

ನಾವು ಕೋಟೆನ ಒಳಗೆ ಹೋಕುಂತಾದರೆ ಮುಂಬಾಗಿಲಿರುವ ಪತೇಹ ದ್ವಾರವಾಜನ ದಾಟಿ ಹೋಕು. ಇದಕ್ಕೆ ವಿಜಯ ದ್ವಾರವಾಜಂತ ಇನ್ನೊಂದು ಹೆಸ್ರ್. ಔರಂಗಜೇಬ ಈ ಕೋಟೆನ ವಶಪಡಿಸಿಕಂಡ ಮೇಲೆ ಗೆದ್ದ ನೆನ್ಪಿಗಾಗಿ ಅಂವ ವಿಜಯ ದ್ವಾರಂತ ಕರ್ತ್‌ಗಡ. ಇದೇ ಆ ಹೆಸ್ರ್ ಬಾಕೆ ಕಾರಣ. ಆ ದ್ವಾರನ ಹಾದ್ ಹಂಞ ಮುಂದೆ ಹೋದರೆ ಕುತುಬ್ ಶಾಹಿ ಮತ್ತು ಮೊಗಲರ ಕಾಲದ ನಾನಾ ತರದ ಬೆಡಿಗ ಮತ್ತು ಇತರ ಯುದ್ಧ ಸಾಮಾಗ್ರಿಗಳ ಸಂಗ್ರಹ ಸಿಕ್ಕಿದೆ. ಅವೆಲ್ಲ ತೀರ ಹಳೆ ಕಾಲದವು. ಆ ಮೇಲೆ ಮುಂದೆ ಹೋದರೆ ಸಿಕ್ಕುದೇ ವಜ್ರದ ಮಾರುಕಟ್ಟೆ. ಅಲ್ಲೊಂದು ಬಾಗಿಲ್ ಉಟ್ಟು. ಅದರ ದಾಟಿ ಸೀದಾ ಮುಂದೆ ಹೋದರೆ ಮುಖ್ಯ ದುರ್ಗ ಸಿಕ್ಕಿದೆ. ಅಲ್ಲಿ ನಿಂತ್ ನೋಡಿರೆ ಎರಡನೇ ಪೌಳಿ ಮತ್ತು ಕೋಟೆನ ಅತೀ ಎತ್ತರದ ಜಾಗ ಕಂಡದೆ. ಬಾಲ ಹಿಪ್ಪಾರ್‌ಂತೇಳುವ ಗೇಟ್‌ನ ದಾಟಿ ಮುಂದೆ ಹೋಕನ ಅಂಗಳ ಸಿಕ್ಕಿದೆ. ಅಲ್ಲೆ ಒಂದು ಮಂಟಪನೂ ಉಟ್ಟು. ಅಲ್ಲಿಂದ ಕೋಟೆ ಹತ್ತಿಕೆ ಎರ್ಡ್ ದಾರಿನೂ ಉಟ್ಟು. ಒಂದು ಸಿಲ್ಲಿಕಾನದ ಹಿಂದೆಗಾಗಿ ಹೋದೆ. ಇದರ ಬದಲ್ ಇನ್ನೊಂದು ದಾರಿ ಸುಲಬ. ನಾವ್ ಹೋದದ್ದ್ ಇದೇ ದಾರಿಲಿ. ಇದ್ ಮುಕಮಂಟಪದ ಬಲಬದಿಗಾಗಿ ಹೋದೆ. ಅಲ್ಲಿ ಹೋಕನ ಪಕ್ಕಲಿರುವ ಗ್ಯಾರಿಸನ್ ಕ್ವಾರ್ಟರ್‌ಂತೇಳುವ ಕಾವಲ್ ಪಡೆ ಇರುವ ಜಾಗ

ಸಿಕ್ಕಿದೆ. ಇದ್ ಈಗ ಹಾಳಾಗುತ್ತಾ ಉಟ್ಟು. ಇದ್ ಕುತುಬ್ ಶಾಹಿ ಕಾಲಕ್ಕೆ ಸೇರ್ದ್. ಅದರ ಇನ್ನೊಂದು ಪಕ್ಕಲಿ ನಾಗಿನ ಬಾಗ್ ಎಂಬ ಜಾಗ ಉಟ್ಟು. ಅದರ ಹಿಂದೆನ ಬಾಗ ಹಿಂದೆ ಹೂವಿನ ತೋಟದ ಜಾಗ. ಈ ದಾರಿನ ಕೊನೆಗೆ ಕೋಟೆನ ಮೇಲ್ ಜಾಗಕ್ಕೆ ಹತ್ತಿಕ್ಕಾಗಿ ಕಲ್ಲ್‌ಂದ ಅಗಲಲಿ ಕಟ್ಟಿದ ಮೆಟ್ಲ್‌ಗ ಉಟ್ಟು. ಅದೇ ದಾರಿಲಿ ಹತ್ತಿಕಂಡ್ ಮುಂದೆ ಮುಂದೆ ಹೋದರೆ ಒಂದು ಕಡೆ ರಾಮದಾಸ್ ಬಂದಿಖಾನ್ ಸಿಕ್ಕಿದೆ. ಇಲ್ಲಿನೆ ಸ್ವಾಮಿ ರಾಮದಾಸರ್ನ ಬಂದಿಸಿ ಕೂಡಿ ಹಾಕಿದ್ದ್. ರಾಮದಾಸರ್ ಬದ್ರಾಚಲಮ್ ಎಂಬಲ್ಲಿ ಖಜಾನೆನ ಮೇಲ್ವಿಚಾರಕನಾಗಿ ಇರಿಕಾಕನ ಜನರ ಹಿತಕ್ಕಾಗಿ ಹಣ ಎಲ್ಲ ಖರ್ಚ್ ಮಾಡಿತ್ತ್ ಗಡ. ಈ ಸಂಗ್ತಿ ರಾಜ ತಾನಶಹಾ ಎಂಬವಂಗೆ ಗೊತ್ತಾಗಿ ಕೋಪಂದ ಕಳ್ದ ಹಣನೆಲ್ಲ ಬರ್ತಿ ಮಾಡಿ ಕೊಡದಿದ್ದರೆ ಜೈಲಿಗೆ ಹಾಕಿನೆಂತ ಆಜ್ಞೆ ಮಾಡ್ತ್. ಹಾಂಗೆ ಅವನ ಜೈಲಿಗೆ ಹಾಕಿದೊ. ರಾಮದಾಸ ಅಂದರೆ ಸಮರ್ಥ ರಾಮದಾಸರ್. ಮಹಾ ಸದ್‌ಭಕ್ತ. ಆಗ ದೇವ್ರ್ ರಾಮದಾಸರ ಹಾಂಗೆ ರೂಪ ತಾಳಿ ರಾಜನಲ್ಲಿಗೆ ಹೋಗಿ ಹಣ ಹಿಂತಿರಿಗ್ಸಿತ್. ರಾಜ ಅವನ ರಾಮದಾಸಂತಲೇ ತಿಳ್ದ್ ಸಮಾದಾನ ಪಟ್ಟ್ ಜೈಲಿಂದ ಬುಡ್ಸಿತ್‌ಂತ ವಾಡಿಕೆನ ಕತೆ.

ರಾಮದಾಸ ಬಂದಿಕಾನಂದ ಹಂಞ ಮೇಲೆ ಕಡೆಲಿ ಅಂಬರಕಾನಂತೇಳುವಂತದ್ ಉಟ್ಟು. ಅಲ್ಲಿ ಒಂದು ಕಡೆ ಕರ್ಗಲ್ ಮೇಲೆ ಅಬ್ದುಲ್ ಕುತುಬ್ ಶಹಾನ ಕಾಲದ ಹಿರಿಮೆನ 'ನಸ್ತಾಲಿಕ್' ರೀತಿಲಿ ಬರ್ದ ಲೇಕನ ಉಟ್ಟು. ಅಂಬರಕಾನಂದ ಮುಂದೆಗೆ ಕೋಟೆನ ಮೂರನೆ ಪೌಳಿ ಸಿಕ್ಕಿದೆ. ಇದ್ ತುಂಬಾ ಎತ್ತರ ಉಟ್ಟು. ಅರಮನೆ ಇರುದು ಇದರ ಒಳಗೆ. ಈ ಜಾಗಲಿ ದೊಡ್ಡ ದೊಡ್ಡ ಬಂಡೆ ಕಲ್ಲ್‌ಗಳೇ ಕೋಟೆನ ಹಾಂಗೆ ಉಟ್ಟು. ಅದರ ಮೇಲೆ ಕಲ್ಲ್‌ನ ಗೋಡೆ ಬಲವಾಗಿ ಕಟ್ಟಿಸಿಯೊಳೊ. ದಾಳಿ ಕಾರರ್ ಇದರ ದಾಟಿ ಮುಂದೆ ಹೋದು ಬಾರೀ ಕಷ್ಟನೆ. ಇದ್ ಈ ಪೌಳಿಯ ವಿಶೇಷತೆ. ಈ ಕೋಟೆ ಗೋಡೆನ ಹಂಞ ಮುಂದೆ ಇಬ್ರಾಹಿಮ್ಮ್ ಕುತುಬ್ ಶಹಾ ಕಟ್ಟಿಸಿದ ಒಂದು ಸಣ್ಣ ಮಸೀದಿ ಉಟ್ಟು. ಅಲ್ಲಿನೇ ಇರುವ ಅರಮನೆನ ಮುಂದುಗಡೆ ಒಂದು ಹಿಂದೂ ದೇವಸ್ತಾನ ಉಟ್ಟು. ಮುಸ್ಲಿಮ್ ಅರಸರ ಅರಮನೆನ ಪಕ್ಕಲಿ ಹಿಂದೂ ದೇವಸ್ತಾನ ಇರುದು ತುಂಬಾ ಆಶ್ಚರ್ಯ ಸಂಗತಿ. ಕೋಟೆನ ಎತ್ತರದ ಕೊಡಿಲಿ ಅರಮನೆ ಇರುದು. ಅದರ ಸುರೂನ ಉಪ್ಪರಿಗೆನ ಒಂದು ಬಾಗಲಿ ನೆಲ ಮಾರ್ಗ ಉಟ್ಟು. ಅದೊಂದು ಗುಪ್ತ

ಮಾರ್ಗ. ಈ ಗುಟ್ಟಿನ ದಾರಿ ಹೈದ್ರಾಬಾದಿಲಿ ಇರುವ ಗೋಷಾಮಹಲ್ ಅರಮನೆಗೆ ಹೋದೆಂತ ನಂಬಿಗೆ. ಅರಮನೆಗೆ ತಾಗಿಕಂಡ್ ಒಂದು ಸಬಾ ಸ್ತಾನ ಉಟ್ಟು. ಅರಮನೆನ ಎರ್ಡನೇ ಮಹಡಿಲಿ ನಿಂತ್ ನೋಡಿರೆ ಗೋಲ್ಕೊಂಡ ಕೋಟೆನ ಹೆಚ್ಚಿನ ಬಾಗ ಕಂಡದೆ. ಕೋಟೆನ ತೀರಾ ಕೊಡಿಲಿ ರಾಜ ಕುದ್ರ್‌ತಿದ್ದ ಆಸನ ಉಟ್ಟು. ಅದಕ್ಕೆ 'ಶಹನಾಸಿನ್' ಅಂತ ಹೆಸ್ರ್ . ಹಿಂಬೊತ್ತಿಗೆ ರಾಜ ಇಲ್ಲಿನೆ ಕುದ್ದ್ ಸುತ್ತ ಮುತ್ತಲಿನ ಮನಸೆಳೆವ ದೃಶ್ಯ ನೋಡಿ ಕುಸಿಪಡ್ತಿತ್ತ್‌ಗಡ. ಇಲ್ಲಿಗೆ ಕೋಟೆ ಮಾತ್ರ ಅಲ್ಲ ಹೈದ್ರಾಬಾದ್ ನಗರದ ಇಡೀ ದೃಶ್ಯ ಕಂಡದೆ. ಬಾರಿ ಪೊರ್ಲುನ ನೋಟ ಅದ್.

ಇಲ್ಲಿಗೆ ಕೋಟೆ ಹತ್ತುವ ಸಾಹಸ ಮುಗ್ದದೆ. ಆದರೆ ಸುತ್ತು ಬಳ್ಸಿಕಂಡ್ ಹತ್ತುವಂತದ್ದ್ ಸುಲಬದ ಮಾತಲ್ಲ. ಸಾಕ್‌ಸಾಕಾದೆ. ಕೈಕಾಲಂತು ಗಟ್ಟಿನೇ ಬೇಕು. ನಮ್ಮಲ್ಲಿ ಎಲ್ಲವುಕೆ ಇಲ್ಲಿಗೆ ಹತ್ತಿಕೆ ಆತ್ಲೆ. ಕೆಲವು ನಡುದಾರಿಲೇ ಬಾಕಿ ಆಗಿದ್ದೊ.

ಇಲ್ಲಿನೆ ಹಂಞ ಹೊತ್ತು ಕುದ್ದು ಬಚ್ಚೆಲ್ ಪರಿಹರ್ಸಿಕಂಡ್ ಕೆಳಗೆ ಇಳಿಯಕೆ ಸುರುಮಾಡ್ದೊ. ಹತ್ತುದು ಒಂದು ತರದ ಕಷ್ಟ ಆದರೆ ಇಳಿದು ಇನ್ನೊಂದುತರದ ಕಷ್ಟ. ಕೆಳಗೆ ಇಳಿವ ದಾರಿ ಬಂದ ದಾರಿ ಅಲ್ಲ. ಹಿಂದೆ ರಾಜ ಕುಟುಂಬದೊವು ಮಾತ್ರ ಉಪಯೋಗಿಸುತ್ತಿದ್ದ ದಾರಿಲಿ ಹೋಕು. ಆ ದಾರಿಲಿ ಮೆಟ್ಲ್‌ನ ಕೊಡಿಲಿ ನೀರ್ ಸಂಗ್ರಹಿಸಿಡುವ ಕೊಳ ಉಟ್ಟು. ಹಿಂದೆ ಅಲ್ಲಿಂದಲೇ ಕೋಟೆಗೆಲ್ಲ ನೀರ್ ಸರಬರಾಜ್ ಮಾಡ್ತಿದ್ದದ್ ಗಡ.

ಇದೇ ದಾರಿಲಿ ಮುಂದೆ ಇಳಿಯಕಾಕನ 'ಅಂತಃಪುರ' ಯಾ 'ಜನಾನ' ಕಾಂಬಕೆ ಸಿಕ್ಕಿದೆ. ಹಿಂದೆ ಅದಕ್ಕೆ ಎರ್ಡ್ ಮಾಳಿಗೆ ಇತ್ತ್ ಗಡ ಈಗ ಅದ್ ಹಾಳಾಗುಟು. ಜನಾನದ ಒಳ ಬಾಗಲಿ ಎಲ್ಲ ಅನುಕೂಲತೆ ಇರುವ ಸುಂದರ ಆವರಣ ಉಟ್ಟು. ಅಲ್ಲಿ ಆಶ್ಚರ್ಯಕರ ರೀತಿಲಿ ಬರ್ದ ಸುಂದರ ಚಿತ್ರಗ ಇದ್ದರೂ ಈಗ ಅದ್ ಹಾಳಾಗುತ್ತಾ ಉಟ್ಟು. ಜನಾನಕ್ಕೆ ಸಂಬಂದಪಟ್ಟ ರಾಜರ ಬೇರೆ ಬೇರೆ ಸಬಾಸ್ತಾನಗ ಉಟ್ಟು. ಅದರ ಪಕ್ಕಲಿ ಕುತುಬ್ ಶಹನ ಅತ್ಯಂತ ಪ್ರೀತಿ ಪಾತ್ರಳಾದ ಹಿಂದೂರಾಣಿ ತಾರಾಮತಿಯ ಅರಮನೆ ಇರ್ದು. ಈ ಅರಮನೆನ ಸರಿ ಎದುರಿಗೆ ಅಪಾಯದ ಕಾಲಲಿ ರಕ್ಷಣೆಗಾಗಿ ಹೆಂಗ್ಸರ್ ಹೋಗಿ ರಕ್ಷಣೆ ಪಡೆವ ಜಾಗ ಉಟ್ಟು.

ಕೋಟೆನ ಒಳಗಡೆ ಇರುವ ಅರಮನೆ ಅಂತಃಪುರ ಎಲ್ಲ ಎಷ್ಟೇ ಲಾಯ್ಕಾಗಿ ಇದ್ದರೂ ಗಾಳಿ ಬೆಳ್ಕ್ ಸರಿಯಾಗಿ ಇಲ್ಲೆ. ಕರಿಗೂಟಿ ಕತ್ತಲೆ. ಈಗ ವಿದ್ಯುತ್

ಸೌಕರ್ಯ ಮಾಡಿದ್ದರೂ ಕೈಯಲ್ಲೊಂದು ಟಾರ್ಚ್ ಯಾ ದೊಂದಿ ಬೇಕೆ ಬೇಕು. ಅಂತಃಪುರಕ್ಕೆ ತಾಗಿಕಂಡ್ ಅಬ್ದುಲ್ಲ ಕುತುಬ್ ಶ ನ ಇನ್ನೊಬ್ಬಳ್ ಪ್ರಿಯತಮೆ ಪ್ರೇಮಾಮತಿನ ಗೋರಿ ಉಟ್ಟು. ಅವ್ಳ್ ತಾರಾಮತಿನ ಒಡಹುಟ್ಟಿದವಳ್ ಗಡ. ಇದೇ ದಾರಿಲಿ ಇನ್ನು ಮುಂದೆ ಇಳ್ದರೆ ನಾವ್ ಮತ್ತೊಮ್ಮೆ ಸಿಲಾಬಾನಕ್ಕೆ ತಲ್ಪುವೆ. ಮತ್ತೆ ಬಾಲ ಹಿಸ್ಸಾರ್ ದ್ವಾರನ ಪುನ ದಾಟಿ ಕೋಟೆನ ಹೊರಗೆ ಬಂದವೆ.

ಕೋಟೆನ ಹೊರಬಾಗಲಿ ಸಹ ನೋಡಿಕೆ ಪೋರ್ಲುನ ಕಟ್ಟಡ ಉಟ್ಟು. ಅಬಿಸೀನಿಯನ್ ಹೆಬ್ಬಾಗಿಲಿನ ಪಕ್ಕಲಿ ಗೋಲ್ಕೊಂಡ ಮಸೀದಿ ಉಟ್ಟು. ಅದರ ಇನ್ನೊಂದು ಕಡೆಲಿ ನವಮಹಲ್ ಯಾ ಮೋತಿಮಾಲ್ ಉಟ್ಟು. ಇನ್ನ್ ಅಲ್ಲಿ ನೋಡಿಕೆ ಕುತುಬ್ ಶಾಹಿಯ ಕಾಲದ ಹಲವು ಗೋರಿಗ ಒಳೊ. ನಾವ್ ಕೆಲವು ಮಾತ್ರ ನೋಡಿಕಂಡ್ ಹೊತ್ತಾದೆಂತೇಳಿ ನಾವ್ ಉಳಕಂಡಲ್ಲಿಗೆ ಮದ್ಯಾಹ್ನದ ಊಟಕ್ಕೆಂತೇಳಿ ಹಿಂತಿರುಗಿದೊ.

ನಾವ್ ಹಾಸ್ಟೇಲ್ ಸೇರಿಕಾಕನ ಮದ್ಯಾಹ್ನ ಒಂದು ಕಾಲ್ ಗಂಟೆ ಆಗಿತ್ತ್. ನಾವ್ಗೆ ಗೋಲ್ಕೊಂಡ ಕೋಟೆ ಹತ್ತಿ ಇಳ್ದ್ ಸಾಕಾಗಿತ್ತ್. ಮದ್ಯಾಹ್ನ ಉಂಡಾಗಿ ಎಲ್ಲಿಗೂ ಹೋಗದೆ ಹಾಂಗೆ ಮಲ್ಗಿ ಬಚ್ಚೆಲ್ ತೀರ್ಸಿಕಂಡೊ. ಹಿಂಬೊತ್ತು ಮೂರುವರೆಗೆ ಕಾಪಿ, ತಿಂಡಿ ತಕಂಡ್ ಸಿಕಂದರಾಬಾದಿಗೆ ಹೋದೊ.

ಸಿಕಂದರಾಬಾದ್ ದೊಡ್ಡ ನಗರ. ಅದರ ದೊಡ್ಡಸ್ತಿಕೆನ ಹೀಂಗೆ ಹೇಳಿಯೊಳೊ 'ಸಿಕಂದರಾಬಾದ್‌ನ ಬುಟ್ಟರೆ ಹೈದ್ರಾಬಾದ್ ಏನೇನೂ ಅಲ್ಲ' ಅಂತ. ಅಲ್ಲಿ ನೋಡಕಾದ್ ತುಂಬಾ ಉಟ್ಟು. ಹುಸೇನ್ ಸಾಗರ, ಉಸ್ಮಾನಿಯಾ ಸಾಗರ, ಹುಮಾಯೂನ ಸಾಗರ ಎಲ್ಲ ದೊಡ್ಡ ದೊಡ್ಡ ಸರೋವರಗಳೇ ಆಗಿದ್ದ್ ನೋಡಿಕೆ ಸಾಗರದ ಹಾಂಗೆನೇ ಕಂಡದೆ. ಅಲ್ಲೇ ಕುದುರೆ ಓಟದ ಜಾಗ ನೋಡಿಕಂಡ್ ರಾತ್ರಿ ಸಿನೇಮಾ ನೋಡಿಕೆ ಹೋದೊ. ನಾವ್ ನೋಡ್ದ ಸಿನೇಮಾ 'ಮಧುಮತಿ'. ಹಿಂದಿ ಬಾಸೆದ್. ವೈ ಜಯಂತಿಮಾಲ ಮುಖ್ಯ ನಟಿ. ನಿಜವಾದ ಪ್ರೀತಿ ಹೇಂಗೆ ಇದ್ದದೆಂತ ಲಾಯ್ಕಾಗಿ ಚಿತ್ರಿಸಿಯೊಳೊ ನಂಗೆ ಸಿನಿಮಾಕ್ಕಿಂತ ನಾಟಕ ತುಂಬಾ ಇಷ್ಟ. ನಾನ್, ಸಿನೇಮಾ ನೋಡಿ ಅಷ್ಟೇನೂ ಕುಸಿ ಪಟ್ಟತ್ಲೆ.

ಮಾರ್ನೆ ದಿನ ಅಂದರೆ ಇಪ್ಪತ್ತೊಂದನೇ ತಾರೀಕ್ ಸೋಮವಾರ ದಿನ ಬೊಳ್ಪಿಗೆ ಒಂದು ಮ್ಯೂಸಿಯಮ್ ಮತ್ತು ಹೈದ್ರಾಬಾದ್ ನಗರ ನೋಡಿಕೆಂತ ಹೊರ್ಟೊ. ಆ ದಿನ ನಾವ್ ನೋಡ್ದ್ ಸಾಲಾರ್ ಜಂಗ್ ಮ್ಯೂಸಿಯಮ್.

ಇದ್ ನಮ್ಮ ದೇಶದ ದೊಡ್ಡ ಮ್ಯೂಸಿಯಮ್‌ಗಳ್ಳಿ ಒಂದು. ಅಲ್ಲಿ ಬಾರೀ ವಸ್ತುಗಳ ಸಂಗ್ರಹ ಉಟ್ಟು. ಹೆಚ್ಚಿನ ವಸ್ತುಗಳೆಲ್ಲಾ ಪುರಾತನ ಕಾಲದ್ದ್. ಟಿಕೇಟ್ ತಕಂಡ್ ಅದರೊಳಗೆ ಹೋದರೆ ಯಾವ್ದರ ನೋಡ್ದು ಯಾವ್ದರ ಬುಡ್ದಂತ ಸಮಸ್ಯೆ ಆದೆ. ನಾನಾ ಮೂರ್ತಿಗ, ನವರತ್ನಗ, ಕಲಾಕೃತಿಗ ದೇಶ ವಿದೇಶಗಳ ಪ್ರಾಚೀನ ಕಾಲದ ಕೈ ನೇಯ್ಗೆಯ ಬಟ್ಟೆ ಬರೆಗ, ಪ್ರಾಚೀನ ನಾಗರೀಕತೆಯ ವಸ್ತುಗ ವಾಸ್ತು ಶಿಲ್ಪಗ, ಹಳೆ ಚಾರಿತ್ರಿಕ ವಸ್ತುಗ ಹೀಂಗೆ ಎಲ್ಲಾ ವಸ್ತುಗಳ ಜೋಡ್ಸಿ ಇಸಿಯೊಳೊ. ಟಿಪ್ಪು ಸುಲ್ತಾನನ ಪಗಡೆ, ಪಟ್ಟದ ಕತ್ತಿನೂ ಉಟ್ಟು. ಬೇರೆ ಬೇರೆ ಶಿಲಾ ಮೂರ್ತಿಗಳ ಸಂಗ್ರಹಿಸಿ ಇಸಿಯೊಳೊ. ನಾನಾ ತರದ ಗಡಿಯಾರಗಳೂ ಉಟ್ಟು. ಅಲ್ಲಿದ್ದ ಶಿಲಾ ಮೂರ್ತಿಗಳ್ಳಿ ನನ್ನ ಗಮನ ಸೆಳ್ದ ಮೂರ್ತಿ ಅಂದ್ರೆ ಕಪ್ಪು ಶಿಲೆಯ ಶಿಲಾ ಬಾಲಿಕೆ. ಆ ಬಾಲಿಕೆಯ ರಚನಾ ಕೌಶಲ ಮನಸೂರೆಗೊಳ್ಳುವಂತದ್ದ್. ಅದ್ ನನ್ನ ಮನ್ಸ್‌ಂದ ಮಾಸಿ ಹೋತ್ಲೆ. ಆ ಮೂರ್ತಿ ಬಗ್ಗೆ 'ಕಾರಿರುಳ ರಾಣಿ' ಎಂಬ ತಲೆಬರಹದ ಪದ್ಯ ಬರ್ದ್ ಆ ಮೇಲೆ ದಾರಿಲಿ ಹಾಡ್ದೆ. ನಮ್ಮ ಉಪನ್ಯಾಸಕರು ತುಂಬಾ ಕುಸಿ ಪಟ್ರೊ.

ಕಾರಿರುಳ ರಾಣಿ

ಚೆಲುವನರಸುವ ಜಾಣರೆಲ್ಲಿಹರು ? ಬನ್ನಿಲ್ಲಿ
ನೋಡಿಲ್ಲಿ ನಿಂದಿಹಳು ಕಾರಿರುಳ ರಾಣಿ
ಇವಳ ದೇಹದ ಬಣ್ಣ ಕಪ್ಪಾದರೇನಂತೆ
ರೂಪರಾಶಿಯೆ ಇವಳ ಹುಡುಕಿ ಬಂದಿಹುದು.

ಇವಳ ನೋಟವೆ ಸಾಕ್ಷಿ ಸಾರಿ ಹೇಳುತಲಿಹುದು
ಇವಳಂತ ಚೆಲುವೆಯರು ಎಷ್ಟು ಸಿಗಬಹುದು
ಕರಿಮುಗಿಲ ವರ್ಣದಲಿ ತಿಳಿ ನೀಲ ಹೊಳಪಿಹುದು
ಕಂಡವರು ತಣಿಯರೆ ಆ ನಿಂತ ಭಂಗಿ.

ತನುವ ಬಾಗಿಸಿನಿಂದು ಮುಂಗುರುಳ ತೀಡುವಳು
ಹುಸಿ ನಗೆಯ ಸೂಸುವಳು ಮೋಹನಾಂಗಿ
ಹೊತ್ತ ಮುಡಿ ಭಾರದಲಿ ತಲೆ ಬಾಗಿ ಹೋಗಿಹುದು
ಕಾಣುತ್ತಿದೆ ಫಣಿ ಹೆಡೆಯ ಬಿಚ್ಚಿದಂತೆ.

ಒಲವು ಎದೆಯಲಿ ಮೂಡಿ ರಸತುಂಬಿ ಕರಿಯುತಿದೆ
ಹೃದಯಾಂಬುಧಿ ಕಮಲ ಮುಗುಟಿನಂತೆ
ನೆಟ್ಟ ಕಣ್ಣಿನ ನೋಟ ಮನಸೂರೆಗೊಳ್ಳುತ್ತಿದೆ
ಮಿನುಗುತ್ತಿದೆ ಕಾರಿರುಳ ರಾಣಿಯಂತೆ.

ಯಾವ ಬ್ರಹ್ಮನ ಕೈಯ ಚಳಕದಲಿ ಮೂಡಿತೊ
ಇವಳೆ ಕಾರಿರುಳ ರಾಣಿಯಂತೆ.

ಈ ಮ್ಯೂಸಿಯಮ್‌ನ ಸರಿಯಾಗಿ ನೋಡಿ ತಿಳ್ಕಂಬಕೆ ಒಂದು ದಿನ ಅಲ್ಲ ತುಂಬಾ ದಿನಗಳೆ ಬೇಕಾದು. ನಾವಂತೂ ಬೇಗ ಬೇಗ ನೋಡಿಕಂಡ್ ಪೇಟೆ ಕಡೆ ಹೋದೊ.

ಪೇಟೆಲಿ ನಾವ್ ನೋಡ್ದ್ ಮುಖ್ಯವಾಗಿ ಹೆಸ್ರ್ ಪಡ್ದ ಚಾರ್‌ಮಿನಾರ್ ಮತ್ತು ಮೆಕ್ಕಾಮಸೀದಿನ. ಚಾರ್‌ಮಿನಾರ್‌ಗೆ ಅದರ್‍ದೇ ಆದ ಹೆಸ್ರ್ ಉಟ್ಟು. ಅದರ ಹೆಸ್ರೇ ಹೇಳುವಾಂಗೆ ನಾಲ್ಕ್ ಮಿನಾರ್‌ಗಳ್‌ಂದ ಯಾ ಕೊತ್ತಲಗಳ್‌ಂದ ರಚಿಸಿಯೊಳೊ. ಅದರ ಒಳ ಹಾದ್ ಹೋಕಾಕನ ಆನೆ ಹೊಟ್ಟೆ ಅಡಿಲಿ ಇಲಿ ಹೋದಾಂಗೆ ಕಂಡದೆ. ಇದರ ಕಟ್ಟಿಸಿದ್ ಕ್ವಾಲಿ ಕುತುಬ್ ಶಹಾ ಗಡ. ಮೆಕ್ಕಾ ಮಸೀದಿನು ಬಾರಿ ಲಾಯ್ಕುಟ್ಟು. ಅದರ ಕಟ್ಟಿಕೆ ಸುರ್ ಮಾಡ್ದ್ ಮೊಹಮ್ಮದ್ ಸುಲ್ತಾನ. ಅದರ ಪೂರ್ತಿಗೊಳ್ಸಿದ್ ಔರಂಗಜೇಬ. ಇದೆಲ್ಲ ನೋಡಿಕಂಡ್ ಹಾಸ್ಟೆಲಿಗೆ ಹಿಂತಿರುಗಿಕಾಕನ ಹಿಂಬೊತಾಗಿತ್ತ್.

ನಾವ್ ಹೈದ್ರಾಬಾದಿಗೆ ಬಂದ ದಿನ ನಮ್ಮ ಕಾದ್‌ಕಂಡ್ ಡಾ. ಸುಬ್ಬಯ್ಯನವು ಇದ್ದೊ ಮತ್ತೆ ಅವೇ ನಾವ್ಗೆ ವಿಶ್ವವಿದ್ಯಾಲಯದ ಹಾಸ್ಟೆಲಿಗೆ ದಾರಿ ತೋರ್‍ಸಿದೊ ಅಂತ ನಾನ್ ಹೇಳಿದ್ದೆಲ್ಲ. ಅವು ಇಂದ್ ನಾವ್ಗಾಗಿ ದೊಡ್ಡ ಚಾ ಕೂಟ ಏರ್ಪಾಡ್ ಮಾಡಿದ್ದೊ. ಆ ಕೂಟಕ್ಕೆ ಅವರ ಮನೆವು ಅಲ್ಲದೆ ಬೇರೆ ಕೊಡಗಿನ ಕುಟುಂಬದೊವು ಕೂಡಾ ಸೇರಿದ್ದೊ.

ಹಿಂಬೊತ್ತು ಸುಮಾರ್ 5.30ಗಂಟೆ ಹೊತ್ತ್. ನಾವೆಲ್ಲ ಹಾಸ್ಟೆಲಿಗೆ ಬಂದೊವು ಕೈ ಕಾಲ್ ಮೋರೆ ಎಲ್ಲ ತೊಳ್ದ್ ಬಟ್ಟೆ ಎಲ್ಲಾ ಬದಲಾಯ್ಸಿ ಸರಿಯಾದ ಸಮಯಕ್ಕೆ ಚಾ ಕೂಟ ನಡೆವಲ್ಲಿಗೆ ಹೋದೊ. ಟೀಪಾರ್ಟಿ ತುಂಬಾ ಗಡದ್ದಾಗಿತ್ತ್. ಬೇರೆ ಬೇರೆ ತಿಂಡಿ ತಿನ್ಸ್ ಬೇಕಾದಷ್ಟ್ ಇತ್ತ್. ಡಾ. ಸುಬ್ಬಯ್ಯನವು ಅವರ ಮನೆವು ಹಾಂಗೆ ಅಲ್ಲಿಗೆ ಬಂದ ಇತರ ಕೊಡಗಿನವು ಎಲ್ಲಾ ನಮ್ಮ ಬಾರೀ ಕುಸಿಲಿ ಮಾತಾಡ್ಸಿದೊ. ನಾವ್ಗೆ ಕೂಡ ಊರವರ ಕಂಡ್ ತುಂಬಾ ಕುಸಿ.

ಅದೇ ದಿನ ರಾತ್ರಿ ನಾವು ಔರಂಗಾ ಬಾದಿಗೆ ಹೊರ್‍ಡಿಕಿತ್ತ್. ಟೀ ಪಾರ್ಟಿ ಮುಗ್ಸಿ ಹಾಸ್ಟೆಲಿಗೆ ತಿರ್‍ಗಿಬಂದ್ ರಾತ್ರಿ ಊಟದ ಶಾಸ್ತ್ರ ಮುಗ್ಸಿ ಪ್ರಯಾಣ ಹೊರ್‍ಟೊ. ಅದ್ ಎರ್‍ಡ್ ರಾತ್ರಿ ಒಂದು ಹಗಲ್‌ನ ಉದ್ದ ಪ್ರಯಾಣ ಆಗಿತ್ತ್.

ಔರಂಗಾಬಾದಿಗೆ : ಹೈದ್ರಾಬಾದ್‌ಂದ ಔರಂಗಾಬಾದಿಗೆ ಹೋದ ನಮ್ಮ ಪ್ರಯಾಣ ದೊಡ್ಡ ಸಾಹಸಂತ್ಲೇ ಹೇಳಕ್. ತಾರೀಕ್ 21ರಂದ್ ಕತ್ತಲೆಗೆ ಹೊರ್‍ಟ ನಾವ್ ಔರಂಗಾಬಾದಿಗೆ ಮುಟ್ಟಿದ್ ತಾರೀಕ್ 23ರಂದ್ ಬೊಳ್ಪಿಗೆ,

ಸುಮಾರ್ 9ಗಂಟೆಗೆ. ಬರ್ತಿ ಎರ್ಡ್ ರಾತ್ರೆ ಒಂದು ಹಗಲ್ ಅಂದರೆ 45 ಗಂಟೆಗಳ ಪ್ರಯಾಣ ಬಸ್ಸಿಲಿ. ಸರಿಯಾಗಿ ಊಟ, ತಿಂಡಿ ಇತ್ತೊ? ನಿದ್ರೆ ಉಟ್ಟೊ ? ವಿಶ್ರಾಂತಿ ಉಟ್ಟೊ ? ನಾವ್ 39 ಮಕ್ಕ ಇಬ್ಬರ್ ಉಪನ್ಯಾಸಕರ್, ಇಬ್ಬರ್ ಚಾಲಕರ್ ಬಸ್ಸಿಲಿ ಜಾಗ ಅಲ್ಲಿಂದಲ್ಲಿಗೆ. ಮಾರ್ಗದ ಅವಸ್ತೆ ಅಂತೂ ಹೇಳ್ದೇ ಬೇಡ. ಒಮ್ಮೆ ಬಸ್ ಆಕಾಶಕ್ಕೆ ಹಾರಿರೆ ಇನ್ನೊಮ್ಮೆ ಪಾತಾಳಕ್ಕೆ ಕುಕ್ಕರಿಸ್ತಿತ್. ಅರೆ ನಿದ್ರೆಲಿ ಕುದ್ದ್‌ಕಂಡಿದ್ದ ನಾವು ಹಾರಿ ಪಕ್ಕದವರ ಮೇಲೆ ಬೀಳ್‌ತಿದ್ದೊ. ಮಲ್ಗ್‌ವ ಪ್ರಶ್ನೆನೇ ಇಲ್ಲೆಲೆ. ನಮ್ಮ ಬುಡಿ, ಗೂಡೆಗಳ ಅವಸ್ತೆನಂತು ಹೇಳುವಾಂಗಿಲ್ಲೆ. ಹೈದ್ರಾಬಾದ್‌ಂದ ಹೊರ್ಟ ಸುರೂಗೆ ಹಾಡೆಲ್ಲ ಇತ್ತ್. ಗಡ್ದ್ ಕಾಫಿ, ತಿಂಡಿ ಆದಮೇಲೆ ಊಟನೂ ಆಗಿತ್ತಲ್ಲ. ಇನ್ನೊಂದು ಹೊಸ ಊರಿಗೆ ಹೋಗುವ ಉತ್ಸಾಹ. ಈಗ ಹಾಡು ಹೋಗಿ ಪಾಡಾಗಿತ್ತ್. ನಾವ್ ಹೊರ್ಟ ಮಾರ್ನೆ ದಿನ ಬಸ್ಸಿನ ದಾರಿ ತಪ್ಪಿ ಎಲ್ಲೆಲ್ಲೊ ಅಲ್ದ್ ಕಂಗಾಲಾದ ಮೇಲೆ ಹಾಡುನೂ ಇತ್ಲೆ ಗೀಡುನೂ ಇತ್ಲೆ. ಮುಸುಡೆಲ್ಲ ಸುಟ್ಟ ಬಾಳೆಕಾಯಿನಂಗೆ ಆಗಿ ಎಲ್ಲವುಕೂ ಹೇಂಗಾದರೊಮ್ಮೆ ಹೋಕಾದ ಊರು ಸೇರಿರೆ ಸಾಕ್‌ಂತಾಗಿತ್ತ್.

ಹಾಂಗೂ ಹೀಂಗೂ ಔರಂಗಾಬಾದ್ ತಲ್ಪಿಕಾಕನ ಎರ್ಡನೇ ರಾತ್ರಿ ಕಳ್ದ್ ಬೊಳ್ಪಾಗಿತ್ತ್. ಹೊಟ್ಟೆ ಹಸ್ದ್ ಏನೂ ಬೊತ್ತು. ಮೂರುದಿನ ಸರಿಯಾಗಿ ಮೈಕೈ ನೀರ್ ಕಂಡಿತ್ಲೆ. ಮೀಯುವ ಸಂಗತಿ ಹೇಂಗೂ ಇಲ್ಲೆಲೆ. ಮೈಯೆಲ್ಲ ದೂಳು ಕುದ್ದ್ ಬೆವರ್ ಮೆತ್ತಿ ನಾತ ಬರುವಂಗಾಗಿತ್ತ್.

ಔರಂಗಾಬಾದಿಲಿ ನಾವ್ಗೆ ಉಳ್ಕಂಕೆ ವ್ಯವಸ್ತೆ ಮಾಡ್ದ್ ಅಲ್ಲಿನ ವಿಶ್ವವಿದ್ಯಾನಿಲಯದ ಬೋರ್ಡಿಂಗ್‌ಲಿ. ಆದರೆ ಅಲ್ಲಿನ ವ್ಯವಸ್ತೆ ಏನೂ ಸರಿ ಇತ್ಲೆ. ಔರಂಗಜೇಬ ಕಟ್ಟಿಸಿದ ಯಾವುದೋ ಕಟ್ಟಡಲೆ ಕಾಲೇಜ್, ಹಾಸ್ಟೆಲ್ ಎಲ್ಲಾ ಆಗಿತ್ತ್. ನಾವು ಅಲ್ಲಿಗೆ ಮುಟ್ಟಿದ ಸಮಯನೂ ಹೆಚ್ಚ್‌ಕಡಿಮೆ ಆದ ಕಾರಣ ಆಹಾರದ ತಯಾರಿನೂ ಆಗಿತ್ಲೆ. ಅಂತೂ ಏನೋ ತಯಾರಾಗಿ ಹೋಗಿ ಕುದ್ದರೆ ಅಲ್ಲಿನ ಬೆಂಚ್ ಮೇಜ ಎಲ್ಲ ಔರಂಗಜೇಬನ ಕಾಲದ್ದೇ ಆಗಿತ್ತ್. ದೂಳು ಅದರ ಮೇಲೆ ಒಂದಿಂಚ್ ದಪ್ಪಕೆ ಬೇರೆ ಅಂಟಿತ್ತ್. ಆದರೇನ್ ನಮ್ಮ ಹೊಟ್ಟೆ ಹಸಿವಿನ ಮುಂದೆ ಅದೆಲ್ಲ ಲೆಕ್ಕಕ್ಕೆ ಬಾತ್ಲೆ. ಚಪಾತಿ ಸಾಗ್ ಮಾಡಿದ್ದೊ ಕೊಟ್ಟದರ ಬುಡದೆ ಕುಟ್ಟಿದೊ. ಆ ಹಾಸ್ಟೆಲ್‌ನ ವಾರ್ಡನ್ನ್ ಕನ್ನಡ ಜನ ಆಗಿತ್ತ್. ಅಲ್ಲಿನ ಕಾಲೇಜ್ ಮಕ್ಕ ನಮ್ಮನ ಲಾಯ್ಕಾಗಿ ನಡ್ಸಿಕಂಡೊ. ಆಸಮಾದಾನಲಿ ನಾವು ಅಲ್ಲಿದ್ದಸ್ಟ್ ದಿನ ಸುದಾರಿಸ್ಕೊಂಡೊ.

ನಾವ್ ಆಗಳೇ ಮೂರು ದಿನ ಮಿಂದತಿಲ್ಲೆಂತ ಹೇಳಿದ್ದೆಲ್ಲ. ಜರ ಬಂದಾಂಗೆ

ಆಗಿತ್ತ್. ಈಗ ಮೊಯೊನೋಂತೇಳಿರೆ ನೀರಾದರೂ ಉಟ್ಟೊ! ಅದೂ ಇತ್ಲೆ. ಅಲ್ಲಿ ನೀರಿಗೆ ಬಾರೀ ಅತ್ವಾರ. ಕಡೆಗೆ ದಾರಿ ಕಾಣದೆ ನಾನ್ ರಾಮಚಂದ್ರ ಇನ್ನ್ ಕೆಲವು ಕಾಲೇಜಿನ ಪಕ್ಕದ ರಸ್ತೆ ಬದಿಲಿದ್ದ ಟ್ಯಾಪ್ ನೀರ್ಲಿ ಮೈ ಚಂಡಿಮಾಡಿಕಂಡ್ ಡ್ರೈವಾಸ್ ಮಾಡಿಕೊಂಡೊ. ಅಲ್ಲಿ ಅಡ್ಡ ಗಿಡ್ಡ ಇತ್ಲೆ. ನಾವು ಮೊಯುವ ಬಂಡಾಟ ನೋಡಿ ಅಲ್ಲಿನ ಕಾಲೇಜ್ ಗೂಡೆಗ ಹಲ್ಲ್‌ಬುಡುತಿದ್ದೊ. ನಾವೂ ಹೇಂಗೂ ಗಂಡಸರಲ್ಲ. ನಮ್ಮ ಕೆಲ್ಸ ಮುಗ್ಸಿಕಂಡೊ. ಯಾರ್ ನಕ್ಕರೇನ್ ಅಲ್ಲ ಅತ್ತರೇನ್.

ಔರಂಗಬಾದ್‌ಲಿ : ಔರಂಗಬಾದಿರುದು ಮಹಾರಾಷ್ಟ್ರ ರಾಜ್ಯಲಿ. ಅದೊಂದು ಚಾರಿತ್ರಿಕ ಪ್ರದೇಶ. ಸಾಂಸ್ಕೃತಿಕ ಕಲಾ ಕೇಂದ್ರನೂ ಹೌದು. ಹಾಂಗಾಗಿ ದಕ್ಕಣ ಚರಿತ್ರೆಲಿ ಈ ನಗರ ತುಂಬಾ ಮಹತ್ವ ಪಡ್ದ ಸ್ತಳ. ಹಿಂದೆ ಇದ್ ವ್ಯಾಪಾರ ವಹಿವಾಟ್‌ಗಳಿಗೂ ಹೆಸ್ರಾಗಿತ್ತ್. ಇದೇ ನಗರ ಎರಡನೇ ಶತಮಾನಲಿ ಮಹಾರಾಷ್ಟ್ರದ ರಾಜದಾನಿನೂ ಆಗಿತ್ತ್. ಗಡ. ಇನ್ನೊಂದು ವಿಶೇಷಂತೇಳಿರೆ ಈ ನಗರ ಉತ್ತರ ಹಿಂದೂಸ್ತಾನಕ್ಕೂ ದಕ್ಷಿಣ ಹಿಂದೂಸ್ತಾನಕ್ಕೂ ನಡುಲಿರುವ ಕಾರಣ ದಕ್ಷಿಣದ ಕಿಟಕಿ ಅಂತ ಹೆಸ್ರ್ ಇತ್ತ್. ಜಗತ್ ಪ್ರಸಿದ್ದ ಅಜಂತ ಮತ್ತು ಎಲ್ಲೋರ ಗುಹಾಲಯಗಳಿಗೆ ಮದ್ಯಲಿ ಈ ನಗರ ಇರುದರ್‌ಂದ ಪ್ರತೀ ವರ್ಷ ಸಾವಿರಾರ್ ಪ್ರವಾಸಿಗಳನ್ನ್ ದೇಶ ವಿದೇಶಗಳಿಂದ ಸೆಳೆವಂತ ಸ್ತಳನೂ ಇದಾಗುಟ್ಟು.

ನಾವು ಔರಂಗಾಬಾದಿಲಿ ಏನೇನ್ ನೋಡ್ದೊ ಅಂತ ಹೇಳಿಕೆ ಮುಂದೆ ಈ ನಗರದ ಕೆಲವು ಹಳೆ ಕತೆ ಮತ್ತು ವಿಶೇಷತೆಗಳ ಬಗ್ಗೆ ಹೇಳ್ನೆ.

ಹದಿನೇಳನೆ ಶತಮಾನಲಿ ಔರಂಗಾಬಾದ್ ಬಾರಿ ದೊಡ್ಡ ನಗರಾಗಿತ್ತ್. ಔರಂಗಜೇಬ ಇಲ್ಲಿಯೇ ಇದ್ದ್‌ಕಂಡ್ ಅವನ ರಾಜಕೀಯ ಚಟುವಟಿಕೆನ ನಡ್ಸಿದ್. ಅಂವ ಇಲ್ಲಿಂದಲೇ ಮರಾಟರ ಶಕ್ತಿನ ಬಗ್ಗ್ ಬಡ್ದದ್. ಔರಂಗಜೇಬನ ಕಾಲಕ್ಕಿಂತ ಹಿಂದೆ ಮಾಲಿಕ್ ಅಂಬೇರಂತ ಹೇಳುವವನ ಕಾಲಲಿ ಈ ನಗರ ಕೀರ್ತಿಯ ಕೊಡಿಗೇರಿತ್ತ್ ಗಡ. ಮಾಲಿಕ್ ಅಂಬೇರನೆ ಕ್ರಿ.ಶ. 1605ರಲ್ಲಿ ಔರಂಗಾಬಾದ್ ನಗರ ಕಟ್ಟಿಕೆ ಸುರ್‌ಮಾಡ್ದ್. ಅವನ ಕಾಲಲಿ ಈ ನಗರಕ್ಕೆ ಫತೇಹನಗರಂತ ಕರೆತಿದ್ದೊ. ಕ್ರಿ.ಶ. 1621ಲ್ಲಿ ಮೊಗಲ ದೊರೆ ಶಹಜಹಾನ ಈ ನಗರಕ್ಕೆ ದಾಳಿ ಮಾಡಿ ಸುಲಿಗೆ ಮಾಡ್ತಿತ್ತ್. ಮತ್ತೆ ಕೆಲವೇ ವರ್ಷಗಳ್ಲಿ ಈ ನಗರ ಹಿಂದೆನ ಕೀರ್ತಿ ಪಡ್ದರೂ ಕ್ರಿ.ಶ. 1633ಲ್ಲಿ ಪೂರ್ತಿಯಾಗಿ ಈ ನಗರ ಮೊಗಲರ ವಶಕ್ಕೆ ಹೋತ್. ಶಹಜಹಾನ ಔರಂಗಜೇಬನ ಅಪ್ಪ ಜಹಂಗೀರನ

ಮಂಜ. ಔರಂಗಜೇಬ ದಕ್ಷಿಣದ ಮಾಂಡಲೀಕನಾಗಿರಿಕಾಕನ ಈ ನಗರಲಿ ವಾಸಿಸಿಕಂಡಿದ್ದ್ ಔರಂಗಾಬಾದ್‌ಂತ ಕರ್ರ್. ಮತ್ತೆ ಅದೇ ಹೆಸ್ರ್ ಹೆಸ್ರಿಗೆ ಬಾತ್. ಇಲ್ಲಿ ಅವ ಕಟ್ಟಿದ ಪೊರ್ಲುನ ರಚನೆಗ ತುಂಬಾ ಉಟ್ಟು.

ಈ ನಗರ ಸಮುದ್ರ ಮಟ್ಟಕ್ಕಿಂತ 1900ಅಡಿ ಎತ್ರಲಿ ಉಟ್ಟು. ಈ ನಗರ ಕೈಗಾರಿಕೆ, ಔದ್ಯೋಗಿಕ ಮತ್ತು ಶಿಕ್ಷಣ ಸಂಸ್ಥೆಗಳ್‌ಂದ, ಚಾರಿತ್ರಿಕ ಕಟ್ಟಡಗಳ್‌ಂದ ಕೂಡಿದ್ದ್ ಹೆಸ್ರ್ ಪಡ್ದುಟ್ಟು. ನಮ್ಮ ಸಂವಿದಾನದ ಶಿಲ್ಪಿನ, ಸ್ವತಂತ್ರ ಬಾರತದ ಸುರೂನ ಕಾನೂನು ಮಂತ್ರಿನೂ ಆಗಿದ್ದ ಡಾ. ಅಂಬೇಡ್ಕರ್ ಸುರುಮಾಡ್ದ ಮಿಲಿಂದರ್ ಮಹಾ ವಿದ್ಯಾಲಯ ಇಲ್ಲೇ ಇರ್ದು. ಇದೇ ಅವರ ಹುಟ್ಟೂರು ಕೂಡ. ಇಲ್ಲಿನ ಮುಖ್ಯ ಬೀದಿ ಆಕರ್ಷಕವಾಗಿ ಕಾಂಬ ವಸ್ತುಗಳ್‌ಂದ ಕೂಡಿದ್ದ್ ನೋಡಿಕೆ ಪೊರ್ಲಾಗುಟ್ಟು.

ನಾವು ಬಂದ ದಿನ ಬೊಳ್ಪಿಗೆನ ಉಪಹಾರ ಮುಗ್ಸಿಕಂಡ್ ತಡ ಮಾಡದೆ ಅಜಂತ ಗುಹಾಲಯಗಳ ನೋಡಿಕೆಂತ ಆ ಕಡೆಗೆ ಪ್ರಯಾಣ ಬೆಳ್ಸಿದೊ. ಗುಹಾಲಯ ಅಂದರೆ ಗುಹೆಗಳ, ಗವಿಗಳ ಮನೆ. ಅಜಂತ ಮತ್ತು ಎಲ್ಲೋರದ ಗುಹಾಲಯಗ ಅಪೂರ್ವ ರಚನೆ, ಅದರ ವಿಶೇಷತೆ ಪೊರ್ಲುತನ ಏನ್‌ಂತ ಹೇಳಿರೆ ಅಲ್ಲಿನ ರಚನಾ ಕೌಶಲ. ಅದರ ಶಿಲ್ಪ ಕಲಾ ಕೆತ್ತನೆಗ ! ಕಣ್ಣಾರೆ ನೋಡಿರೆ ಮಾತ್ರ ಗೊತ್ತಾದೆ. ಈ ತರದ್ ಜಗತ್ತಿನ ಯಾವ್ದೇ ಕಡೆಲಿ ಕಾಂಬಕೆ ಸಿಕ್ಕುದುಲೆಂತ ಪ್ರವಾಸಿಕರ ಅನಿಸಿಕೆ. ಜೀವನಲಿ ಒಮ್ಮೆಯಾದರೂ ನೋಡಕಾದ ಸ್ತಳ ಇದ್.

ಇದರ ವಿಶೇಷತೆ ಏನ್‌ಗೊತ್ತೊ ? ಇಲ್ಲಿ ಗುಡ್ಡ, ಬೆಟ್ಟ, ಪರ್ವತ ಉಟ್ಟು. ಇದು ಮಣ್ಣ್‌ದ್ ಅಲ್ಲ. ಬಂಡೆಕಲ್ಲ್ ಉದ್ದಗಲಕ್ಕೆ ಹರಡಿಕಂಡ್ ಉಟ್ಟು. ಬಹುಮಟ್ಟಿಗೆ ಒಂದೇ ಕಲ್ಲ್‌ನ ಆ ಬಂಡೆ ಕಲ್ಲ್‌ಗಳ್ನ ಇದ್ದದರ ಇದ್ದ ಹಾಂಗೆ ಕೆತ್ತಿ, ಕೊರ್ದ್ ನಂಬಿಕೆ ಬಾರದ ರೀತಿಲಿ ಗುಹಾಲಯಗಳ, ದೇವಸ್ತಾನಗಳ, ಚೈತ್ಯಾಲಯಗಳ, ಮೂರ್ತಿಗಳ, ದೊಡ್ಡ ದೊಡ್ಡ ಕಂಬಗಳ, ಗೋಡೆಗಳ ಮೇಲೆ ಹೂ, ಬಳ್ಳಿ, ಪ್ರಾಣಿ, ಪಕ್ಷಿ, ಚಿತ್ರಗಳ ಕೊರ್ದೊಳೊ. ಒಂದು ಕಡೆ ಇರುವ ಹಾಂಗೆ ಮತ್ತೊಂದು ಕಡೆ ಉಟ್ಟು. ಒಂದೇ ಒಂದು ಕಲ್ಲ್ ಕೂಡ್ಸಿ ಕಟ್ಟಿದ್ ಅಲ್ಲ. ಇನ್ನ್ ಅಜಂತದ ಗುಹಾಲಯಗಳಲ್ಲಿ ನಾನಾ ಚಿತ್ರಗಳ ಕಲ್ಲಿನ ಮೇಲೆ ರಚಿಸಿ ಅದಕ್ಕೆ ಬೇಕಾದಂಗೆ ಬಣ್ಣ ಹಾಕೊಳೊ. ಈ ಬಣ್ಣ ಸಾವಿರಾರ್ ವರ್ಷ ಕಳ್ದರೂ ಹಾಳಾತ್ಲೆ. ಬಂಡೆಗಳ ಸೆರೆಲಿ ನೀರ್ ಊಜಿದಲ್ಲಿ ಮಾತ್ರ ಹಂಞ ಹಾಳಾಗುಟ್ಟು. ಅಜಂತ ಮತ್ತು ಎಲ್ಲೋರದ ಕಲಾಗಾರರ ಬಾವನೆ

ಮತ್ತು ಕಲ್ಪನಾ ಶಕ್ತಿ, ತಾಳ್ಮೆ, ಕೈ ಚಳಕ, ಕೈ ಚಾಕಚಕ್ಯತೆ ಅದೆಷ್ಟ್‌ಂತ ನಂಬಿಕೇ ಆದುಲೆ. ಇಂತಹ ಕಲಾ ಗಾರರ ಉತ್ತೇಜಿಸಿ ಈ ವಿಶಿಷ್ಟ ನಿರ್ಮಾಣಕ್ಕೆ ಕಾರಣರಾದ ಅರಸುಗಳ್ನ ಪಡ್ದ ಬಾರತ ನಿಜಕ್ಕೂ ಪುಣ್ಯವಂತ ನಾಡ್‌ಂತ ಹೇಳಿರೆ ತಪ್ಪಾಕಿಲೆ.

ಅಜಂತಲಿ : ಅಜಂತ ಗುಹಾಲಯ ಔರಂಗಾಬಾದ್‌ಂದ 64ಮೈಲ್ ದೂರಲುಟ್ಟು. ಇದ್ ಇರ್ದು ಕಾಡ್ ಪ್ರದೇಶಲಿ. ಗುಡ್ಡ ಕಾಡುಗಳ ನಡುಲಿ. ಹತ್ರ ಜನವಾಸ ಇಲ್ಲೆ. ಕಾವಲ್‌ಗಾರರ್ ಮಾತ್ರ ಇದ್ದವೆ. ಬೆಳ್ಕ್‌ನ ವ್ಯವಸ್ತೆ ಉಟ್ಟು. ಸರಕಾರ ರಸ್ತೆಗೆ ತಾರ್ ಹಾಕಿ ಲಾಯ್ಕ್ ಮಾಡಿಟು. ಅಲ್ಲಿಗೆ ತಾರ್ ಮಾರ್ಗ ಆಗಿ ಹೋಗಿ ಬಾಕೆ ತೊಂದರೆ ಇಲ್ಲೆ. ಗುಹಾಲಯದವರೇಗೆ ವಾಹನ ಹೋದೆ. ಪ್ರವಾಸಿಗರ ಸೌಕರ್ಯಕ್ಕಾಗಿ ಆರ್ಕಿಯಾಲಾಜಿಕಲ್ ಖಾತೆಯವು ಕೆಲಸ ಕಾರ್ಯಗಳ ಮಾಡ್ತಾ ಒಳೊ.

ಗುಹೆಗಳ ದೂರಂದ ನೋಡಿಕಾಕನ ವಿಶೇಷ ಏನೂ ಗೊತ್ತಾದುಲೆ. ನಾ ಹಾಂಗೆನೆ ಗ್ರಹಿಸಿದೆ. ಇದರ್ಲಿ ಏನ್ ವಿಶೇಷ ಉಟ್ಟುಂತ. ಆದರೆ ಹತ್ರ ಹತ್ರ ಹೋದಾಂಗೆ ನೋಡಿ ದಂಗಾದೆ. ಅಜಂತ ಗುಹೆಗಳಿರುವಲ್ಲಿಗೆ ಹೋಗಿ ಒಂದನೇ ಗುಹೆಗೆ ಹುಕ್ಕರೆ ನಾವ್ಗೆ ಸುರೂಗೆ ಕಾಂಬೋದು ಬುದ್ಧನ ಮೂರ್ತಿ. ಬೌದ್ಧ ಮತ ಸ್ತಾಪಿಸಿದ ಬುದ್ಧನ ದರ್ಮ ಚಕ್ರ ಪರಿವರ್ತನಾ ಮುದ್ರೆಲಿ ಬೋದನೆ ಮಾಡುತ್ತಿರುವ ಹಾಂಗೆ ಕೆತ್ತಿದ್. ಈ ಮೂರ್ತಿ ಸಾಮಾನ್ಯ ಮನುಷ್ಯನಿಗಿಂತ ಮೂರು ಪಾಲ್ ದೊಡ್ಡದ್. ಅಂವ ಪದ್ಮಾಸನ ಹಾಕಿ ಕುದ್ದಾಂಗೆ ಉಟ್ಟು. ಅವನ ತಲೆ ಕೂದಲ್ ಗುಂಗುರು ಗುಂಗುರಾಗಿ ಸುರುಳಿ ಸುರುಳಿಯಾಗಿ ಸುತ್ತಿಕಂಡ್ ಉಟ್ಟು. ಅವನ ಪಕ್ಕಲಿ ಇತರ ಸುಂದರ ಮೂರ್ತಿಗ ಒಳೊ. ಬುದ್ಧನ ಮೋರೆ ಗಂಬೀರ ಶಾಂತ ಮುದ್ರೆಲಿ ಉಟ್ಟು. ಅವನ ಮೋರೆ ಮೇಲೆ ಬೇರೆ ಬೇರೆ ಕಡೆಗಳ್‌ಂದ ಬೆಳ್ಕ್ ಹಾಯ್ಸಿಕಾಕನ ಬೇರೆ ಬೇರೆ ಬಾವನೆಗಳ್ನ ಪ್ರತಿಬಿಂಬಿಸಿದ ಹಾಂಗೆ ಕಾಂಬೊದು ವಿಸ್ಮಯ ಹುಟ್ಸಿಸಿದೆ. ಅದೇ ಗುಹೆನ ಒಂದು ಪಕ್ಕಲಿ ನಾಲ್ಕ್ ಶರ್‌ರಕ್ಕೆ ಒಂದೇ ತಲೆ ಇರುವ ವಿಚಿತ್ರ ರೀತಿನ ಕೆತ್ತನೆ ಉಟ್ಟು. ಇದು ಕೂಡ ಬೇರೆ ಬೇರೆ ದಿಕ್ಕ್‌ಂದ ಬೇರೆ ಬೇರೆ ಬಂಗಿ ಕಂಡದೆ. ಇನ್ನೊಂದು ಕಡೆ ಬಾರತೀಯ ಪದ್ಧತಿಯ ನೃತ್ಯದ ದೃಶ್ಯ ಉಟ್ಟು. ಇದ್ ಬಣ್ಣದ ಚಿತ್ರ ಇಲ್ಲಿರುವ ಬಣ್ಣದ ಚಿತ್ರಗ ತುಂಬಾ ಆಕರ್ಷಕ. ಸುಮಾರ್ ಒಂದೂವರೆ ಸಾವಿರ ವರ್ಷಗಳ ಹಿಂದಿನ ಈ ಬಣ್ಣದ ಚಿತ್ರಗ ಇನ್ನೂ ಹಾಂಗೇ ಇರುದು. ಆ ಬಣ್ಣಗಾರಿಕೆಯ ಪರಿಣತಿ ತೋರ್‌ಸಿದೆ. ಬಣ್ಣ ಕೆಲವು ಕಡೆ

ಮಸ್ಕಾಗಿದ್ದರೆ ಬಿಸಿಲ್ ಮಳೆಗೆ ಕಲ್ಲ್ ಬಿರ್ಕ್ ಬುಟ್ಟು ನೀರ್ ಸೋರಿದ್ದೇ ಕಾರಣ. ನರ್ತನದ ದೃಶ್ಯಲಿ ನೃತ್ಯಾಂಗನೆಗ ವಿಶೇಷ ವಸ್ತ್ರಗಳ್ನ ಬೆಲೆ ಬಾಳ್ವ ಆಭರಣಗಳ್ನ ಕಿರೀಟಗಳ್ನ ದರ್ಸಿಕಂಡ್ ನೃತ್ಯ ಮಾಡುವ ಹಾಂಗೆ ರಚಿಸಿಯೊಳೊ. ಅವರ ಪಕ್ಕಲಿ ನೃತ್ಯಗಾರರಿಗೆ ಸಹಾಯ ಮಾಡುವ ಗಾಯನಗಾರರ್ ವಾದ್ಯಗಳ ನುಡಿಸುವೊವ್ ಅವರ ಕಾಯಕಲಿ ಮಗ್ನರಾಗಿರುವ ಹಾಂಗೆ ಒಳೊ. ಈ ಚಿತ್ರಗ ಬಾರತೀಯರ ಕಲಾ ಸಕ್ತಿನ ಎತ್ತಿ ತೋರ್ಸಿದೆ.

ಈ ಒಂದನೇ ಗುಹೆ ತುಂಬಾ ವಿಶಾಲವಾಗಿರುವ ಗುಹೆ. ಇದರ ಮತ್ತೊಂದು ಕಡೆಲಿ ಅಜಂತರಾಣೀಂತ ಕರೆವ ಇನ್ನೊಂದು ಪೊರ್ಲುನ ಗೂಡೆನ ಚಿತ್ರ ಉಟ್ಟು. ಅಜಂತದ ಕಲಾಗಾರರ್ ಸ್ತ್ರೀಯರ ಪೊರ್ಲುತನ ಚಿತ್ರಿಸುವಲ್ಲಿ ಇಲ್ಲಿ ಕೃತಕೃತ್ಯರಾಗೊಳೊ. ಸ್ತ್ರೀಯರ ಬಾವನೆ, ಅವರ ಬಂಗಿ, ಅವರ ಅಂಗ ವಿನ್ಯಾಸ, ನೋಟ ಇವುಗಳನ್ನೆಲ್ಲಾ ವಿಸ್ಮಯ ರೀತಿಲಿ ಚಿತ್ರಿಸಿಯೊಳೊ, ಅದೇ ಗುಹೆಲಿ ಬೋದಿಸತ್ವ ಪದ್ಮಪಾಣಿಯ ಚಿತ್ರ ಉಟ್ಟು. ಇದ್ ಕೂಡ ಲಾಯ್ಕಾಗುಟ್ಟು. ಇನ್ನೊಂದು ಕಡೆ ಸ್ತ್ರೀಯೊಬ್ಬಳ ಅಲಂಕಾರ ಮಾಡ್ತಿರುದರ ಚಿತ್ರಿಸಿಯೊಳೊ. ಇಲ್ಲಿ ಸ್ತ್ರೀನ ಮೋರೆ ಕಾಂಬೊದಿಲೆ, ಅವಳ್ ಅಲಂಕಾರ ಮಾಡಿಕಂಬ ರೀತಿನ ಚಿತ್ರಿಸಿದ ಕಲೆ ಅಪೂರ್ವಂತೇಳಕ್. ಅವಳ ಅಂಗ ವಿನ್ಯಾಸನ ಸೂಕ್ಷ್ಮ ಆಗಿ ಚಿತ್ರಿಸಿದ ರೀತಿ ಮೆಚ್ಚದೆ ಇರಿಕೆ ಆದುಲೆ. ಮತ್ತೊಂದು ಕಡೆ ಕೃಷ್ಣ ಬಣ್ಣದ ಸ್ತ್ರೀ ಚಿತ್ರ ಉಟ್ಟು. ಅದರ ಪೊರ್ಲುತನನೂ ವಿಶೇಷನೆ. ಅಷ್ಟ್ ಸುಂದರ ಬಣ್ಣದ ಚಿತ್ರಗ ಪ್ರಪಂಚದ ಬೇರೆ ಕಡೆ ಕಾಂಬಕೆ ಸಿಕ್ಕುದು ದುರ್ಲಬಗಡ.

ವಿಶಾಲವಾಗಿರುವ ಒಂದನೇ ಗುಹೆ ನೋಡಿಕಂಡ್ ಮುಂದೆ ಹೋದರೆ ಎರಡ್ನೆ ಗುಹೆಲಿ ಪ್ರಕೃತಿನ ಸೌಂದರ್ಯನ ಚಿತ್ರಿಸಿರುದರ್ನ ಕಾಣಕ್. ಇಲ್ಲಿ ಕಲಾಗಾರರ್ ಬರ್ದ ಬಣ್ಣದ ಚಿತ್ರದ ಕೌಶಲಕ್ಕೆ ಬೆರ್ಗಾಗದವು ಯಾರೂ ಇರಿಕಿಲ್ಲೆ.

ಅಜಂತಲಿ ಇರುವ ಎಲ್ಲಾ ಗುಹೆಗ ನಮ್ಮ ಗಮನ ಸೆಳೆದುಲೆ. ಕೆಲವು ಅಪೂರ್ಣ ಸ್ಥಿತಿಲಿ ಉಟ್ಟು. ನೀವು ಹದಿನಾರನೆ ಗುಹೆಗೆ ಹೋದರೆ ಆ ಗುಹೆನ ಮೇಲೆ ಬಾಗಲಿ ಕಲ್ಲಿನ ಪಕ್ಕಾಸ್, ತೊಲೆ, ದಿಮ್ಮಿಗಳ ಕೆತ್ತಿದ ಜಾಣ್ಮೆ ನಮ್ಮ ನಿಂತ್ ನೋಡುವ ಹಾಂಗೆ ಮಾಡ್ದೆ. ಆ ತೊಲೆಗಳ ಕೊನೆ ಬಾಗಲಿ ಸಂಗೀತಗಾರರ್ನ, ಹಾರುವ ದಂಪತಿಗಳ್ನ ಕೆತ್ತಿಯೊಳೊ. ಈ ಮೂರ್ತಿಗಳ ಮೋರೆನ ಬಾವನೆಗ ಬೇರೆ ಬೇರೆ ರೀತಿಲಿ ಇರ್ದು ವಿಶೇಷ. ಕೆಲವು ತೊಲೆನ ತೂಕಕ್ಕೆ, ಹೊತ್ತ್ ಬಚ್ಚಿ ನರಳುವ ಹಾಂಗೆ, ಕೆಲವು ಬಿಗುಮಾನಂದ ಇರುವ ಹಾಂಗೆ, ಇನ್ನ್ ಕೆಲವು ಹಗುರಾಗಿ ಬಾವಿಸಿದ ಹಾಂಗೆ ಮತ್ತೆ ಕೆಲವು ಅದನ್ನ್

ಆದರಿಸಿ ಹಿಂದಿನ ಕಾಯಕದ ಕುಸಿ ಅನುಬವಿಸುವ ಹಾಂಗೆ ಉಟ್ಟು. ಅದರ್ಲೂ ನಮ್ಮ ಗಮನ ಸೆಳೆಯುವಂತದ್ದ್ ಅಂದರೆ ಹಾರುವ ದಂಪತಿಗಳ ಆಕರ್ಷಕ ಬಂಗಿ.

ಮುಂದೆ ನಾವು ಹದಿನೇಳನೆ ಗುಹೆಗೆ ಹೋದರೆ ಅಲ್ಲಿ ರಾಜ ದಂಪತಿಗಳ ಮೆರವಣಿಗೆನ ಚಿತ್ರ ಉಟ್ಟು. ಅವರ ಸುತ್ತುವರ್ದ್‌ಕಂಡ್ ಸೇವಕ ಸೇವಿಕೆಯರ್ ಒಳೊ. ಎರ್ಡ್ ಸಿಲ್ಕಿನ ಬಣ್ಣದ ಕೊಡೆ ಹಿಡ್ದಾಂಗೆ ಉಟ್ಟು. ಹಿಂದೆಗೆ ನೆರ್ಳ್ ಕೊಡುವ ಮರ ಉಟ್ಟು. ಇಬ್ಬರ್ ಹೆಂಗ್ಸರ್ ಕಿಟಕಿಂದ ಮೆರವಣಿಗೆನ ಇಣ್ಕಿ ನೋಡುವಾಂಗೆ ಇದ್ದರೆ ಗುಹೆನ ಬಾಗಿಲಿನ ಪಕ್ಕಲಿ ಅಪ್ಸರೆಯರ್ ಒಳೊ.

ಬಾರತದ ನಾರಿಯರ್ ಪ್ರಾಚೀನ ಕಾಲಂದ ಇಂದಿನವರೇಗೂ ಶೃಂಗಾರಕ್ಕೆ ಮಾರ್ ಹೋದೊವು. ಇದೇ ಗುಹೆಲಿ ಒಂದು ಕಡೆ ಒಬ್ಬಳ್ ಹೆಂಗ್ಸ್ ಕನ್ನಡಿ ಮುಂದೆ ನಿತ್ತುಟು. ಇನ್ನೊಬ್ಬಳ್ ಅಲಂಕಾರ ವಸ್ತುಗಳ ಹಿಡ್ಕಂಡ್ ಸಹಾಯಕ್ಕೆ ಕಾದ್ ನಿತ್ತುಟು. ಅವಳ ಬಲಕಡೆಲಿ ಕಸ ಗಿಸ ಎಲ್ಲ ಗುಡ್ಸಿ ತೆಗೆಕೆ ತಯಾರಾಗಿ ಇನ್ನೊಬ್ಬಳ್ ನಿತ್ತುಟು. ಶೃಂಗಾರಕ್ಕೆ ಆಸಕ್ತಳಾದವಳ್ ರಾಣಿ ವಾಸದವಳ್‌ಂತ ನೋಡಿಕಾಕನ ಗೊತ್ತಾದೆ. ಅವಳ್ ತನ್ನ ಅಂದ ಚೆಂದಕ್ಕೆ ತಾನೇ ಬೆರಗಾದವಳ ಹಾಂಗೆ ಕಂಡದೆ.

ಇವೆಲ್ಲಾ ನೋಡಿಕಂಡ್ ಕಲಾಗಾರರ ನೈಪುಣ್ಯತೆಗೆ ಮನಸೋತ್ ಹತ್ತೊಂಬತ್ತನೆ ಗುಹೆಗೆ ಹೋದರೆ ನಂಬಿಕಾಗದ, ವಿಸ್ಮಯ ಹುಟ್ಟಿಸುವ ಶಿಲ್ಪ ಕಲಾ ರಚನೆ ನಮ್ಮ ಮುಂದೆ ಕಂಡದೆ. ಈ ಗುಹೆಲಿ ಎರ್ಡ್ ಮಹಡಿಯ ರಚನೆ ಉಟ್ಟು. ಇದೆಲ್ಲ ಒಂದೇ ಕಲ್ಲ್‌ನ ಕೊರ್ದ್ ಮಾಡ್ದ್‌ಂತ ಸುರೂಗೆನೆ ಹೇಳಿಯೊಳೆ. ಕಲ್ಲ್ ಕಲ್ಲ್ ಸೇರ್ಸಿ ಕಟ್ಟಿ ಮಾಡ್ದ್ ಅಲ್ಲ. ಈ ಗುಹೆನ ವಿಶೇಷ ತರದ ಕಂಬಗಳ್‌ಂದ, ವಿಚಿತ್ರಾಕಾರದ ಕಮಾನ್‌ಗಳ್‌ಂದ ಅಲಂಕರಿಸಿಯೊಳೊ. ಇಲ್ಲಿರುವ ಗೋಡೆನ ಎಲ್ಲಾ ಕಡೆಗಲ್ಲಿ ನಾನಾ ಗಾತ್ರದ ಬುದ್ಧನ ಮೂರ್ತಿಗಳ ರಚಿಸಿಯೊಳೊ. ಅವ್ಗಳ ಬಂಗಿ ಒಂದೊಂದರ್ದ್ ಒಂದೊಂದು ತರ. ಅಲ್ಲಿರುವ ನಾಗರಾಜ ಮತ್ತು ನಾಗಿಣಿಯರ ವಿಚಿತ್ರ ಬಾರೀ ಲಾಯ್ಕುಟ್ಟು. ಅಲ್ಲಿರುವ ಚೈತ್ಯಾಲಯನೂ ಕಡಿಮೆ ಏನಿಲ್ಲೆ.

ಈ ಗುಹಾಲಯಗಳ ಎರ್ಡ್ ಬದಿಗೆ ನೋಡಿರೆ ಬೆಟ್ಟದ ಸಾಲ್ ಕಂಡದೆ. ನಡೂಲಿ ತೋಡು ಹರ್ದದೆ. ಗಿಡ ಮರ ಕಾಡ್ ಬೆಳ್ದುಟು. ಗುಹಾಲಯದ ಮತ್ತು ಎದ್‌ರ್‌ಗಡೆ ಬೆಟ್ಟ ಕೂಡುವಲ್ಲಿ ಮುಂದುಗಡೆ ಒರ್ತೆಯ ನೀರ್ ಕೆಳಕ್ಕೆ ಜೆಗ್ದ್ ಸಣ್ಣ ಜಲಪಾತಾಗಿ ತೋಡಾಗಿ ಹರ್ದದೆ. ಈ ಪ್ರಾಕೃತಿಕ ದೃಶ್ಯಂದ

ಗುಹಾಲಯಗಳಿಗೆ ಕಳೆ ಬಂದುಟು.

ಇಂತ ಮಾನವ ರಚಿತ ಮಹಾಸಾಹಸ, ಚರಿತ್ರೆಲಿ ಏನಾಗಿ ಹೋಗಿತ್ತ್‌ಂತ ನಾನ್ ಹಂಞದರೂ ಹೇಳದೆ ಇದ್ದರೆ ದೊಡ್ಡ ತಪ್ಪಾದೆ.

ಅಶೋಕ ಚಕ್ರವರ್ತಿಯಂತಾ ಮೌರ್ಯ ಅರ್ಸರ ಕಾಲಲಿ ಮತ್ತೆ ಕನಿಷ್ಕನ ಕಾಲಲಿ ಹಾಂಗೆನೆ ಹರ್ಷವರ್ಧನನ ಕಾಲಲಿ ಬೌದ್ಧ ಮತಕ್ಕೆ ರಾಜಾಶ್ರಯ ಸಿಕ್ಕಿ ದೇಶ ವಿದೇಶಗಳಲ್ಲಿ ಬೌದ್ಧ ಮತ ತುಂಬಾ ಪ್ರಚಾರಕ್ಕೆ ಬಾತ್. ಗುಪ್ತರ ಕಾಲಲಿ ಹಿಂದೂ ದರ್ಮಕ್ಕೆ ತುಂಬಾ ಪ್ರೋತ್ಸಾಹ ಸಿಕ್ಕಿತ್. ಗುಪ್ತರ ಕಾಲದ ಹಿಂದೂ ದರ್ಮದ ಸುವರ್ಣ ಯುಗ ಅಂತ ಕರ್ದವೆ. ಹಾಂಗಾಗಿ ನಾಲ್ಕನೇ ಶತಮಾನದ ನಂತ್ರ ಬೌದ್ಧ ದರ್ಮ ಹಿಂದೆ ಸರಿತಾ ಬಾತ್. ಅಜಂತಾ ಗುಹೆಗ ತನ್ನ ಪ್ರಾಮುಖ್ಯತೆನ ಕಳ್ಕಂಡ್ ಅವಶೇಷಾಗಿ ಉಳಿಯಕಾತ್ ಮತ್ತು ಜನರ ಗಮನಂದ ಹನ್ನೆರಡ್ ಶತಮಾನಗಳ ಕಾಲ ಮರ್ತೇ ಹೋಗಿತ್ತ್. ಅದ್ ಮತ್ತೆ ಬೆಳ್ಕಿಗೆ ಬಂದದ್ ಒಂದು ಅನಿರೀಕ್ಷಿತ ಗಟನೆಂದಂತೇಳ್ವೆ.

ಕ್ರಿ.ಶ. 1819ರಲ್ಲಿ ಪ್ರಾಣಿ ಬೇಟೆಗೆ ಹೋದ ಬ್ರಿಟಿಷ್ ಸೈನಿಕರ ಕಣ್ಣಿಗೆ ಎದ್‌ರ್ ಬಾಗದ ಬೆಟ್ಟಲಿ ತಿರ್‌ಗಾಡ್‌ತ್ತಾ ಇರಿಕಾಕನ ಈ ಗುಹೆಗ ಕಣ್ಣಿಗೆ ಬಿತ್ತ್. ಅವು ಬ್ರಿಟೀಷ್ ಸರಕಾರಕ್ಕೆ ಮಾಹಿತಿ ಕೊಟ್ಟೊ. ಆ ಮೇಲೆ ಸರ್ ಜೇಮ್ಸ್ ಫರ್ಗ್ಯೂಸನ್, ಮೇಜರ್ ಗಿಲ್, ಜೋರ್ಜ್ ಗ್ರಿಫಿತ್ತ್, ಲೇಡಿ ಹೆರ್ರಿಂಗ್‌ಹಾಮ್‌ನಂತ ವಿದ್ವಾಂಸರ್ ಈ ಬಗ್ಗೆ ನಿಗಾವಹಿಸಿ ಪ್ರಚಾರಕ್ಕೆ ತಂದೊ ಹಾಂಗಾಗಿ ಇಂದ್ ನಾವು ಕಾಣ್‌ವಾಂಗೆ ಆತ್.

ಈ ಗುಹೆಗಳ ನಿರ್ಮಾಣ ಒಂದೇ ಕಾಲಲಿ ಆದದ್ದಲ್ಲ ಇದ್ ಕ್ರಿ.ಪೂ. ಎರಡನೇ ಶತಮಾನಂದ ಕ್ರಿ.ಶ. ಏಳನೇ ಶತಮಾನದ ಒಳಗೆ ಆದಂತ ಕೆಲ್ಸ. ಐದನೇ ಶತಮಾನಲಿ ಬಾರತಕ್ಕೆ ಯಾತ್ರಿಕನಾಗಿ ಬಂದ ಚೀನದ ಫಾಹಿಯಾನ್ ಎಂಬವ ಹಾಂಗೆನೆ ಯೋಗ್–ಚ್ವಾಂಗ್‌ಓತೇಳಂವ ಗುಹೆನ ಉಲ್ಲೇಖಿಸಿಯೊಳೊ. ಬ್ರಿಟಿಷ್ ಚರಿತ್ರೆಕಾರ ಹೇವಲ್ಸ್‌ಂತೇಳಂವ 'ಬಣ್ಣಗಾರಿಕೆ, ಶಿಲ್ಪಶಾಸ್ತ್ರ, ವಾಸ್ತುಶಿಲ್ಪ ಈ ಮೂರರ ಸಂಗಮಂದ ಅಪ್ರೂಪದ ಕಲಾ ರಚನೆ ಅಜಂತಲಿ ಪ್ರತ್ಯಕ್ಷ ಆಗುಟುಂತ' ಹೇಳಿಟು.

ಇಂತ ಅಪ್ರೂಪದ ನಿರ್ಮಾಣ ನೋಡಿಕಂಡ್ ಹಿಂತಿರ್ಗಿ ಬಾಕನ ನಮ್ಮ ಹೃದಯ ಸಂತೋಷ, ಹೆಮ್ಮೆಂದ ತುಂಬಿ ಹೋಗಿತ್ತ್. ಅಲ್ಲಿ ಮನುಷ್ಯ ನಡ್ಸಿದ ಸಾಹಸಕ್ಕೆ ಕಲಾ ಚಮತ್ಕಾರಕ್ಕೆ ಬೆರ್ಗಾಗಿ ಅಂತ ಕಲೆಗಾರರ್ನ, ಅವ್ಕೆ ಉತ್ತೇಜನ ಕೊಟ್ಟ ಅರ್ಸರ್ ಹುಟ್ಟಿದ ಈ ದೇಶಲಿ ನಾವೂ ಹುಟ್ಟಿದಲ್ಲೊಂತ ಹೆಮ್ಮೆ ಆತ್.

ನಾವ್ ಅಜಂತಂದ ಹೊರ್ಟ್ ಔರಂಗಾಬಾದ್ ತಲ್ಪಿಕಾಕನ ರಾತ್ರೆ ಗಂಟೆ ಎಂಟ್‌ವರೆ ಆಗಿತ್ತ್. ತುಂಬಾ ಬಚ್ಚಿ ಹೋಗಿತ್ತ್. ಪೇಟೆ ಕಡೆ ಹೋಗಿ ತಿರ್ಗುವ ಮನಸ್ಸಾತ್ಲೆ. ಮೀಂದ್ ಊಟ ಮಾಡ್ದೊ. ಅಲ್ಲಿನ ಕಾಲೇಜ್ ಮಕ್ಕ ನಾವ್ ಅವು ಕೂಡಿ ಮನರಂಜನಾ ಕಾರ್ಯಕ್ರಮ ಮಾಡನೋ ಅಂತ ಒತ್ತಾಯ ಮಾಡ್ದೊ. ಹಾಂಗಾಗಿ ಒಂದು ಗಂಟೆ ಹೊತ್ತು ಹಾಡ್ ಹಾಡುವ ಕಾರ್ಯಕ್ರಮ ನಡ್ಸಿ ನಿದ್ದೆ ಮಾಡ್ದೊ.

ದೌಲತಾಬಾದಿಗೆ : ಮಾರ್ನೆ ದಿನದ ಕಾರ್ಯಕ್ರಮ ಮುಖ್ಯವಾಗಿ ಎರ್ಡ್. ಒಂದು ದೌಲತಾಬಾದ್ ಕೋಟೆ ನೋಡ್ದು ಇನ್ನೊಂದು ಎಲ್ಲೋರ ಗುಹಾಲಯಗಳ ವೀಕ್ಷಿಸುದು. ತಾರೀಕ್ ಇಪ್ಪತ್ನಾಲ್ಕ್ ಗುರುವಾರ ಬೊಳ್ಪಿಗೆ ಬೇಗ ಎದ್ದ್, ಮೀದ್ ಉಪಹಾರ ಮುಗ್ಸಿ ಸುರೂಗೆ ದೌಲತಾಬಾದಿಗೆ ಹೋದೊ. ದೌಲತಾಬಾದ್ ಕೋಟೆ ಎಲ್ಲೋರಕ್ಕೆ ಹೋಗುವ ದಾರಿಲೇ ಇರ್ದು. ಔರಂಗಾಬಾದ್‌ಂದ ಈಶಾನ್ಯಕ್ಕೆ ಇವೆರಡೂ ಇರ್ದು. ಎಲ್ಲೋರಕ್ಕೆ ಒಂಬತ್ತ್‌ಮೈಲಾದರೆ, ಕೋಟೆಗೆ ಹದಿನಾರ್ ಮೈಲ್.

ದೌಲತಾಬಾದ್‌ನ ಹಳೆ ಹೆಸ್ರ್ ದೇವಗಿರಿ ಅಂತ. ಸುಮಾರ್ ಹನ್ನೆರಡನೇ ಶತಮಾನಲಿ ಹಿಂದೂಕುಲದ ಯಾದವ ವಂಶದವು ಆಳ್‌ತಿದ್ದೊ. ಕ್ರಿ.ಶ. 1294ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಎಂಬವ ಯಾದವ ಅರಸನ ಸೋಲಿಸಿ ದೇವಗಿರಿನ ವಶಪಡ್ಸಿಕಂಡತ್. ಕ್ರಿ.ಶ. 1308ರ್ಲಿ ಮಹಮ್ಮದ್–ಬಿನ್–ತುಗ್ಲಕ ಗೆದ್ದ್‌ಕಂಡತ್. ಇಂವ ತುಂಬಾ ವಿದ್ಯಾವಂತ ಮತ್ತು ಬುದ್ಧಿವಂತ ಅರಸನಾಗಿದ್ದರೂ ಇವನ ವಿಚಿತ್ರ ನಡ್ತೆಂದಾಗಿ ಚರಿತ್ರೆಲಿ ಹುಚ್ಚುದೊರೆಂತ ಹೆಸ್ರ್ ಪಡ್ದುಟ್ಟು. ನಿಜವಾಗಿ ಅಂವ ಹುಚ್ಚು ದೊರೆ ಅಲ್ಲ. ಅಂವ ಮಾನವೀಯ ಗುಣಗಳಿರುವ ಅರಸನಾದ್ರೂ ಕೆಲವೊಮ್ಮೆ ತೀರಾ ಕ್ರೂರಿಯಾಗಿ ವರ್ತಿಸುಟು. ಅಂವ ಪರಸ್ಪರ ವಿರುದ್ಧ ಗುಣಗಳ ಮಿಶ್ರಿತ ವ್ಯಕ್ತಿಯಾಗಿತ್ತ್. ಅಂವ ಗಣಿತ, ಖಗೋಳ ಶಾಸ್ತ್ರ, ತರ್ಕ ಶಾಸ್ತ್ರಗಳಲ್ಲಿ ಪರಿಣತನೂ ಆಗಿತ್ತ್. ಅಂವ ಕವಿನೂ, ಮಾತುಗಾರನೂ, ಭಾಷಣಕಾರನೂ, ಬರಹಗಾರನೂ, ತತ್ವಶಾಸ್ತ್ರಜ್ಞನೂ ಹೀಂಗೆ ಎಲ್ಲವೂ ಆಗಿತ್ತ್. ಅಂವ ಸಮಾಜ ಸುಧಾರಕನೂ ಹೌದು. ನಮ್ಮ ದೇಶಲಿ ಮದ್ಯಪಾನ ನಿಷೇಧ ಮಾಡ್ದ ಸುರೂನ ದೊರೆ. ಅಂವ ಲೋಹದ ನಾಣ್ಯನ ಬಳಕೆಗೆ ತಂದವನೂ ಹೌದು. ಅಂವ ಸುರೂಗೆ ತಾಮ್ರದ ನಾಣ್ಯನ ಜಾರಿಗೆ ತಾತ್ ಮತ್ತೆ ಚಿನ್ನದ ನಾಣ್ಯ, ಬೆಳ್ಳಿ ನಾಣ್ಯನ ಬಳಕೆಗೆ ತಾತ್. ಆದರೆ ಜನಗ ಅವಂಗೆ ವಂಚಿಸಿದ ಕಾರಣ ರಾಜ್ಯದ ಹಣಕಾಸ್ ವ್ಯವಸ್ತೆ ಕೆಟ್ಟ್ ಹೋಗಿ ನಾನಾ ಸಮಸ್ಯೆ ಉಂಟಾತ್. ಅವನ ಸಾಮ್ರಾಜ್ಯ ಉತ್ತರ ಭಾರತ ಮಾತ್ರ ಅಲ್ಲ

ದಕ್ಷಿಣಲಿ ಕರ್ನಾಟಕದವರೇಗೆ ಹಬ್ಬಿತ್ತ್. ರಾಜದಾನಿ ಸಾಮ್ರಾಜ್ಯದ ನಡೂಲಿ ಬೇಕುಂತೇಳ್ವ ಕಾರಣಕ್ಕಾಗಿ ದಿಲ್ಲಿಂದ ದೌಲತಾಬಾದಿಗೆ ಬದಲಾಯಿಸಿತ್. ಅಂವ ಆಡಳಿತ ವ್ಯವಸ್ತೆನ ಒಂದು ವೇಳೆ ಬದಲಾಯ್ಸಿದರೆ ಆಗ್‌ತಿತ್ತೇನೊ. ಆದರೆ ಹಾಂಗೆ ಮಾಡದೆ ಆಡಳಿತ ಯಂತ್ರದೊಂದಿಗೆ ದಿಲ್ಲಿಯ ಎಲ್ಲಾ ಜನತೆಗೂ ದೌಲತಾಬಾದಿಗೆ ಹೋಕುಂತ ಕಾನೂನು ಮಾಡ್ತ್. ಮತ್ತೆ ಕೆಲವೇ ದಿನಲಿ ತನ್ನ ನಿರ್ದಾರ ಬದಲಾಯ್ಸಿ ಎಲ್ಲವೂ ದಿಲ್ಲಿಗೆ ಹಿಂತಿರಿಗಿ ಹೋಕುಂತೇಳ್ತ್. ಇದರಿಂದಾಗಿ ನಷ್ಟ ಕಷ್ಟ ಅಷ್ಟಿಷ್ಟಲ್ಲ ಸಾವಿರಾರ್ ಜನ ಪ್ರಾಣನೂ ಕಳ್ಕಂಡೊ.

ಇವಂಗೆ ಮಕ್ಕ ಇತ್ಲೆ. ಇಂವ ತೀರಿ ಹೋದ ಮೇಲೆ ಈ ಕೋಟೆ ಬಹಮನಿ ಸುಲ್ತಾನರ ಕೈ ಕೆಳಗೂ ಅವರ್‌ಂದ ಅಹಮದ್ ನಗರದ ನಿಜಾಮ ಶಾಹಿಯವುಕೂ, ಆಮೇಲೆ ಮೊಗಲರಿಗೂ, ಕಡೆಗೆ ಹೈದರಾಬಾದಿನ ಸುರೂನ ನಿಜಾಮ, ಅಸಿಪ್ ಜಹನ ಕೈ ಕೆಳಗೂ ಹೋತ್.

ದೌಲತಾಬಾದ್ ಕೋಟೆನ ಗೋಡೆಗೆ ಯಾ ಪೌಳಿಗ ಎತ್ತರ ಇದ್ದ್ ನುಣ್ಪಾಗಿ ಮತ್ತು ಕೊನೇಲಿ ಚೂಪಾಗಿ ಇದ್ದ್ ಪಿಜಿನ್, ಹಾವು ಕೂಡ ಹತ್ತಿಕೆ ಕಷ್ಟ ಪಡುವ ಹಾಂಗೆ ಉಟ್ಟು. ಕೋಟೆನ ಸುತ್ತು ಮುತ್ತ ನೂರಾರ್ ಕಟ್ಟಡಗ ಉಟ್ಟು. ಈಗ ಅದೆಲ್ಲ ಹಾಳ್‌ಬಿದ್ದ್ ಹೋಗುಟು. ಕೋಟೆನ ಎದ್‌ರ್ ಬಾಗಲಿ ಒಂದು ದೊಡ್ಡ ಫಿರಂಗಿನ ಇಸಿಯೊಳೊ. ಒಳ ಬಾಗಲಿ ಚೀನೀ ಮಹಲ್ ಅಂತ ಕರೆವ ಒಂದು ನಿರ್ಮಾಣ ಉಟ್ಟು. ಅದರ್ಲಿ ಗೋಲ್ಕೊಂಡದ ಕಡೆ ಅರಸ ಅಬುಲ್-ಹಸನ್-ತಾನ್ ಶಹಾ ಎಂಬವನ, ಅಂವ ಸಾಯುವವರೇಗೆ ಸೆರೆ ಮನೆಲಿ ಇಸಿದ್ದೊ ಗಡ.

ಕೋಟೆನ ದರ್ಶನ ಪಡೆಕೆ ಬೇರೆ ಬೇರೆ ಕಡೆಂದ ಪ್ರವಾಸಿಗರ್ ಬಂದಿದ್ದೊ. ಬೊಂಬಾಯಿ ಕಡೆಂದ ಬಂದ ಗೂಡೆಗಳ ಗುಂಪು ನಾವ್ಗೆ ಇಲ್ಲಿ ಪರಿಚಯ ಆತ್. ಇಲ್ಲಿ ಕೋಟೆನ ಮೇಲೆವರೇಗೆ ಹೋಕುಂತಾದರೆ ಬಳ್ಸಿ ಬಳ್ಸಿ ಸುತ್ತು ಹಾಕಿ ಹಾಕಿ ಹತ್ತಿಕಂಡ್ ಹೋಕು. ಕೋಟೆ ಮೇಲೆ ಹೋಗುವ ದಾರಿನೂ ಎಲ್ಲ ಕೋಟೆಗಳಹಾಂಗೆ ಅಲ್ಲ. ಒಂದು ತರ ವಿಶಿಷ್ಟ ರೀತಿದ್. ಒಂದು ಕಡೆ ದಾರಿ ಉಟ್ಟುಂತ ಹೋದರೆ ಅಲ್ಲಿ ಮುಂದೆ ಹೋಕೆ ದಾರಿ ಇರ್ದುಲೆ. ಎಲ್ಲಿ ದಾರಿ ಇರಿಕಿಲೆಂತ ಗ್ರಹಿಸುವೆನೊ ಅಲ್ಲಿ ದಾರಿ ಇದ್ದದೆ. ಹಂತ ಹಂತಕೂ ಅನುಮಾನ. ಇದ್ ದಾಳಿಕಾರರ ದಾರಿ ತಪ್ಸಿಕೆ ಮಾಡ್ದ ರಚನಾ ಕೌಶಲ. ಕೆಲವು ಕಡೆ ಗುಹೆಯ ಹಾಂಗಿರುವ ದಾರಿ. ಅಲ್ಲಿ ಒಂದು ಚೂರು ಬೆಳ್ಕಿಲ್ಲೆ. ಅಂತಲ್ಲಿ ಪಹರೆಯಂವ ದೊಂದಿ ಹಿಡ್ದ್ ದಾರಿ ತೋರಿಸ್ತಿತ್ತ್. ಒಂದು ವೇಳೆ ದಾರಿ ತಪ್ಪಿ ಹೋದರೆ ಎಲ್ಲೆಲ್ಲೊ ಹೋಗಿ ಬಿದ್ದ್ ಹಲ್ಲ್ ಮುರ್ಕಂಕಾದು, ಇಲ್ಲೆ

ಜೀವ ಹೋದ್ರೂ ಹೋದು. ನಮ್ಮ ಯಾರ ಕೈಲೂ ಟಾರ್ಚ್ ಲೈಟ್ ಇತ್ಲೆ. ನಾನ್ ಇದ್ದದರ್ರೂ ಕೋಣೆಲಿ ಬುಟ್ಟ್ ಹೋಗಿದ್ದೆ. ನಾವಂತೂ ಇದ್ದ ಬೊಳ್ಪಿಲಿ ಕುರ್ದಿಕಂಡ್, ಎಡ್ಗಿಕಂಡ್ ನಡೆಕಾಗಿ ಬಾತ್. ಕೋಟೆನ ಕೊಡಿಗೆ ಮುಟ್ಟಿಕಾಕನ ಸಾಕೋ ಸಾಕಾತ್. ಸೇಂಕಿಕಂಡ್, ಬುಕ್ಕಿಕಂಡ್ ಕೋಟೆನ ಕೊಡಿಗೆ ಹೋಗಿ ಒಮ್ಮೆ ನಿಂತ್ ನೋಡಿರೆ ಆ ರಮಣೀಯ ದೃಶ್ಯಕ್ಕೆ ಮೈ ಮನ ಸೋತ್ ಹೋದೆ. ಅಲ್ಲಿಗೆ ಕೋಟೆನ ಬುಡಲಿ ನಡೆವ ಮೊನ್ಸ್ರರ್ ಲಿಲ್ಲಿಪುಟ್ಟ್ ಜನಂಗಳ ಹಾಂಗೆ ಕಂಡವೆ.

ಇನ್ನೊಂದು ಸಂಗತಿಂತೇಳಿರೆ ಕೋಟೆಗೆ ಸುತ್ತು ಹಾಕಿ ದೊಡ್ಡ ಮತ್ತು ಆಳ ಇರುವ ಕಂದಕಗ ಉಟ್ಟು. ವೈರಿಗಳ ದಾಳಿ ಕಾಲಲಿ ಅದರ ತುಂಬಾ ನೀರ್ ತುಂಬಿಸಿ ಹಸಿದ ಮೊಸಳೆಗಳ ಬುಡ್ತಿದ್ದೊ ಗಡ. ಅದರೊಳಗೆ ಬಿದ್ದಂವ ಅವ್ಕೆ ಆಹಾರ ಆದುದರ್ಲಿ ಅನುಮಾನನೇ ಇಲ್ಲೆ.

ನಾವ್ ಕೋಟೆ ಹತ್ತಿ ನೋಡುವಂತದರ್ನೆಲ್ಲಾ ನೋಡಿಕಂಡ್ ಕೋಟೆಯ ಹೊರಗಡೆ ಕೋಟೆಯ ಮುಂಬಾಗಲಿರುವ ಚಾಂದ್ ಮಿನಾರ್ ಹತ್ತಿ ಬುಡೊಕುಂತೇಳ್ವ ಆಸೆಲಿ ಬೇಗ ಬೇಗ ಬಂದೊ.

ಇದರ್ನ ಕಟ್ಟಿಸಿದಂವ ಬಹಮನಿ ಸುಲ್ತಾನ. ಅಲ್ಲಾವುದ್ದೀನ್ ಅಹಮ್ಮದ್ ಶಹಂತೇಳುವ ಅರ್ಸ. ಅಂವ ದೌಲತಾಬಾದ್‌ನ ಗೆದ್ದ್‌ಕಂಡ ಮೇಲೆ ಆ ವಿಜಯದ ನೆನ್ಪಿಗಾಗಿ ಕಟ್ಟಿಸಿದ್. ಅದ್ ಬುಡ ಬಾಗಲಿ 70ಅಡಿ ಸುತ್ತಳತೆ ಇದ್ದ್ 200 ಅಡಿ ಎತ್ತರ ಉಟ್ಟು. ಅದ್ ನೋಡಿಕೆ ಕುತುಬ್ ಮಿನಾರ್‌ನ ಹಾಂಗೆ ಕಂಡದೆ. ನಾವ್ಗೆ ಆ ಮಿನಾರ್‌ನ ಹತ್ತಿ ಇಳಿಯಕೆ ಆ ಉರಿ ಬಿಸಿಲ್‌ಲಿ ಜೀವ ಹೋಗಿ ಬಂದಾಂಗೆ ಆತ್. ಹತ್ತಿಕಿರುವ ಮೆಟ್ಲ್ ಇಕ್ಕಟ್ಟಾದ ದಾರಿ. ನಮ್ಮಲ್ಲಿ ಎಲ್ಲವು ಹತ್ತುವ ಮನ್ಸೇ ಮಾಡ್ತ್‌ಲೆ ನಾವು ಆಮೇಲೆ ಹೋದ್ ಎಲ್ಲೋರಕ್ಕೆ.

ಎಲ್ಲೋರಕ್ಕೆ : ಎಲ್ಲೋರ ಮತ್ತು ಅಜಂತ ಗುಹಾಲಯಗ ನೋಡಿಕೆ ಒಂದೇ ತರ ಉಟ್ಟು. ಶ್ರೇಷ್ಟ ಗುಣಮಟ್ಟದ ಶಿಲ್ಪ ಕಲೆ ಇಲ್ಲಿ ನೋಡಕ್. ಎಲ್ಲೋರಲಿರುವ ಕೈಲಾಸನಾಥ ದೇವಾಲಯ ಪ್ರತಿಯೊಬ್ಬ ಭಾರತೀಯ ನೋಡಕಾದ ನಿರ್ಮಾಣ. ಧಾರ್ಮಿಕ ದೃಷ್ಟಿಂದಂತ ಅಲ್ಲ ಶಿಲ್ಪಕಲಾ ದೃಷ್ಟಿಂದ.

ಎಲ್ಲೋರದ ಗುಹಾಲಯಗ ಅಜಂತದಲ್ಲಿನ ಗುಹಾಲಯಗಳ ಹಾಂಗೆ ಉದ್ದಕ್ಕೆ ಮತ್ತು ಎತ್ತರಕ್ಕೆ ಹರಡಿಕೊಂಡಿರುವ ಕಲ್ಲ್ ಬಂಡೆಗಳ್ನ ಕೊರ್ದ್ ಮಾಡ್ದ್. ಇಲ್ಲಿ ಒಟ್ಟು 34 ಗುಹಾಲಯಗ ಇದ್ದ್ ಇದರ್ಲಿ ಹನ್ನೆರಡ್ ಗುಹೆಗ ಬೌದ್ಧ ಮತಕ್ಕೆ 17 ಗುಹೆಗ ಹಿಂದೂ ಮತಕ್ಕೆ ಮತ್ತು 5 ಗುಹೆಗ ಜೈನ ಮತಕ್ಕೂ ಸೇರ್ದ್. ಹೀಂಗೆ 3 ಮತಗಳೂ ಇಲ್ಲಿ ಒಂದಾಗಿ ಬೆಳ್ದ್‌ಟು.

ಎಲ್ಲೋರಲಿರುವ ಬೌದ್ಧ ಗುಹಾಲಯ ಐದನೇ ಶತಮಾನಂದ ಏಳನೇ ಶತಮಾನದ ಕಾಲಮಾನಲಿ ರಚಿಸಿದ್‌ಂತ ಹೇಳಿವೆ. ಮೂರು ಹಂತಗ ಯಾ ಮಾಳಿಗೆಗಳಿರುವ ಕೆಲವು ಸುಂದರ ಚೈತ್ಯಾಲಯಗ ಇಲ್ಲಿ ನೋಡಕ್. ಇಲ್ಲಿರುವ ಜೈನ ದೇವಾಲಯಗ ಹತ್ತನೇ ಶತಮಾನಂದ ಹನ್ನೆರಡನೇ ಶತಮಾನದ ಕಾಲಕ್ಕೆ ಸೇರ್‌ದ್‌ಂತ ಹೇಳಿವೆ. ಜೈನ ಗುಹಾಲಯಗಳ ಪೈಕಿ ಇಂದ್ರ ಸಬಾ ಮತ್ತು ಜಗನ್ನಾಥ ಸಬಾಂತೇಳುವ ಎರ್‌ಡ್ ನಿರ್ಮಾಣಗ ಬಾರೀ ಪೊರ್ಲಿದ್‌ದ್ ಅದಕ್ಕೆ ಸರಿಗಟ್ಟುವ ಅದೇ ತರದ ಗುಹಾಲಯಗ ಎಲ್ಲೋರದ ಬೇರೆ ಕಡೆ ಎಲ್ಲಿಯೂ ಇಲ್ಲೆ.

ಎಲ್ಲೋರದ ಎಲ್ಲಾ ಗುಹಾಲಯಗಳ ಪೈಕಿ ಕೈಲಾಸನಾಥ ದೇವಾಲಯದ ರಚನೆ ಬೇರೆನೇ ತರದ್‌ದ್ ಮತ್ತು ವಿಸ್ಮಯಕಾರಿಯಾದ್‌ದ್. ಅದರ ರಚನಾ ಕೌಶಲ ಮತ್ತು ಶಿಲ್ಪ ಕಲಾ ಚತುರತೆ ನೋಡಿಯೇ ತಿಳಿಯೊಕು. ಇದಿರುದು ಹದಿನಾರನೇ ಗುಹಾಲಯಲಿ. ಇದನ್ನ್ ನಿರ್ಮಿಸಿದಂವ ರಾಷ್ಟ್ರಕೂಟ ಮನೆತನದ ದೊರೆ ಒಂದನೇ ಕೃಷ್ಣ. ಅವನ ಕಾಲ ಕ್ರಿ.ಶ. 757ರ್‌ಂದ 783ರ ವರೆಗೆ. ಈ ದೇವಾಲಯ 164 ಅಡಿ ಉದ್ದ 109 ಅಡಿ ಅಗಲ ಮತ್ತು 96 ಅಡಿ ಎತ್ತರ ಗಡ. ದೇವಾಲಯದ ಮೇಲ್ಬಾಗ ಆಕಾಸದ ಕಡೆ ತೆರ್‌ದ್‌ಕಂಡ್ ಉಟ್ಟು. ಇತರ ಎಲ್ಲಾ ಗುಹಾಲಯಗ ಮೇಲ್ಕಡೆಗೂ ಮುಚ್ಚಿಕಂಡೇ ಇರುವಂತದ್‌ದ್. ಇದನ್ನ್ ಕಲ್ಲ್‌ನ ಬೆಟ್ಟಂದ ಮೇಲ್ಕಡೆಂದ ಕೆಳಗಡೆಗೆ ಕೆತ್ತಿಕಂಡ್ ಬಂದದ್. ಒಂದೇ ಬಂಡೆ ಕಲ್ಲ್‌ನ ಕೊರ್‌ದ್ ನಾನಾ ಆಕಾರ ನಾನಾ ಮೂರ್ತಿಗಳ, ನಾನಾ ಕೆತ್ತನೆಗಳ ನಿರ್ಮಿಸಿದ ರೀತಿ ಅಪ್ರೂಪದ್. ದೇವಾಲಯದ ನೆಲ ಮಟ್ಟದ ಕೆಳಗೂ ಕೊರ್ದೊಳೊ. ದೇವಾಲಯದ ಸುತ್ತ ಬೇರೆ ಬೇರೆ ಗಾತ್ರದ ಆನೆಗಳ ವ್ಯವಸ್ತಿತವಾಗಿ ಕೆತ್ತಿಯೊಳೊ. ಈಗ ಮಳೆ, ಬಿಸ್‌ಲ್‌ಗಳಿಂದಾಗಿ ಆನೆಗಳ ಸೊಂಡಿಲ್ ಇತರ ಅಂಗಾಂಗಗ ಮುರ್‌ದ್ ಹೋಗುಟು. ಅವುಗಳ ಪಕ್ಕಲಿ ರಾಮಾಯಣದ ಕತೆಯ ಚಿತ್ರಗಳನೂ ಕೆತ್ತಿಯೊಳೊ. ಒಟ್ಟಾರೆ ಹೇಳುದಿದ್ದರೆ ಶಿಲ್ಪ ಕಲೆನ ಸುಳಿವು ಇಲ್ಲದ ಜಾಗನೇ ಇಲ್ಲೆ. ಒಂದು ಕಡೆ ಶಿವ ಪಾರ್ವತಿಯರ ಮದುವೆ ದೃಶ್ಯ ಇದ್ದರೆ ಇನ್ನೊಂದು ಕಡೆ ರಾವಣ ಕೈಲಾಸ ಪರ್ವತನ ಅಲ್ಲಾಡಿಸಿ ಎತ್ತಿ ಹಿಡಿಯಕೆ ಯತ್ನಿಸುವ ದೃಶ್ಯ ಉಟ್ಟು. ಇಲ್ಲಿ ಪಾರ್ವತಿ ಹೆದ್ರಿ ಶಿವನ ಹತ್ರ ನಿತ್‌ಕೊಂಡುಟ್ಟು, ಶಿವ ತನ್ನ ಹೆಬ್ಬೆಟ್ಟ್‌ಂದ ನೆಲನ ಒತ್ತುತುಟ್ಟು. ಇವೆಲ್ಲ ನೋಡಕಾದ ರಚನೆಗ ಅಂತ ಬೇರೆ ಹೇಳಕಾಗಿಲ್ಲೆ.

ಎಲ್ಲೋರದ ಹದಿನಾಲ್ಕನೇ ಗುಹೆ ಇರ್‌ದು ರಾವಣ ಸೀತೆನ ಅಪಹರ್‌ಸಿ

ಕದ್ದ್‌ಕಂಡ್ ಹೋದ ಚಿತ್ರ. ಇನ್ನೊಂದು ಗುಹೆಲಿ ಶಿವನ ಬೈರವನ ಮೂರ್ತಿ ದೊಡ್ಡದಾಗಿದ್ದ್ ನೋಡೊಕ್ಕೆ ಒಂದು ಕಡೆ ವಿಸ್ಮಯ ಇನ್ನೊಂದುಕಡೆ ಹೆದರಿಕೆ ಹುಟ್ಟಿಸುವ ಹಾಂಗುಟ್ಟು. ಈಶ್ವರನ ತಾಂಡವ ನೃತ್ಯ ದೃಶ್ಯನ ತೋರ್ಸುವ ನಾನಾ ಬಂಗಿಯ ಕೆತ್ತನೆಗ ಮನ ಸೆಳ್ದದೆ. ಎಲ್ಲೋರದ ಗುಹಾಲಯನ ನೋಡಿಕೆ ಹೋದವಂಗೆ ಅಲ್ಲಿಂದ ತಿರ್ಗಿ ಬಾಕೆ ಮನ್ಸೇ ಆದುಲೆ. ನಾವ್ಗೆ ಬಾರದೆ ಬೇರೆ ದಾರಿ ಇತ್ಲೆ. ಹಾಂಗಾಗಿ ತಿರ್ಗಿ ತಿರ್ಗಿ ನೋಡಿಕಂಡ್ ಬಂದೊ. ಒಂದು ವಿಷಯ ಕೈಲಾಸನಾಥ ದೇವಾಲಯ ಎಷ್ಟೇ ಪೊರ್ಲು ಇರ್ಲಿ. ಇಲ್ಲಿ ಪೂಜೆ ಮಾತ್ರ ನಡಿದುಲ್ಲೆ.

ನಾವ್ ಅಲ್ಲಿಂದ ತಿರ್ಗಿ ಬಾಕಾಕನ ಅಲ್ಲಿಗೆ ಹತ್ತಿರಲಿ ವೆರೂಲಿ ಎಂಬ ಗ್ರಾಮಲಿರುವ ಜ್ಯೋತಿರ್ಲಿಂಗ ಅಂತ ಕರೆವ ಶೈವ ದೇವಾಲಯನ ನೋಡ್ದೊ. ಇದನ್ನ್ 18ನೇ ಶತಮಾನಲಿ ಅಹಲ್ಯಾಬಾಯಿ ಕಟ್ಟಿಸಿದ್ ಗಡ. ಇದ್ ಸಾಮಾನ್ಯ ದೇವಾಲಯಕ್ಕಿಂತ ಬೇರೆ ತರ. ನೋಡಿಕೂ ಲಾಯ್ಕುಟ್ಟು. ಪೂಜೆನೂ ನಡ್ದದೆ.

ಮತ್ತೆ ತಿರ್ಗಿ ಬಾಕನ ದೌಲತಾಬಾದ್‌ಗೆ ಹತ್ರದ ಖುಲ್ದಾಬಾದ್‌ಂತೇಳುವಲ್ಲಿರುವ ಔರಂಗಜೇಬನ ಗೋರಿ ನೋಡಿಕೆ ಹೋದೊ. ಔರಂಗಜೇಬ ಪರಮತ ದ್ವೇಷಿಯಾಗಿತ್ತ್. ಅಂವ ಸಣ್ಣ ಮನಸಿನ ಸಣಕಲು ವ್ಯಕ್ತಿ. ಆದರೆ ಅಂವ ಇಸ್ಲಾಂ ದರ್ಮದ ಕಟ್ಟಾ ಅನುಯಾಯಿ ಆಗಿದ್ದ್ ಬುದ್ಧಿವಂತನೂ ಸರಳ ಜೀವಿಯೂ ಆಗಿದ್ದ. ಅವನ ಗೋರಿ ಯಾವುದೇ ಆಡಂಬರ ಇಲ್ಲದೆ ತೀರಾ ಸರಳವಾಗಿ ಉಟ್ಟು. ಅಂವನ ಗೋರಿನ ತಲೆ ಕಡೆ ತುಳಸಿ ದೈ ನೆಟ್ಟ್‌ಕಂಡ್ ಇರುದರ ನೋಡಿ ಆಶ್ವರ್ಯ ಆತ್. ನಾವ್ ಇಷ್ಟೆಲ್ಲಾ ನೋಡಿಕಂಡ್ ಮಧ್ಯಾಹ್ನ ಉಂಬಕೆ ಹಾಸ್ಟೆಲಿಗೆ ಬಂದೊ.

ನಾವ್ ಆ ದಿನ ರಾತ್ರಿನೇ ಪೂನಕ್ಕೆ ಹೊರಡಕಾಗಿತ್ತ್. ನಮ್ಮ ಮಾಸ್ಟ್ರ ಪೊನ್ನಪ್ಪನವು ನಿಮ್ಮ ನಿಮ್ಮ ಲಗೇಜ್‌ನೆಲ್ಲಾ ಬಸ್ಸಿಲಿ ಇಸಿಬುಡಿ ಮತ್ತೆ ಹೊರ್ಡಿಕೆ ಅನುಕೂಲ ಆದೆಂತ ಹೇಳ್ದೊ. ಹಾಂಗೆನೆ ಮಾಡಿ ಮತ್ತೆ ನಗರ ಸುತ್ತಿಕೆಂತೇಳಿ ಹೋದೊ.

ನಗರದ ಕೆಲವು ಜಾಗಗಳ ನೋಡಿಕಂಡ್ 'ಬೀಬಿಕಾಮೆಕ್‌ಬೇರಾ' ಎಂಬಲ್ಲಿಗೆ ಹೋಗುವಷ್ಟರ್ಲಿ ಸೂರ್ಯ ಕಂತಿತ್ತ್. ಆದರೆ ತಿಂಗಳ ಬೆಳ್ಕ್ ಲಾಯ್ಕಾಗಿ ಇದ್ದದರ್‌ಂದ ಆ ಬೊಳ್ಪುಲೇ ಕಟ್ಟಡನ ನೋಡ್ದೊ.

ಈ ಕಟ್ಟಡನ ಔರಂಗಜೇಬ ಅವನ ಪ್ರೀತಿನ ರಾಣಿ ದಿಲ್‌ರಾಸ್ ಬಾನು ಬೇಗಮಳ ನೆನ್ಪಿಗಾಗಿ ಕ್ರಿ.ಶ. 1650–57ರ್ಲಿ ಕಟ್ಟಿಸಿದ್. ಅದರ ಮಹಾದ್ವಾರಲಿ ಅಂವ ಕಟ್ಟಿದ ಕಲಾಗಾರರಾದ ಅತುಲ್ಲಾಹ ಮತ್ತು ಹಾನಸ್ ಪತರಾಯಿ ಎಂಬವರ

ಹೆಸ್ರ್ ಉಟ್ಟು. ಅದರ ನಿರ್ಮಾಣಕ್ಕೆ ಖರ್ಚಾದ ಹಣ ರೂ. 665283.7 ಪೈಸೆ ಅಂತ ಬರ್ಕಂಡ್ ಉಟ್ಟು. ಈ ಕಟ್ಟಡ ಒಂದು ಲಕ್ಷದ ಐವತ್ತು ಸಾವಿರ ಚದರ ಅಡಿ ವಿಸ್ತಾರಲಿ ಉಟ್ಟುಗಡ. ಈ ಗೋರಿನ ಆಗ್ರದ ತಾಜಮಹಲಿನ ಮಾದರಿಲೇ ಕಟ್ಟಿಯೊಳೊ. ಇದ್‌ಕೂಡ ಅಮೃತಶಿಲೆ ರಚನೆನೆ. ಆದರೆ ಇಲ್ಲಿನ ಅಮೃತ ಶಿಲೆ ಅಲ್ಲಿನಷ್ಟ್ ಉತ್ತಮ ತರಗತಿದ್ ಅಲ್ಲ. ಆದರೂ ಲಾಯ್ಕುಟ್ಟು. ಅದರ ಮುಂದುಗಡೆ ಪೊರ್ಲುನ ಹೂವಿನ ತೋಟ, ನೀರ್ನ ಕೊಳ, ಕಾರಂಜಿ ಎಲ್ಲಾ ಉಟ್ಟು. ಪ್ರಪಂಚದ ಆಶ್ಚರ್ಯಗಳಲ್ಲಿ ಒಂದಾದ ತಾಜಮಹಲ್ ಈವರೇಗೆ ನೋಡಿಕೆ ಆಗದಿದ್ದರೂ ಅದರ ಮಾದರಿಲೇ ಕಟ್ಟಿದ ಇದರನ್ನಾದ್ರ್ ನೋಡ್ಲೊಲ್ಲಂತೇಳಿ ಕುಸಿಂದ ಮತ್ತೆ 'ಪಂಚಕಿ' ಎಂಬಲ್ಲಿಗೆ ಹೋದೊ.

ನಾವ್ ಪಂಚಕಿಗೆ ಹೋಕಾಕನ ದೌಲತಾಬಾದಿಲಿ ನಾವ್ಗೆ ಸಿಕ್ಕಿದ ಮುಂಬಯಿ ಗೂಡೆಗ ನೀರಾಟ ಆಡ್ತಾ ಇದ್ದೊ. ನಮ್ಮ ಕಂಡ ಕೂಡ್ಲೆ ಅವು ಕೇಕೆ ಹಾಕಿದೊ. ಪಂಚಕಿ ನೋಡೊಕಾದ ಜಾಗ. ತುಂಬಾ ಲಾಯ್ಕುಟ್ಟು ಬೆಳ್‌ದಿಂಗಳ ಬೊಳ್ಪಿಲಿ ಮತ್ತೂ ಲಾಯ್ಕಾಗಿ ಕಾಂಬತಿತ್. ಬಾಬಾ–ಶಹಾ–ಮುಸಾಫಿರ್ ಎಂಬವ ಔರಂಗಜೇಬನ ಧಾರ್ಮಿಕ ಗುರು. ಅವನ ಸ್ಮಾರಕನೇ ಇಲ್ಲಿರುವಂತದ್. ಪೊರ್ಲುನ ಕಟ್ಟಡ. ಎದ್‌ರಿಗೆ ಹೂವಿನ ತೋಟ ಉಟ್ಟು. ಪಕ್ಕಲಿ ಕೃತಕ ರೀತಿಂದ ನೀರ್ ಬರುವ ಹಾಂಗೆ ಮಾಡಿ ಜಲಪಾತದ ಹಾಂಗೆ ಬೀಳ್ಸಿ ಅಲ್ಲಿ ಕೊಳ ಮಾಡಿಯೊಳೊ. ನೀರ್ ಬೀಳ್ಸಿದ ರೀತಿ ಒಂದು ತರ ವಿಶೇಷ ಆಗಿ ಉಟ್ಟು. ಅಲ್ಲಿನೆ ಗೂಡೆಗಳ ನೀರಾಟ ಆಡ್‌ತಿದ್ದದ್. ಈ ಜಾಗ ಸಂದರ್ಶಿಸಿದ ಮಿ. ಗ್ಲೇಡ್‌ಸ್ಟೋನ್ ಸೋಲೋಮಾನ್ ಎಂಬ ಹೆಸ್ರಾಂತ ವಿಮರ್ಶಕ ಈ ರೀತಿ ಹೇಳಿಟು.

"I regard it as one of the Most attractive gardens I have ever seen in the east. Within a Compartively small area, it Comprises all the facinations of an exquisite setting conjoined to most intersting historical buildings and sancteries. It's thanks are unique for their beautiful lay out and charming relation to their sarroundings. the remarkable ball under the tank in unique in my experience of Indian gardens"

ನಾವು ಪಂಚಕಿನ ನೋಡಿ ಕುಸಿ ಪಟ್ಟ್, ಹೋಟೇಲ್‌ಲಿ ಕಾಪಿ ತಿಂಡಿ ತಕಂಡ್ ನಮ್ಮೊಟ್ಟಿಗಿದ್ದ ಅಲ್ಲಿನ ಕಾಲೇಜ್ ಉನ್ಯಾಸಕರ್ನ ಬೀಳ್ಕೊಟ್ಟ್ ಪೂನಕ್ಕೆ

ರಾತ್ರಿನೇ ಪ್ರಯಾಣ ಮಾಡ್ದೊ.

ಪೂನಾ ಕಡೆಗೆ : ನಾವ್ ಪೂನಾ ಮುಟ್ಟಿದ್ ಮಾರ್ನೆ ದಿನ ಬೆಳಿಗ್ಗೆ ಸುಮಾರ್ 8 ಗಂಟೆಗೆ. ಕೊಡಗಿನ ಶ್ರೀಮಾನ್ ಚಂಗಪ್ಪ ಎಂಬವು ಪೂನಾದ ಕಾಪರೇಟಿವ್ ಕಾಲೇಜ್‌ಲಿ ಪಾಂಶುಪಾಲರಾಗಿದ್ದೊ. ಅವು ನಾವ್ಗೆ ಕಾಪಿ, ತಿಂಡಿ, ಊಟ ಮತ್ತು ಉಳ್ಕಂಕೆ ರೂಮೀನ ವ್ಯವಸ್ಥೆ ಎಲ್ಲ ಮಾಡಿದ್ದೊ. ನಾವ್ ಹೋದಂಗೆ ಕೈ ಕಾಲ್ ಮೋರೆ ಎಲ್ಲ ತೊಳ್ದ್, ಮಿಂದ್ ಬಟ್ಟೆ ಬದಲಾಯ್ಸಿ ಕಾಫಿ, ತಿಂಡಿ ಮುಗ್ಸಿದೊ. ಆದಿನ ನಾವು ಪೆನ್ಸಿಲಿನ್ ಕಾರ್ಖಾನೆ ನೋಡಿಕೆ ಇತ್ತ್. ಪೂನಾದ ಈ ಕಾರ್ಖಾನೆ ಏಷ್ಯಾ ಖಂಡಲೇ ಅತ್ಯಂತ ದೊಡ್ಡದ್‌ಗಡ. ಈಗಿನ ವಿಜ್ಞಾನ ಯುಗಲಿ ಪೆನ್ಸಿಲಿನ್ ಹೆಚ್ಚಿನ ಪ್ರಾಮುಖ್ಯತೆ ಪಡ್ದುಟು. ಅದನ್ನ್ ನೋಡಿ ಆಕನ ಸೂರ್ಯ ನೆತ್ತಿಗೇರಿತ್ತ್. ಊಟಕ್ಕೆಂತೇಳಿ ತಿರ್ಗಿ ಬಂದೊ.

ಪೂನಾಲೊಂದು ಮಿಲ್ಟ್ರಿ ಕಾಲೇಜ್ ಉಟ್ಟು. ಅದರ ನೋಡ್ದ್ ಮಧ್ಯಾಹ್ನದ ಮೇಲೆ. ಈ ಕಾಲೇಜ್ ಇರ್ದು ಕಡಕವಾಸಲಂತೇಳುವಲ್ಲಿ. ಪೂನಾಂದ ಅಲ್ಲಿಗೆ ಹತ್ತ್ ಹನ್ನೆರಡ್ ಮೈಲ್ ದೂರ. ಅಲ್ಲಿಗೆ ಹೋಕಾಕನ ದೂರಲಿ ಬೆಟ್ಟದ ಮೇಲೆ ರಾಯಗಡ ಕೋಟೆ ಕಂಡದೆ. ಮಿಲ್ಟ್ರಿ ಕಾಲೇಜ್ ದೊಡ್ಡ ಕಟ್ಟಡ. ಅಲ್ಲೆ ಹತ್ತಿರಲಿ ಹಾಸ್ಟೇಲ್ ಕೂಡ ಉಟ್ಟು. ಎಲ್ಲಾ ವ್ಯವಸ್ತೆಗ ಲಾಯ್ಕಾಗಿ ಉಟ್ಟು. ಇಲ್ಲಿರುವ ಹೆಚ್ಚಿನ ಮಕ್ಕ ಸೈನಿಕರ ಮಕ್ಕ. ಬೇರೆ ಮಕ್ಕಳೂ ಒಳೊ. ಅಲ್ಲಿ ಮಾಮೂಲ್ ಶಿಕ್ಷಣದ ಒಟ್ಟಿಗೆ ಮಿಲಿಟರಿ ತರಬೇತಿನೂ ಕೊಟ್ಟವೆ. ಇಲ್ಲಿ ಕಲ್ತವು ಸೈನ್ಯಕ್ಕೆ ಸೇರಿಯೇ ಸೇರೊಕುಂತೇಳ್ವ ಕಡ್ಡಾಯ ಇಲ್ಲೆ. ನಾವು ಅದನ್ನೆಲ್ಲಾ ನೋಡಿಕಂಡ್ ಮರ್ಳಿ ಬಂದೊ.

ಅದೇ ದಿನ ಹಿಂಬೊತ್ತು ಶ್ರೀಮಾನ್ ಚಂಗಪ್ಪನೊವು ನಾವ್ಗಾಗಿ ದೊಡ್ಡ ಟೀ ಪಾರ್ಟಿ ವ್ಯವಸ್ತೆ ಮಾಡಿದ್ದೊ ಅವರ ಮನೆವೂ ಬಂದಿದ್ದೊ. ನಾವು ಕಡಕವಾಸಲಂದ ತಿರ್ಗಿ ಬಾಕನ ನಗರಕ್ಕೊ ಸುತ್ತು ಹಾಕಿ ಎಲ್ಲ ನೋಡಿಕಂಡ್ ಟೀ ಪಾರ್ಟಿ ಏರ್ಪಡಿಸಿದ ಅವರ ಕಾಲೇಜಿನ ಹಾಸ್ಟೆಲಿಗೆ ಹೋದೊ. ಬರ್ಜರಿ ಟೀ ಪಾರ್ಟಿ ನಾವ್ಗಾಗಿ ಕಾದಿತ್ತ್. ನಾವ್ ಹೊಟ್ಟೆ ದೊಡ್ಡದ್ ಮಾಡಿಕಂಡ್ ಬೇಕಷ್ಟ್ ತಿಂದ್ ಕುಸಿ ಪಟ್ಟೊ. ಬೇರೆ ಬೇರೆ ತರದ ತಿಂಡಿ ತಿನಿಸ್ ಇತ್ತ್. ನಾವ್ ಅಲ್ಲಿಂದ ಹೊರ್ಡಿಕೆ ಮುಂದೆ ಶ್ರೀಮಾನ್ ಚಂಗಪ್ಪನವುಕು, ಅವರ ಮನೆವುಕೂ ಕೃತಜ್ಞತೆ ಅರ್ಪಿಸಿ ಹೊರ್ಡಿಕೆ ತಯಾರಾದೊ.

ನಾವ್ ಮಡಿಕೇರಿಂದ ಪ್ರವಾಸ ಹೊರ್ಟ್ ಬರೇ ಒಂಬತ್ತ್‌ದಿನ ಆಗಿತ್ತ್ ಆದ್ರೆ ನಾವ್ಗೆ ತುಂಬಾ ದಿನ ಆದಂಗೆ ಅನ್ಸ್‌ತಿತ್ತ್. ಅದೇ ತಿಂಗಳ್ ತಾರೀಕ್ 27ಕ್ಕೆ

ಕಾಲೇಜ್ ಕ್ಲಾಸ್ ಸುರು. ಆದಿನ ಅಲ್ಲಿಗೆ ತಲ್ಪದೆ ಬೇರೆ ದಾರಿ ಇತ್ಲೆ. ಹಾಂಗಾಗಿ ಬೊಂಬಾಯಿಗೆ ಹೋಗ್ವ ದೊಡ್ಡ ಆಸೆನ ಬುಟ್ಟ್ ಪೂನಾದಂತ ಒಳ್ಳ ಊರ್ಲಿ ನಿಲ್ಲದೆ ಅದೇ ದಿನ ರಾತ್ರಿ ಅಂದರೆ ತಾರೀಕ್ 25ರಂದ್ ಸೋಮವಾರ ಮಡಿಕೇರಿಗೆ ಮರು ಪ್ರಯಾಣ ಬೆಳ್ಸಿದೊ.

ನಾವ್ ನೋಡ್ದ ಊರುಗಳ ಪೈಕಿ ನಮ್ಮ ಮನ್ಸಿಗೆ ಹಿಡ್ಸಿದ ಊರುಂತೇಳಿರೆ ಪೂನ. ಪೂನಾದ ಹವೆ ವಾತಾವರಣ, ಜನ ಪ್ರಾಕೃತಿಕ ಹಿನ್ನೆಲೆ ಎಲ್ಲಾ ಕೊಡಗ್‌ನ ಹಾಂಗೆ. ಅಲ್ಲಿಗೆ ಯಾರೇ ಹೋಗಲಿ ಅವರ ಹೃದಯ ಅಲ್ಲಿನ ಸೌಂದರ್ಯಕ್ಕೆ ಸೋಲದೆ ಇರದ್.

ಮರಳಿ ಊರಿಗೆ : ಹಿಂಬೊತ್ತಿನ ಹೊತ್ತ್, ಕೊಡಗ್‌ನ ಹಾಂಗೆ ಗುಡ್ಡ, ಬೆಟ್ಟ, ಕಾಡ್, ಬೆಟ್ಟದ ಅಡ್ಡಲಿ ಸೂರ್ಯ ಮರೆಯಾಗ್ತಾ ಇತ್ತ್. ಅದೇ ಹೊತ್ತಿಗೆ ಪೂನಾಕ್ಕೆ ವಿದಾಯ ಹೇಳಿ ಮರಳುವ ದಾರಿ ಹಿಡ್ದೊ. ರಾತ್ರಿ ಊಟದ ಹೊತ್ತಿಗೆ ಸತಾರ ಮುಟ್ಟಿದ್ದೊ. ಪೂನಲಿ ತಿಂದ ತಿಂಡಿ ಇನ್ನೂ ಕರ್ಗಿತ್ಲೆ. ಸತಾರಲಿ ಊಟದ ಶಾಸ್ತ್ರ ಮುಗ್ಸಿ ಮತ್ತೆ ಮುಂದುವರ್ದೊ. ಬೆಳಗಾಂ ದಾಟಿ ಹುಬ್ಬಳ್ಳಿಗೆ ಬಾಕಾಕನ ಬೊಳ್ಪಾಗಿತ್ತ್. ಆ ದಿನ ಉಪಹಾರನ ದಾರವಾಡಲಿ ಮುಗ್ಸಿಕಂಡ್ ಮದ್ಯಾಹ್ನದ ಊಟಕ್ಕೆ ಹರಿಹರಕ್ಕೆ ಬಂದೊ. ಅಲ್ಲಿ ಊಟ ಮುಗ್ಸಿ, ಬಂದು ಶಿವ ದೇವಾಲಯಕ್ಕೆ ಹೋಗಿ ದೇವರ ದರ್ಶನ ಪಡ್ದೊ. ಅದ್ ಜಕ್ಕಣಾಚಾರಿಂದ ನಿರ್ಮಿತವಾದ ದೇಗುಲ. ಅಂವ ಕರ್ನಾಟಕದ ಮಹಾ ಶಿಲ್ಪ ಶಾಸ್ತ್ರಜ್ಞ, ಅಂವ ನಿರ್ಮಿಸಿದ ಬೇಲೂರು ಮತ್ತು ಹಳೆಬೀಡ್ ಜಗತ್ತಿಲಿ ಅದರ ಶಿಲ್ಪ ಕಲೆಗಾಗಿ ಹೆಸ್ರ್ ಪಡ್ದುಟು. ಹರಿಹರದ ದೇವಸ್ತಾನ ಗಾತ್ರಲಿ ಸಣ್ಣದ್. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದ್‌ಂತ ಹೇಳುವಾಂಗೆ ಅಲ್ಲಿನ ಶಿಲಾಮೂರ್ತಿಗ ಬಾರಿ ಪೊರ್ಲಾಗಿದ್ದ್ ಮನ್ಸ್ ಸೂರೆ ಹೋದೆ. ಆ ದೇವಸ್ತಾನ ಪೂರ್ತಿಯಾಗಿ ಕರಿಕಲ್ಲಿಂದಲೇ ಕಟ್ಟಿದ್. ನಾವ್ ಅಲ್ಲಿ ದೇವ್ರಿಗೆ ಹಣ್ಣು ಕಾಯಿ ಅರ್ಪಿಸಿ ಅಡ್ಡಬಿದ್ದ್ ನಮ್ಮ ದಾರಿ ಹಿಡ್ದೊ.

ನಾವ್ ಬದ್ರಾವತಿ ತಲ್ಪಿಕಾಕನ ಕತ್ತಲಾಗಿತ್ತ್. ರಾತ್ರಿ ಊಟಕ್ಕೆ ಹಾಸನದ ಒಂದು ಹೋಟೇಲಿಗೆ ಹೇಳಿದ್ದೊ. ಹಾಂಗಾಗಿ ಇಲ್ಲಿ ಊಟ ಮಾಡದೆ ಉಪಹಾರ ಸೇವಿಸಿ ಹಾಸನ ಕಡೆ ಹೊದೊ. ನಮ್ಮದ್ ರಾತ್ರಿ ಹಗಲ್ ಪ್ರಯಾಣ. ನಿದ್ರೆ ಇಲ್ಲೆ. ಎಲ್ಲವೂ ಸೋತ್ ಸುಸ್ತಾಗಿದ್ದೊ. ಒಮ್ಮೆ ಊರಿಗೆ ತಲ್ಪಿರೆ ಸಾಕ್‌ಂತಾಗಿತ್ತ್. ಆದ್ರೂ ಮೋರೆಲಿ ಒಂದು ತರದ ತೃಪ್ತಿ, ಗೆಲುವು ಯಾಕೆಂತೇಳಿರೆ ಮರಳಿ ಊರಿಗೆ ಪ್ರಯಾಣ. ಸೋತಿದ್ದರೂ ಬಸ್ಸ್ ತುಂಬಾ ಮಾತ್, ಹಾಸ್ಯ, ನಗೆ ತುಂಬಿತ್ತ್. ನಮ್ಮ ಉಪನ್ಯಾಸಕರೂ ನಮ್ಮ ತಮಾಸೆಲಿ ಬೆರ್ತಿದ್ದೊ. ಬಸ್ಸ್ ಒಂದೇ ಸವನೆ ಓಡ್ತಿತ್ತ್.

ನಾವ್ ಅರಸೀಕೆರೆ ದಾಟಿ ಹಂಞ ಮುಂದೆ ಬಂದಿದ್ದೊ ಅಷ್ಟೆ. ಒಂದು ಲಾರಿ ಹುಗ್ದ್ ಹೋಗಿ ದಾರಿಗೆ ಅಡ್ಡ ಆಗಿ ನಿಂತಿತ್ತ್. ಆ ಲಾರಿನ ಅಲ್ಲಿಂದ ತೆಗೆಯದೆ ಮುಂದೆ ಹೋಕೆ ದಾರಿನೇ ಇತ್ಲೆ. ವಾಹನಗ ಎಲ್ಲಾ ಮಾರ್ಗದ ಇಕ್ಕಡೆಲಿ ಸಾಲಾಗಿ ನಿಂತಿದ್ದೊ. ನಾವೆಲ್ಲ ಸೇರಿ ಆ ಲಾರಿನ ಎಳ್ದ್ ಮೇಲೆ ಹಾಕಿ ದಾರಿ ಮಾಡಿಕಂಡ್ ಹಾಸನಕ್ಕೆ ಮುಟ್ಟಿಕಾಕನ ಮದ್ಯರಾತ್ರಿ ಗಂಟೆ 12ಆಗಿತ್ತ್. ಆ ಹೊತ್ತಿಗೆ ಊಟ ಕೊಡೊವು ಯಾರ್? ಕಡೆಗೆ ಒಂದು ಕಡೆಲಿ ಕಾಪಿ ಮಾಡ್ಸಿ ಕುಡ್ದ್ ಪ್ರಯಾಣ ಬೆಳ್ಸಿದೊ.

ಮಡಿಕೇರಿ ತಲ್ಪಿಕಾಕನ ಬೆಳ್ಳಂಬೆಳಗಾಗಿತ್ತ್. ಮೂಡಲ ಮನೆಲಿ ಮುತ್ತಿನ ನೀರ್ ಹನಿತಿತ್ತ್. ನಾವು ನೋಡ್ದ ಊರು ಅಲ್ಲಿನ ದೃಶ್ಯಾವಳಿ, ನಮ್ಮೊಟ್ಟಿಗೆ ಬಂದಿತ್ತ್. ಊರು, ಜನ, ಪ್ರಕೃತಿ, ಕಲಾಚಿತ್ರ, ಶಿಲ್ಪಕಲೆ ಎಲ್ಲ ಮನ ಪಟಲಲಿ ಹಾದ್ ಹೋಗ್ತಿತ್ತ್. ಕೊಡಗಿಂದ ಪೀಠಬೂಮಿಕಡೆ ಹೋದರೆ ನಾವ್ ಕಾಂಬೊದು ವಿಶಾಲ ಸಮತಟ್ಟ್ ಜಾಗ, ರಾಗಿ ಜೋಳ ಬತ್ತ ನಾನಾ ದಾನ್ಯಗಳ ಬೆಳೆ. ಅಲ್ಲಿರುವ ಗುಡ್ಡ ಬೆಟ್ಟ ಬಂಡೆಕಲ್ಲ್‌ಗಳ ರಾಶಿ; ಕೆಲವು ಕಡೆ ಒಟ್ಟಿ ಇಸಿದ ಹಾಂಗಿದ್ದ್ ಆಶ್ಚರ್ಯ ಆದೆ. ಕೆಲವು ಕಡೆ ಕಲ್ಲ್ ಮೇಲೆ ಕಲ್ಲ್. ಕೆಳಗೆ ದೊಡ್ಡ ಬಂಡೆಕಲ್ಲ್ ಅದರ ಮೇಲೆ ಸಣ್ಣ ಸಣ್ಣ ಗಾತ್ರದ ಕಲ್ಲ್ ಯಾರ್ ಹಾಂಗೆ ಒಟ್ಟಿ ಇಸಿದ್? ಪ್ರಕೃತಿ ಅಲ್ಲದೆ ಇನ್ನಾರ್? ಒಂದು ಕಾಲಲಿ ಈ ಜಾಗ ಎಲ್ಲ ನೀರ್‌ಂದ ಆವರಿಸಿದ್ದ್ ಈಗ ನೆಲ ಬಾಗ ಆದಂಗೆ ಅನ್ಸಿದೆ. ನಮ್ಮ ಕೊಡಗು ಸದಾ ಸಸ್ಯ ಶ್ಯಾಮಲೆ. ಇಲ್ಲಿನ ನೋಟ ಕಣ್ಣಿಗೂ ಹಸ್ರ್ ಮನ್ಸಿಗೂ ಹಸ್ರ್. ನಮ್ಮ ಹತ್ತ್ ದಿನಗಳ ಪ್ರವಾಸ ಮುಗ್ದಿತ್ತ್. ವಿಶಾಲ ಭಾರತ ಅಲ್ಲದಿದ್ದರೂ ಅದರ ಸ್ವಲ್ಪ ಭಾಗದ ಪರಿಚಯ ಮಾಡಿಕಂಡ ತೃಪ್ತಿ ಇತ್ತ್. ನಮ್ಮ ಅನುಬವದ ಬಾಗಿಲ್ ತೆರ್ದಿತ್ತ್.

ಪ್ರವಾಸದ ಕಾಲಲಿ ನಾವ್ಗೆ ಯಾರಿಗೂ ಏನೂ ತೊಂದರೆ ಆಗಿತ್ಲೆ. ದೇವ್ರ ದಯೆ. ನಮ್ಮ ಪಾಲಿಗೆ ಇತ್ತ್. ನಾವ್ ಮರಳಿ ಬಂದ ದಿನ ಕ್ಲಾಸಿತ್ತ್. ನಾವ್ ತುಂಬಾ ಬಳಲಿದ್ದೊ. ಕಾಲೇಜ್ ಹಾಸ್ಟೆಲಿಂದ ಪ್ರವಾಸ ಹೋದೊವು ನಾನ್ ಮತ್ತು ರಾಮಚಂದ್ರ ಮಾತ್ರ ಅಂತ ಹೇಳಿದ್ದೆ. ನಾವು ಆ ದಿನ ತರಗತಿಗೆ ಹಾಜರಾತ್ಲೆ. ಆ ದಿನ ವಿಶ್ರಾಂತಿ ತಕಂಡ್ ಮುಂದಿನ ದಿನಕ್ಕೆ ತಯಾರಾದೊ.

****

ಉತ್ತರ ಭಾರತ ಪ್ರವಾಸ

ಮಡಿಕೇರಿ
28–09–1959

ಗೆಳತಿ ಮಾಲಿನಿಗೆ,

ನೀ ಬರ್ದ ಕಾಗ್ದ ಮೊನ್ನೆ ನಂಗೆ ಸಿಕ್ಕಿತ್. ನಿನ್ನ ಕಾಗ್ದ ಬಂದ ದಿನ ನಂಗೆ ಹಬ್ಬ. ಮುತ್ತಿನಂತ ಅಕ್ಷರದ ನಿನ್ನ ಕೈಬರಹದ ಪತ್ರ ಓದುದುಂತೇಳಿರೆ ತುಂಬಾ ಕುಸಿ. ವಿಷಯನೂ ಅಷ್ಟೆ. ಮನ್ಸ್‌ನ ಹಿಡ್ದ್ ನಿಲ್ಲಿಸಿದೆ. ಚಿಂತನೆಗೆ ಅವಕಾಶ ಕೊಟ್ಟದೆ.

ಈ ವರ್ಷ ನಮ್ಮ ಕಾಲೇಜ್‌ಂದ ಉತ್ತರ ಭಾರತಕ್ಕೆ ಪ್ರವಾಸ ಹೋದವೆಂತ ತಿಳ್ಸಿದ್ದೆ. ಅದ್ಕೆ ನೀ, ಈ ಅವಕಾಶನ ತಪ್ಪಿಸಿಕಂಬದು ಬೇಡಂತ ಒತ್ತಾಯಿಸಿಯೊಳ. ಪ್ರವಾಸ ಹೋಕೆ ಯಾರಿಗೆ ಆಸೆ ಇಲ್ಲೆಂತ ಹೇಳ್? ಆದರೆ ಇಲ್ಲಿ ಸಮಸ್ಯೆ ಅಂದರೆ ಪ್ರವಾಸ ಹೋಕೆ ಸಾಕಸ್ಟ್ ಉಮೇದುವಾರರ್ ಬೇಕಲ್ಲ. ಹೆಚ್ಚಿನ ಕುಟುಂಬಗಳ ಹಣಕಾಸಿನ ಸ್ಥಿತಿಗತಿ ಇನ್ನೂ ಕೆಳಮಟ್ಟಲೇ ಉಟ್ಟು. ಸ್ಥಿತಿ ಅನುಕೂಲಕರ ಆಗಿದ್ದರೂ ಹೆತ್ತವುಕೆ ಪ್ರವಾಸ ಶಿಕ್ಷಣದ ಒಂದು ಅಂಗಂತಲೂ ಗೊತ್ತಿರೊಕು.

ಹೈದಂಗಳ ಪೈಕಿ ಕೆಲವೇ ಮಕ್ಕ ಹೊರ್ಟ್‌ಕಂಡ್ ಒಳೊ. ಗೂಡೆಗಳ ಪೈಕಿ ಸಾಕಷ್ಟ್ ಬಂದರೆ ಪ್ರವಾಸ ಹೋಕೆ ಆದು. ಇಲ್ಲದಿದ್ದರೆ ಇಲ್ಲೆ. ಅಂತು ನಾವ್ ಪ್ರವಾಸ ಹೋದುಂತಾದರೆ ನಮ್ಮ ರಾಜ್ಯ ಶಾಸ್ತ್ರದ ಪ್ರೊಫೆಷರ್ ಹಮೀದ್ ಅವೇ ಬಾದುಂತ ಹೇಳ್ತೊಳೊ.

ನಾವ್ಗೀಗ ನಡು ವರ್ಸದ ಪರೀಕ್ಷೆ ನಡೀತಾ ಉಟ್ಟು. ಇನ್ನ್ ಎರ್ಡ್ ದಿನಲಿ ಪರೀಕ್ಷೆ ಮುಗ್ದದೆ. ಎಲ್ಲಾ ತಯಾರಿ ಸರಿಯಾದರೆ ಪರೀಕ್ಷೆ ಮುಗ್ದ ಕೆಲವು ದಿನಲಿ ಪ್ರವಾಸ ಹೋದು. ಕಳ್ದ ವರ್ಸ ನಾವ್ ಹೋದ್ದ್ ಬಸ್ಸ್‌ಲಿ. ಈ ಸರ್ತಿ ಹೋದರೆ ರೈಲ್‌ಲಿ. ಹೋದರೆ ನನ್ನ ಅನುಭವಗಳ ನಿಂಗೆ ತಿಳ್ಸಿಕೆ ಮರಿದುಲೆ. ಒಂದು ವೇಳೆ ಮರ್ತರೂ ನೀನ್ ಬುಡುವವಳೊ?

ಇತೀ ನಿನ್ನ ಗೆಳೆಯ

ಮದರಾಸು
05–10–1959

ಪ್ರೀತಿಯ ಗೆಳತಿ ಮಾಲಿನಿಗೆ,

ನಾನ್ ಪ್ರವಾಸ ಹೋನೆಂತ ನಿಂಗೆ ತಿಳ್ಸಿಕಾಕನ ನನ್ನ ಅನುಬವಗಳ ಆಗಾಗ ಪತ್ರ ಮೂಲಕ ತಿಳ್ಸೊಕುಂತ ನೀನ್ ಹೇಳಿದ್ದೆ. ನಿನ್ನಂತಹ ಆತ್ಮೀಯ ಸ್ನೇಹಿತೆಗೆ ತಿಳ್ಸದೆ ಇನ್ನಾರಿಗೆ ತಿಳ್ಸುದ್ ಹೇಳ್? ನಾವು ಪ್ರವಾಸ ಹೊರ್ಡುವ ಒಂದು ದಿನ ಮುಂದೆ ಕಾಗದ ಬರಿಯೊಕುಂತ ಇದ್ದೆ. ಆದರೆ, ಪುರುಸೋತ್ತೇ ಆತ್ಲೆ. ಪ್ರವಾಸಕ್ಕೆ ತಯಾರಿ ಆಕಲ್ಲ, ಹಾಂಗೆ. ಈಗ ಈ ಕಾಗದ ಮದರಾಸಿನ ರೈಲ್ವೆ ನಿಲ್ದಾಣಲಿ ಕುದ್ದ್‌ಕಂಡ್ ಬರ್ದದ್. ತಡ ಆತ್. ಕ್ಷಮಿಸಿಯ ತಾನೆ ?

ನಾವು ನಿನ್ನೆ ಅಂದರೆ ಐತವಾರ ಅಕ್ಟೋಬರ ತಿಂಗಳ್ ತಾರೀಕ್ 4ರಂದ್ ಬೊಳ್ಳಿಗೆ ಸುಮಾರ್ 9–30ಕ್ಕೆ ಮಡಿಕೇರಿಂದ ಪ್ರವಾಸ ಹೊರ್ಟದ್. ಹೆಚ್ಚ್ ಕಡಿಮೆ ನಾಲ್ಕ್ ತಿಂಗಳ್‌ಂದ ಬುಡಾದೆ ಕಣ್ಣೀರ್ ಸುರ್ಸಿ ಸುರ್ಸಿ ಬೇಜಾರ್ ಪಟ್ಟ ಬಾನ್ದೇವಿ ಅಂದ್ ನಾವ್ ಮಡಿಕೇರಿ ಬುಟ್ಟ್ ಹೋದವೆಂತ ಗೊತ್ತಾಗಿಯೊ ಏನೋ, ಹಂಞ ನಗೆ ಮೋರೆಂದ ಇರುವಾಂಗೆ ಇತ್ತ್.

ನಾವು ಮಡಿಕೇರಿಂದ ಮೈಸೂರಿಗೆ ಬಂದದ್ ಆದಿ ಕಾವೇರಿ ಬಸ್ಸಿಲಿ. ನಾವು ಒಟ್ಟು ಹನ್ನೊಂದು ಹೈದಂಗ, ಹನ್ನೆರಡ್ ಗೂಡೆಗ ಸೇರಿ ಇಪ್ಪತ್ತಮೂರು ಮಕ್ಕ ಮಾತ್ರ. ನಮ್ಮ ಕ್ಲಾಸ್‌ಂದ ಮೂರು ಜನ ಮಾತ್ರ. ನಾನ್ ಮತ್ತು ಮುಂಡೋಡಿ ರಾಮಚಂದ್ರ. ನಾವಿಬ್ಬರ್ ಸರಕಾರಿ ಕಾಲೇಜ್ ಹಾಸ್ಟೆಲ್‌ಲಿ ಇದ್ದವು. ನಾರಾಯಣ ಸ್ವಾಮಿ ಮಡಿಕೇರಿಯಂವ. ಪೀತ ಭೂಮಿ ಪ್ರವಾಸಲಿ ಕೂಡ ನಮ್ಮ ಕ್ಲಾಸ್‌ಂದ ನಾವೇ ಮೂರು ಜನ ಹೋದೊವು. ಈ ಪ್ರವಾಸಕ್ಕೆ ಕೂಡ ಕ್ಲಾಸಿನ ಗೂಡೆಗ ಯಾರೂ ಬಾತ್ಲೆ. ಉಳ್ದವೆಲ್ಲ ಅಂತಿಮ ವರ್ಷದ ಬಿ.ಎ. ಮಕ್ಕ. ಪ್ರವಾಸದ ಹೊಣೆ ಹೊತ್ತ್ ಬಂದವು ನಾನ್ ಹಿಂದೆ ತಿಳ್ಸಿದ ಹಾಂಗೆ ಪ್ರೊ. ಹಮೀದ್‌ನವು. ಅವ್ಕೆ ಸಹಾಯಕರಾಗಿ ಕೊಡಗಿನ ಕುಮಾರಿ ಮೀರಾ ಮೇಡಮ್ಮ್ ಬಂದೊಳೊ. ಅವು ಈ ವರ್ಷ ಬಂದ ಇಂಗ್ಲೀಷ್ ಮೇಡಮ್ಮ್. ಅವು ವಿಮಾನ ಪರಿಚಾರಿಕೆಯಾಗಿ ಹೋಕೆ ಪ್ರಯತ್ನಿಸ್‌ತೊಳೊಂತ ಹೇಳಿವೆ. ನೀನೊಮ್ಮೆ ನೋಡೊಕು ಅವರ. ಅವು ಬಾರಿ ಪೊರ್ಲುನ ಮೇಡಮ್ಮ್. ಹದ ಎತ್ತರ, ತೋರ ಆಕರ್ಷಕ ನಿಲುವು ಒಮ್ಮೆ ನೋಡಿರೆ ಇನ್ನೊಮ್ಮೆ ನೋಡೊಕುಂತಾಗುವ ರೂಪ.

ನಾವು ಬಸ್ಸ್ ಹತ್ತಿಕಾಕನ ನಿಂಗೆ ಗೊತ್ತುಟಲ ನಮ್ಮ ಮೋರೆಲಿ ನಗು, ಉತ್ಸಾಹ ಉಕ್ಕಿ ಬರ್ತಿತ್ತ್. ತುಂಬಾ ದೂರದ ಪ್ರವಾಸ, ಎಲ್ಲರ ಎದೆ ಪ್ರವಾಸದ

ಪೂರ್ವಾನುಬವಂದ ತುಂಬಿ ಹೋಗಿತ್ತ್. ದಿಲ್ಲಿ ನಗರ ನಮ್ಮ ದೇಶದ ರಾಜದಾನಿ. ಪುರಾಣಕಾಲಂದಲೇ ಹೆಸ್ರ್ ಪಡ್ದ ನಗರ. ಪಾಂಡವರ ಇಂದ್ರಪ್ರಸ್ತ ಇಂದ್ ದಿಲ್ಲಿಯಾಗುಟು. ದಿಲ್ಲಿಯ ಗದ್ದುಗೆಗಾಗಿ ಆದ ಕದನ ಹೋರಾಡಿದ ವೀರರ, ಸತ್ತ ಬಂಟರ ಸಂಖ್ಯೆ ಎಷ್ಟೊ? ಈಗ ಅದ್ ಹೇಂಗುಟ್ಟೊ? ತಾಜ್‌ಮಹಲ್ ಜಗತ್ತಿನ ಸುಂದರ ನಿರ್ಮಾಣಗಳಲ್ಲಿ ಒಂದುಗಡ. ಅದ್ ಎಷ್ಟ್ ಪೊರ್ಲುಳ ಇರುದು. ಆ ಪೊರ್ಲುತನ ಅದ್ಕೆ ಹೇಂಗೆ ಬಾತೊ? ಪತ್ತೇಪುರ ಸಿಕ್ರಿ ಹೇಂಗಿರುದು. ದಿಲ್ಲಿಯ ಕೆಂಪು ಕೋಟೆ ಎಷ್ಟ್ ವಿಶಾಲ ಆಗಿರುದು. ಕುತುಬ್ ಮಿನಾರ್ ಎಷ್ಟ್ ಎತ್ತರ ಉಟ್ಟು? ಆದರೆ ಅದನ್ನೊಮ್ಮೆ ಹತ್ತಿ ನೋಡೊಕು. ರಾಜಸ್ತಾನದ ಜಯಪುರದ ಬೆಡಗ್ ಇನ್ನೂ ಇರ್ದೊ? ಅಲ್ಲ ಇಲ್ಲೆನೊ? ಬೊಂಬಾಯಿ ನಗರ ಎಷ್ಟ್ ದೊಡ್ಡದಿರುದು? ಹೀಂಗೆ ನಾನಾ ಬಾವನಾವೇಷಲಿ ನಾನ್ ಸಿಕ್ಕಿದ್ದರೆ ಬೇರೆಯವು ಅವರವರ ಬಾವನಾ ಲೋಕಲಿ ಮುಳ್ಗಿದ್ದೊ. ಹಿಂದೆ ಚರಿತ್ರೆ ಪಾಠ ಮಾಡಿಕಾಕನ ಕೇಳ್ದ ಸ್ತಳಗಳ ಜೀವನಲಿ ನೋಡಿಕೆ ಉಟ್ಟೊಂತ ನಿರಾಸೆ ಪಟ್ಟಿದ್ದೊ. ಈಗ ಅವುಗಳ್ಲಿ ಕೆಲವನ್ನಾದರ್ ನೋಡುವ ಅವಕಾಶ ಬಂದದಕ್ಕೆ ಎದೆ ಉಬ್ಬಿ ಹೋಗಿತ್ತ್. ಈ ಪ್ರವಾಸಕ್ಕೆ ಅಪ್ಪ ಇದ್ದಿದ್ದರೆ ಕಳ್ಸ್‌ತಿದ್ದೊ. ಈಗ ಅಣ್ಣ ಕಳ್ಸಿತಲ್ಲ! ಮನ್ಸ್‌ಲೇ ಉಪಕಾರ ಸ್ಮರಿಸಿಕಂಡೆ. ಇಂತ ಯೋಚನೆಗ ಮನ್ಸ್‌ಲಿ ಹಾದ್ ಹೋಗ್ತಿರಿಕಾಕನ ನಮ್ಮ ಬಸ್ಸ್ ಮೈಸೂರು ಮುಟ್ಟಿದ್ ಗೊತ್ತೇ ಆತ್ಲೆ.

ಬಸ್ಸ್ ನಮ್ಮನ್ನ್ ರೈಲ್ವೇ ಸ್ಟೇಷನ್ ವರೇಗೆ ಕರ್ಕಂಡ್ ಹೋತು. ನಾವ್ ಅಲ್ಲಿಯೆ ಇಳ್ದ್ ನಮ್ಮ ಸಾಮಾನ್‌ಗಳ ಪ್ರಯಾಣಿಕರ್ ಕಾಯುವ ಕೋಣೆಲಿ ಇಸಿದೊ. ಬೆಂಗ್ಳೂರು ರೈಲ್ ಹೊರ್ಡಿಕೆ ಇನ್ನೂ ಹೊತ್ತಿತ್ತ್. ಹಾಂಗಾಗಿ ನಾವ್ ಕೆಲವು ಹಂಞ ಸುತ್ತಾಡಿ ಬರೊನಂತೇಳಿ ಪೇಟೆ ಕಡೆ ಹೊರ್ಟೊ. ಮೈಸೂರ್‌ಲಿ ದಸರಕ್ಕಾಗಿ ವಿಶೇಷ ತಯಾರಿ ನಡಿತಾ ಇತ್ತ್. ಪ್ರವಾಸ ಮುಗ್ಸಿ ಬಾಕಾಕನ ನೋಡ್ನೊಂತೇಳಿ ಸುಮ್ಮನಾದೊ.

ಬೆಂಗ್ಳೂರು ರೈಲ್ ಹಿಂಬೊತ್ತು 3–30ಕೆಂತ ಪ್ರೊಫೆಶರ್ ಹೇಳ್ದೊ. ನಾವ್ ಹೋಕಾದ್ದ್ ಅದರ್ಲೆ. ರೈಲ್ ಬಂದಕೂಡ್ಲೆ ನಾವ್ಗಾಗಿ ಕಾದಿರಿಸಿದ ಕಂಪಾರ್ಟ್‌ಮೆಂಟ್‌ಲಿ ನಮ್ಮ ಸಾಮಾನೆಲ್ಲ ಇಸಿ ಕುದ್ದ್‌ಕಂಡೊ. ಅದ್ ಸಣ್ಣದಾಗಿತ್ತ್. ಹದಿನೇಳ್ ಜನ ಕುದ್ರುವಲ್ಲಿ ಇಪ್ಪತ್ತೈದ್ ಜನ ಕುದ್ರಿಕೆ ತುಸು ಕಷ್ಟನೇ ಆತ್. ಬೆಂಗಳೂರ್‌ಂದ ಗಾಡಿ ಹೇಂಗೂ ಬದಲಾಕೆ ಉಟ್ಟಲ್ಲಂತೇಳುವ ಸಮಾದಾನಂದ ಸುದಾರ್ಸಿಕಂಡ್ ಹೋದೊ.

ರೈಲ್ ಪ್ರಯಾಣ ನನ್ನ ಪಾಲಿಗೆ ಹೊಸ್ತ್. ನಂಗೆ ಮಾತ್ರ ಅಲ್ಲ ನಮ್ಮಲ್ಲಿ

ಹೆಚ್ಚಿನವ್ಕೆ ಹೊಸ್ತಾಗಿತ್ತ್. ಆಯುಷ್ಯಲಿ ಕಾಲ್‌ಬಾಗ ಕಳ್ದ ಮೇಲೆ ರೈಲಿನ ಪರಿಚಯ ಆದ್. ಇನ್ನ್ ವಿಮಾನ ಪ್ರಯಾಣ ದೂರದ ಕನ್ಸೇ ಸರಿ. ನೀನ್ ತುಂಬಾ ಸರ್ತಿ ರೈಲ್ ಪ್ರಯಾಣ ಮಾಡಿಯೊಳಂತ ಹೇಳ್ತಿದ್ದ. ನೀನ್ ಅದೃಷ್ಟವಂತೆ. ಅಂತೂ ಈ ಸರ್ತಿ ತುಂಬಾ ದೂರ ರೈಲ್‌ಲಿ ಪ್ರಯಾಣ ಮಾಡಿಕುಟ್ಟೊಲ್ಲ ಅದೇ ಕುಸಿ.

ನಾನ್ ಮೈಸೂರು ಬೆಂಗಳೂರು ಮಾರ್ಗಲಿ ಪ್ರಯಾಣ ಮಾಡ್ತಿರುದು ಇದೇ ಸುರು. ಮೈಸೂರುಂದ ಹಂಞ ಮುಂದೆ ಹೋಕಾಕನ ಶ್ರೀರಂಗಪಟ್ಟಣ ಸಿಕ್ಕಿದೆಂತ ನೀನ್ ಹೇಳಿದ್ದೆ. ಅದ್ ನಮ್ಮ ಕರ್ನಾಟಕದ ಒಂದು ಮುಖ್ಯ ಚಾರಿತ್ರಿಕ ಪಟ್ಟಣ. ಅದನ್ನ್ ದೂರಂದ ನೋಡುವ ಅವಕಾಶ ಇದ್ದದರ್‌ಂದ ಯಾಗ ಸಿಕ್ಕಿದೆಂತ ಕಾಯ್ತಾ ಇದ್ದೆ. ನೀನ್ ತುಂಬಾ ಸರ್ತಿ ಈ ಜಾಗ ನೋಡಿಯೊಳಂತ ಹೇಳಿದ್ದೆ. ನೀನ್ ಹೇಳ್ದಂಗೆ ಇದ್ ಒಂದು ದ್ವೀಪದ ಹಾಂಗೆ ಉಟ್ಟು. ಕಾವೇರಿ ಹಳ್ಳ ಇಲ್ಲಿ ಎರ್ಡ್ ಕವಲಾಗಿ ಶ್ರೀರಂಗಪಟ್ಟಣನ ಸುತ್ತು ಹಾಕಿ ಹರ್ದದೆ. ಒಳ್ಳ ಆಯಕಟ್ಟಿನ ಜಾಗಲಿ ಇದ್ ಒಳದ್. ಕೋಟೆ ಗೋಡೆ ಎಲ್ಲಾ ಜರ್ದ್ ಬಿದ್ದ್ ಹಾಳಾಗಿ ಕಾಡೆಲ್ಲ ಬೆಳ್ದುಟು. ಇನ್ನೊಮ್ಮೆ ನಾವಿಬ್ಬರ್ ಇಲ್ಲಿಗೆ ಬರೊನೊ. ಆಗ ನೀನೆ ನಂಗೆ ಎಲ್ಲ ವಿವರಿಸಿ ಹೇಳಿಬುಡು.

ನಾವ್ ಬೆಂಗಳೂರು ಮುಟ್ಟಿಕಾಕನ ರಾತ್ರಿ 8ಗಂಟೆಯೇನೊ ಆಗಿತ್ತ್. ಬೆಂಗಳೂರ್‌ಂದ ಮದ್ರಾಸಿಗೆ ಹೋಗುವ ಗಾಡಿ ತಯಾರಾಗಿ ನಿಂತಿತ್ತ್. ನಾವ್ ಅವ್ಸರಲಿ ಇಳ್ದ್, ಬೇಗ ಬೇಗ ಹೋಗಿ ನಾವ್ಗೆ ಗೊತ್ತು ಮಾಡ್ದ ಕೋಣೆ ಹುಡ್ಕಿ ಕುದ್ದ್‌ಕಂಡೊ.

ನಾವ್ಗೆ ಎಲ್ಲವುಕಾಗಿ ಒಂದೇ ಕಂಪಾರ್ಟ್‌ಮೆಂಟ್. ಜಾಗ ಸಾಕಷ್ಟ್ ಇತ್ತ್. ಮೇಡಮ್ಮ್ ನಮ್ಮೊಟ್ಟಿಗೆ ಇದ್ದೊ. ಪ್ರೊಫೆಸರ್ ಬೇರೆ ಕಡೆ ಇದ್ದೊ. ನಮ್ಮದ್ ಜನತಾ ಕ್ಲಾಸ್. ನಾವ್ ಬೆಂಗಳೂರ್ಲಿ ರೈಲ್ ಹತ್ತಿಕಾಕನ ಬುತ್ತಿ ಊಟ ತಕಂಡಿದ್ದೊ. ರೈಲ್‌ಲೇ ಊಟ ಮುಗ್ಸಿ ಮಲ್ಗಿಕೆ ಜಾಗ ಮಾಡಿಕಂಡ್ ಮಲ್ಗಿದೊ. ನಮ್ಮ ರೈಲ್ ಗಡಕ್ ಗಡಕ್‌ಂತ ಸದ್ದ್ ಮಾಡಿಕಂಡ್ ಒಂದೇ ಸಮನೆ ಓಡ್ತಿತ್ತ್. ನಿದ್ದೆ ಲಾಯ್ಕಾಗಿ ಬಾತ್. ಮಾರ್ನೆ ದಿನ ಬೊಳ್ಪಿಗೆ ಹಂಞ ಬೇಗ ಎದ್ದ್ ಬೊಳ್ಪಿನ ಕೆಲ್ಸ ಎಲ್ಲ ಮುಗ್ಸಿ ತಯಾರಾಗುವಷ್ಟರಲ್ಲಿ ಗಾಡಿ ಮದರಾಸ್ ಮುಟ್ಟಿತ್.

ನಾವ್ ಇಳಿಯಕಾಕನ ಗಂಟೆ 6 ಆಗಿತ್ತ್. ಬರ್ತಿದ್ದ ಮಳೆ ನಿಂತಿತ್ತ್. ಎಲ್ಲಾ ಕಡೆ ಕೆಸ್ರ್. ನಮ್ಮ ಸಾಮಾನ್‌ನ ಕಾಯುವ ಕೋಣೆಲಿ ಇಸಿ ಪೇಟೆ ಕಡೆ ಹೋಗಿ ಉಪಹಾರ ಮುಗ್ಸಿದೊ. ಇಲ್ಲಿ ನಾವ್ಗೆ ಮದರಾಸ್ ನೋಡುವ ಕಾರ್ಯಕ್ರಮ ಇಲ್ಲೆ. ನಾವು ಇಂದೇ ಹೊರ್ಟ್ ಆಗ್ರಾ ನಗರಕ್ಕೆ ಹೋದು. ಆಗ್ರಾದ ಗಾಡಿ ಈಗ 10–45ಕ್ಕೆ ಹೊರ್ಡುದು ಗಡ. ಹಾಂಗಾಗಿ ಮೂರು ನಾಲ್ಕ್ ಗಂಟೆ ಪುರುಸೊತ್ತು

ಉಟ್ಟಲ ಅದ್ಕೆ ಹತ್ರ ಇರುವ ಮೂನ್ ಮಾರ್ಕೆಟ್ ನೋಡೋನೊಂತೇಳಿ ನಾನ್ ರಾಮಚಂದ್ರ ಇನ್ನ್ ಕೆಲವು ಸೇರಿ ಹೊದೊ. ಆದರೆ ಅದ್ ಇನ್ನೂ ಓಪನ್ ಆಗಿತ್ಲೆ. ಗೊತ್ತಿಲ್ಲದ ಊರ್ಲಿ ದೂರ ಹೋಗಿ ದಾರಿ ತಪ್ಪಿ ತೊಂದರೆಗೆ ಒಳಗಾದು ಬೇಡಂತೇಳಿ ಹಾಂಗೆ ಸುತ್ತಾಡಿ ಸ್ಟೇಶನ್‌ಗೆ ತಿರ್ಗಿ ಬಂದೊ.

ರೈಲ್ ಹೊರ್ಡಿಕೆ ಇನ್ನೂ ಹೊತ್ತು ಉಟ್ಟು. ಇದೇ ಒಳ್ಳೆ ಹೊತ್ತುಂತೇಳಿ ಈ ಕಾಗದ ಬರೆಯಕೆ ಸುರು ಮಾಡ್ಡೆ.

ನಮ್ಮ ಪ್ರವಾಸ ಬಳಗದವು ಎಲ್ಲ ಉಸಾರೊಳೊ. ನಮ್ಮ ಜೊತೆಲಿರುವ ಗೂಡೆಗ ಎಲ್ಲ ನನ್ನ ಮೇಲಿನ ತರಗತಿಯುವು ಅವು ಲಾಯ್ಕಾಗಿ ಹೊಂದಿಕೊಂಡೊಳೊ. ನಾವೀಗ ಒಂದೇ ಮನೆ ಮಕ್ಕಳಾಗೊಳೊ. ನಾವ್ ಇಲ್ಲಿಂದ ಹೊರ್ಟ್ ಆಗ್ರಾ ತಲ್ಪೊಕುಂತಾದರೆ ರೈಲಿಲಿ ಎರ್ಡ್ ರಾತ್ರಿ ಒಂದು ಹಗಲ್ ಪ್ರಯಾಣ ಮಾಡೊಕಡ. ಕುದ್ದ್ ಕುದ್ದ್ ಬೇಜಾರ್ ಹಿಡ್ದದೇನೊ. ನಮ್ಮ ಕೋಣೆಲಿ ಸಾಕಷ್ಟ್ ಜಾಗ ಇದ್ದರೆ ಪರವಾಗಿಲ್ಲೆ. ಇಲ್ಲದಿದ್ದರೆ ಆಗ್ರಾ ಮುಟ್ಟಿಕಾಕನ ಸಾಕೋ ಸಾಕಾದು. ಹೊ! ನಮ್ಮ ಗಾಡಿ ಬಂದೇ ಬುಡ್ತ್. ನಮ್ಮವೆಲ್ಲ ಕಂಪಾರ್ಟ್‌ಮೆಂಟ್ ಹುಡುಕುತ್ತಾ ಒಳೊ. ನಾನ್ ಪತ್ರ ಇಲ್ಲಿಗೆ ನಿಲ್ಸಿನೆ. ಮುಂದಿನ ಸಂಗ್ತಿ ಆಗ್ರಾಂದ.

ಇತೀ ನಿನ್ನ ಗೆಳೆಯ

ಆಗ್ರ
7–10–1959

ಒಲವಿನ ಗೆಳತಿ ಮಾಲಿನಿಗೆ,

ಈಗ ನಾವು ಆಗ್ರಲಿ ಒಳೊ. ನಾವು ಮದ್ರಾಸ್‌ಂದ ಹೊರ್ಟದ್ ಮೊನ್ನೆ ಬೊಳ್ಪಿಗೆ ಗಂ. 10–45ಕ್ಕೆ ತಾನೆ. ಆ ದಿನದ ಹಗಲ್ ಮತ್ತೆ ರಾತ್ರಿ ಒಂದು ಹಗಲ್ ದಾಟಿ ಮತ್ತೊಂದು ರಾತ್ರಿ ಕಳ್ದ್ ಇಂದ್ ಬೊಳ್ಪಿಗೆ 7ಗಂಟೆಗೆ ಆಗ್ರ ಸೇರ್‍ದೊ. ಪುಣ್ಯಕ್ಕೆ ನಾವ್ಗೆ ಅಲ್ಲಿಂದ ಎರ್ಡ್ ಕೋಣೆಗ ಇದ್ದ್‌ದರ್‌ಂದ ಏನೂ ತೊಂದರೆ ಇಲ್ಲದೆ ಪ್ರಯಾಣ ಮುಗ್ಸಿದೊ. ಆದ್ರೆ ನಮ್ಮ ಬಂಡಿ ನಿಲ್ದಾಣಗಳ್ಲಿ ನಿಲ್ಸಿಕಾಕನೆಲ್ಲ ಜಾಗ ಇರುದರ ಕಂಡ್ ಪ್ರಯಾಣಿಕರ್ ಪಿಜಿನ್‌ಗಳ ಹಾಂಗೆ ಮುತ್ತುತಿದ್ದೊ. ಇದ್ ಕಾಲೇಜ್ ಮಕ್ಕಳ್‌ಂತ ಗೊತ್ತಾದ ಮೇಲೆ ಉಪದ್ರ ಕೊಡ್ತಿತ್ಲೆ. ಬಲತ್ಕಾರಂದ ಹತ್ತಿಕೆ ಯತ್ನಿಸ್‌ತಿದ್ದವರ್‍ನ ಬುಡ್ತಿತ್ಲೆ. ಆದರೆ ಯಾರ ಕಾಟ ತಪ್ಪಿರೂ ಬಿಕ್ಷುಕರ ಕಾಟ ಮಾತ್ರ ತಪ್ತಿತ್ಲೆ. ಇನ್ನ್ ಕಾಫಿ, ತಿಂಡಿ, ಚಾ ಮಾರುವವು ಆಕೆಂಡಂದ ಈ ಕಡೆಗೆ ಈ ಕಡೆಂದ ಆಕಡೆಗೆ ಸವಾರಿ ಹೋಗ್ತಲೇ ಇದ್ದದೆ. ಆದರೆ ಅವು ಚಾಯೆ..............ಚಾಯೆ....... ಕಾಫಿ...........ಕಾಫಿ............. ಒಡೆ...............ಒಡೆಂತ............ ಕೂಗಿ ಕರೆವ ಅವರ ಸೊರ ಕೇಳಿಕೆ ಒಂದು ತರ ಲಾಯ್ಕನೇ ಇದ್ದದೆ.

ನಾವ್ ಪ್ರಯಾಣ ಮಾಡ್ದ್ ಮೂರನೆ ತರಗತಿಲಿ. ಬೇರೆ ಕಡೆಲಿದ್ದ ಪ್ರೊಪೆಸರ್ ನಿಲ್ದಾಣಗಳ್ಲಿ ಆಗಾಗ ಬಂದ್ ನಮ್ಮ ವಿಚಾರ್‍ಸ್ತಿದ್ದೊ. ನಮ್ಮ ಮೀರಾ ಮೇಡಮ್ಮ್‌ನವು ನಮ್ಮೊಟ್ಟಿಗೆನೇ ಇದ್ದೊ.

ನಾವು ಮದ್ರಾಸ್‌ಂದ ಹೊರ್ಟ್ ಬೆಜವಾಡ ಮುಟ್ಟಿಕಾಕನ ಕತ್ತಲಾಗಿತ್ತ್. ಅಲ್ಲಿವರೇಗೆ ನಾವು ಪ್ರಯಾಣ ಮಾಡ್ದ್ ಕರಾವಳಿಲಿ. ದಾರಿ ಉದ್ದಕ್ಕೂ ಬಂಗಾಳ ಸಮುದ್ರದ ತಂಪು ಗಾಳಿ ಹಾಯಾಗಿ ಬೀಸ್‌ತಿತ್ತ್. ಆದರೆ ಆಕಾಸ ಮಾತ್ರ ಮೋಡ ಮುಸುಕಿದ್ದ್ ಮುಸುಂಡ್ ಹೊತ್ತ್‌ಕಂಡ್ ಇದ್ದಾಂಗೆ ಇತ್ತ್. ಆಗಾಗ ಸಣ್ಣ ಮಳೆನೂ ಬರ್ತಿತ್ತ್. ಅಲ್ಲಿಂದ ಮುಂದೆ ಬಯಲ್ ಪ್ರದೇಶ. ಕಣ್ಣ್ ಎತ್ತುವಲ್ಲಿವರೇಗೆ ನಾನಾ ಬೆಳೆ, ಪೈರ್‌ಗಳ ಹಸಿರ್ ನೋಟ. ರಾಗಿ, ಜೋಳ, ಗೋಧಿ ತರಕಾರಿ ಬೆಳೆಗಳ ದೃಶ್ಯ ಕಣ್ಣಿಗೆ ಮನಸ್ಸಿಗೆ ಕುಸಿ ಕೊಡ್ತಿತ್ತ್. ಬೆಜವಾಡ ಇರುದು. ಕೃಷ್ಣಾ ನದಿ ಸಮುದ್ರ ಸೇರುವ ಮುಖಜ ಬೂಮಿಲಿ. ನಾವ್ ರಾತ್ರಿ ಊಟನ ರೈಲ್‌ಲಿ ಇಲ್ಲೆ ಮುಗ್ಸಿ ಮಲ್ಗಿಕೆ ತಯಾರ್ ಮಾಡ್ದೊ. ರೈಲ್ ಓಡ್ತಿರಿಕಾಕನ ನಿದ್ದೆ ಮಾಡ್ದುಂತೇಳಿರೆ ಬಾರೀ ಲಾಯ್ಕು. ತೊಟ್ಲ್‌ಲಿ ತೂಗಿದಾಂಗೆ ಆದೆ. ನಾವ್ ಕೂಸಾಗಿರಿಕಾಕನ ಅವ್ವ ಒಚ್ಚಿದ್ ನೆನ್ಪಿರುದುಲೆ. ಆದರೆ ಈಗ ಅದ್ ಗ್ಯಾನ ಆದೆ. ರೈಲ್‌ನ ಗಡಕ್–ಗಡ–ಗಡಕ್–ಗಡ ಸದ್ದ್ ನಿದ್ರೆಗೆ ತಾಳ ಹಾಕಿದ್ದಾಂಗೆ

ಆದೆ. ನಂಗೆ ರಾತ್ರಿ ಹೇಂಗೆ ಕಳ್ದ್ ಹೋತ್‌ಂತ ಗೊತ್ತೇ ಆತ್ಲೆ.

ನಮ್ಮ ಬಂಡಿ ವಾರಂಗಲ್, ಚಾಂದ್ ದಾಟಿ ವಾರ್ದಾ ಮುಟ್ಟಿಕೆ ಮುಂದೆನೇ ಬೊಳ್ಪಾಗಿತ್ತ್. ಹೊತ್ತು ನೆತ್ತಿಗೇರಿಕಾಕನ ನಾಗ್ಪುರಕ್ಕೆ ಬಂದೊ. ನಮ್ಮ ಗಾಡಿ ನಾಗ್ಪುರಲಿ ನಿತ್ತ ಕೂಡ್ಲೆ ಅಂಚೆ ಪೇದೆ ನಾವಿದ್ದಲ್ಲಿಗೆ ಬಂದ್ ಒಂದು ಕಾಗ್ದ, ತಿಂಡಿ, ಕಿತ್ತುಳಿ ಹಣ್ಣ್‌ನ ಕಟ್ಟ್ ತಂದ್ ಕೊಟ್ಟತ್. ನಾವ್ಗೆ ಆಶ್ಚರ್ಯ! ಯಾರ್ ಕಳ್ಸಿದ್‌ಂತ? ಅದ್ ನಮ್ಮ ಕಳ್ದ ವರ್ಸದ ಪ್ರವಾಸಕ್ಕೆ ಬಂದಿದ್ದ ಅಕ್ಕವ್ವ ಮೇಡಮ್ಮ್‌ಂತ ಮತ್ತೆ ಗೊತ್ತಾತ್. ಅವು ಯನ್.ಸಿ.ಸಿ. ಆಫೀಸರ್ ತರಬೇತಿಗೆಂತೇಳಿ ನಾಗ್ಪುರಕ್ಕೆ ಬಂದಿದ್ದೊ. ಅವು ತಿಂಡಿ ಜೊತೆಲಿ ಪತ್ರ ಮೂಲಕ ನಮ್ಮ ಪ್ರವಾಸಕ್ಕೆ ಶುಬ ಕೋರಿದ್ದೊ.

ನಾಗಪುರ ಕಿತ್ತಳೆಗೆ ಹೆಸ್ರ್ ಪಡ್ದ ಜಾಗ. ನಾಗ್ಪುರಲಿ ಪ್ರಯಾಣ ಮಾಡಿಕಾಕನ ಸುತ್ತ ಮುತ್ತ ಕಿತ್ತಳೆ ತೋಟ ಕಂಡದೆ. ಕೊಡಗಿನ ಕಿತ್ತಳೆ ತಿಂದ್ ರುಚಿ ಗೊತ್ತಿದ್ದ ನಾವ್ಗೆ ಅಲ್ಲಿ ಕಿತ್ತಳೆ ಅಷ್ಟ್ ರುಚಿ ಅನ್ಸಿತ್ಲೆ. ಆದರೆ ಮೇಡಮ್ಮ್ ಕಳ್ಸಿದ ಕಿತ್ತಳೆ, ತಿಂಡಿ ತುಂಬಾ ರುಚಿಯಾಗಿತ್ತ್. ಮಧ್ಯಾಹ್ನದ ಊಟ ನಾವ್ ಇಲ್ಲೆ ಮುಗ್ಸಿದೊ.

ನಾಗ್ಪುರ ಇರ್ದು ಮಧ್ಯಪ್ರದೇಶಲಿ. ಇದ್ ಹಿಂದುಳಿದ ಪ್ರದೇಶ. ಬಿಕ್ಷುಕರ ಸಂಖ್ಯೆ ಇಲ್ಲಿ ಜಾಸ್ತಿ. ಪ್ರಯಾಣಿಕರ್ ಉಂಡ್ ಉಳ್ದದರ್‌ನ ಬಿಸಾಡ್ದ್ ಕೆಸ್ರ್ ಮಣ್ಣ್‌ಲಿ ಬಿದ್ರೂ ಅದನ್ನೆ ಹೆಕ್ಕಿ ತಿಂಬೊದರ್ನ ಕಾಂಬಕಾಕನ ಮಾತ್ರ ಕರ್ಳ್ ಕಿತ್ತ್ ಬಂದಂಗೆ ಆದೆ. ಉಂಬಕನೂ ಅಷ್ಟೆ ಅನ್ನ ಬೇಡಿಕಂಡ್ ಸುತ್ತಮುತ್ತ ಬಂದವೆ. ಇದ್ ಇಲ್ಲಿವರೆಗೆ ನಾವು ಎಲ್ಲೂ ಕಾಣದ ದೃಶ್ಯ. ಅದ್ ಅಸಹ್ಯ ಮಾತ್ರ ಅಲ್ಲ ಮನ್ಸಿಗೆ ಬೇನೆ ತರುವಂತದ್ದ್. ನಮ್ಮ ದೇಶದ ಬಡತನ ಹೋಗಿ ಸುಬಿಕ್ಷ ಬಾಕೆ ಇನ್ನ್ ಎಷ್ಟ್ ಕಾಲ ಬೇಕೊ? ಅಲ್ಲ–ಇಲ್ಲಿ ನಂಗೊಂದು ಪ್ರಶ್ನೆ. ನಾವ್ ನಂಬುವಂತ ದೇವ್ರ್ ಒಬ್ಬ ಉಟ್ಟೊಂತ? ಇದ್ರೆ ಇಂತಹ ಹಸಿವು ಜಗತ್ತ್‌ನ ಅಂವ ಯಾಕೆ ಸೃಷ್ಟಿ ಮಾಡೊಕು ಹೇಳ್. ಜಗತ್ತಿನ ಎಲ್ಲ ಒಳ್ಳೆದಕ್ಕೆ ಅವನೇ ಕಾರಣಾಂತ ಆದರೆ ಕೆಟ್ಟದಕ್ಕೂ ಅವನೇ ಕಾರಣಂತ ನನ್ನ ನಂಬಿಕೆ. ಎಲ್ಲಾ ಅವನ ಲೀಲೆಂತ ಹೇಳ್ದು ಪಲಾಯನ ವಾದ .

ನಾಗ್ಪುರ ದಾಟಿ ಮುಂದೆ ಬಾಕಾಕನ ಗುಡ್ಡ, ಬೆಟ್ಟ, ಪರ್ವತಗಳ ಸಾಲ್ ಸಿಕ್ಕಿದೆ. ಅದ್ ಮಹದೇವ ಬೆಟ್ಟಗ. ವಿಂದ್ಯಾ ಪರ್ವತದ ಬಾಗ. ನಮ್ಮ ಪುಣ್ಯಕ್ಕೆ ವಿಂದ್ಯಾ ಪರ್ವತ ದಾಟುವವರೇಗೆ ಕತ್ತಲಾತ್ಲೆ. ವಿಂದ್ಯಾಗಿರಿಗಳ ದರ್ಶನ, ಗಿರಿಸಾಲ್‌ಗಳ ನೋಟ ತುಂಬಾ ಕುಸಿ ಕೊಟ್ಟದೆ. ಬೂಶಾಸ್ತ್ರ ತಜ್ಞರ್ ಹಿಮಾಲಯಕ್ಕಿಂತ ವಿಂದ್ಯಾ ಪರ್ವತ ಹಳೆಕಾಲದ್ದ್‌ಂತ ಹೇಳಿವೆ.

ಈ ಪ್ರದೇಶಲಿ ರೈಲ್ ದಾರಿ ಕಣಿವೆಗಳ ಪಕ್ಕಲಿ ಪರ್ವತಗಳಿಗೆ ಸುತ್ತು ಹಾಕಿ ಹೋದೆ. ಕೆಲವು ಕಡೆ ರೈಲ್ ದಾರಿಗಾಗಿ ಪರ್ವತಗಳ ಕೊರ್ದ್ ಸುರಂಗ ಮಾರ್ಗ ಮಾಡಿಯೊಳೊ. ಅದರೊಳಗೆ ಕತ್ತಲೆ. ಆದರೆ ಬೆಳ್ಕ್‌ನ ವ್ಯವಸ್ತೆ ಉಟ್ಟು. ಸುರಂಗದೊಳಗೆ ರೈಲ್ ಹಾದ್ ಹೋಕಾಕನ ಅದರ ಶಬ್ದಕ್ಕೆ ಕೆಬಿ ಮುಚ್ಚೊಕಾದೆ. ವಿಂದ್ಯಾ ಪರ್ವತ ತಪ್ಪಲ್‌ಗ ಕೊಡಗಿನ ಬೆಟ್ಟಗಳ ಹಾಂಗೆ ಸಸ್ಯ ಶಾಮಲೆ. ಕೆಲವು ಕಡೆ ದಟ್ಟ ಕಾಡುನೂ ಉಟ್ಟು ಇಲ್ಲಿ ಕೂಡ ತೇಗ, ಮರ್ವ, ಬಣ್ಪು ಮರಗಳ ನೋಡಕ್. ಅವ್ಗಳ ಸೊಪ್ಪು ನಮ್ಮ ಕಡೆ ಇರುವ ಸೊಪ್ಪಿಗಿಂತ ತುಸು ಬೇರೆಯಾಗಿ ಕಂಡದೆ. ಈ ಜಾಗಲಿ ಹೋಕಾಕನ ಕಣ್ಣ್‌ಗ ಎಚ್ಚರ ಆದವೆ. ಕಣಿವೆಗಳ ವನರಾಸಿ ಕಣ್ಣ್‌ತುಂಬಿ ಮನ್ಸ್ ಹಸಿರಾದೆ. ಈ ಗಿರಿ ಸಾಲ್‌ಗಳ ದಾಟಿ ಮುಂದೆ ಹೋದರೆ ಮತ್ತೆ ಎದುರಾದು ಬಟ್ಟ ಬಯಲ್. ಚಂಬಲ್ ಕಣಿವೆ ಡಕಾಯಿತರ್ ಇರುವ ಜಾಗಂತ ನಿಂಗೆ ಗೊತ್ತುಟಲ. ಆ ಪ್ರದೇಶನ ದಾಟಿಕಂಡ್ ಆಗ್ರಕ್ಕೆ ಬಾದು.

ಆ ಬಟ್ಟ ಬಯಲ್‌ನ ಹೊಲಗಳ್ಲಿ ದುಡಿಯುವ ರೈತರ ಶ್ರಮಕ್ಕೆ ನಾವು ಬೆಲೆಕಟ್ಟುವಾಂಗಿಲ್ಲೆ. ಆ ಉರಿ ಬಿಸ್‌ಲ್‌ಲಿ ಒಂದಲ್ಲ ಒಂದು ಕೆಲ್ಸ ಮಾಡಿಕಂಡೇ ಇದ್ದವೆ. ಗಂಡ್ಸರ್ ಹೊಲ ಊಳುತಿದ್ದರೆ ಹೆಂಗ್ಸರ್ ಬೀಜ ಬಿತ್ತುವ, ಗೊಬ್ಬರ ಹಾಕುವ, ಕಳೆ ಕೀಳುವ ಕೆಲ್ಸ ಮಾಡಿಕಂಡ್ ಇದ್ದವೆ. ಅವರ ನೇಗಿಲ್ ನಮ್ಮ ಕಡೆ ನೇಗಿಲ್ ಹಾಂಗೆ ಅಂದ ಇಲ್ಲೆ. ರೈತರ್ ಎಷ್ಟ್ ಬಡವು ಅಂತ ನೋಡಿಕಾಕನನೇ ಗೊತ್ತಾದೆ. ಅದೂ ಅವು ದುಡಿಯುತ್ತಿರುವ ಹೊಲ, ಅವರ್ದೊ? ಅಲ್ಲ ಅವರ ದನಿಗಳ್ದೊ ? ಉತ್ತರ ಬಾರತಲಿ ಜಮೀನ್ದಾರಿ ಪದ್ದತಿ ಉಟ್ಟುಂತ ನಾವ್ ಓದಿದ್. ಅಂದರೆ ನೂರಾರ್ ಸಾವಿರಾರ್ ಎಕ್ರೆ ಜಾಗ ಒಬ್ಬಂಗೆ ಸೇರಿದ್ದದೆ. ಅಲ್ಲಿ ದುಡಿಯೊವು ಕೂಲಿಯಾಳ್‌ಗ. ಅವ್ಕೆ ಕೊಡುವ ಕೂಲಿ ತುಂಬಾ ಕಡಿಮೆ. ಅವ್ ದುಡ್ದ್ ಗಳಿಸಿದ ಆರ್ ಕಾಸ್ ಮೂರ್ ಕಾಸ್ ಅವರ ಜೀವನಕ್ಕೆ ಸಾಕಾದ್ಲೆ. ನಮ್ಮ ದೇಶದ ಬಡ ರೈತರ ಉದ್ದಾರ ಆಗದ ಶಿವಾಯ್ ನಮ್ಮ ದೇಶದ ಉದ್ದಾರ ಆಗುವಾಂಗಿಲ್ಲೆ.

ನಮ್ಮ ಮನದಂಗಳಲಿ ಯೋಚನೆಗಳ ಸರಮಾಲೆ ಸಾಗ್‌ತಿತ್ತ್. ನಮ್ಮ ಬಂಡಿ ವಿಂದ್ಯಾಗಿರಿಗಳ ಹಿಂದೆ ಹಾಕಿ ಒಂದೇ ಸಮನೆ ಹೊಲಗಳ ನಡೂನ ದಾರಿಲಿ ಮುಂದೆ ಮುಂದೆ ಸಾಗ್‌ತಿತ್ತ್. ನಾವ್ ಯಾಗ ಆಗ್ರ ಸಿಕ್ಕಿದಂತ ಕುತೂಹಲಂದ ಕಾದಿರ್‌ಕಾಕನ ಇನ್ನೊಮ್ಮೆ ಕತ್ತಲಾತ್.

ನಾವ್ ನಾಗ್ಪುರಂದ ಹೊರ್ಟ್ ಬೋಪಾಲ್, ಜಾನ್ಸಿ, ಗ್ವಾಲಿಯರ್ ನಗರಗಳ ದಾಟಿ ಆಗ್ರ ತಲ್ಪಿದ್ ಇಂದ್ ಬೆಳಿಗ್ಗೆ. ನಾವ್ ದಾಟಿ ಬಂದ ಪ್ರದೇಶ ಎಲ್ಲ

ನೋಡಕಾದ ಸ್ತಳಗ. ಆದರೆ ನಮ್ಮ ಕಾರ್ಯಕ್ರಮಲಿ ಅದ್ ಇತ್ಲೆ. ಜಾನ್ಸಿ ಮತ್ತು ಗ್ವಾಲಿಯರ್ ಚಾರಿತ್ರಿಕ ಸ್ತಳ. ಇದೆಲ್ಲ ನೋಡಿಕಿಲ್ಲೆಲ್ಲಾಂತ ಬೇಜಾರ್ ಆತ್.

ಹೆಚ್ಚ್ ಕಡಿಮೆ 43ಗಂಟೆಗಳ ಪ್ರಯಾಣ ಮುಗ್ಸಿ ಇಂದ್ ಬೊಳ್ಪಿಗೆ ಆಗ್ರಲಿ ಇಳೆಕಾಕನ ನಾವೆಲ್ಲ ಸೋತ್ ಹೋಗಿದ್ದೊ, ನಾವ್ ಇಳ್ದ ಕೂಡಲೆ ನಿಲ್ದಾಣಲಿ ಇರುವ ಕಾಯುವ ಕೋಣೆಗೆ ಹೋಗಿ ಬೆಳಗಿನ ಕೆಲಸಗಳ ಮುಗ್ಸಿ ಬಟ್ಟೆ ಬರೆ ಬದಲಾಯ್ಸಿ ಸ್ಟೇಶನ್‌ಂದ ಹಂಞ ದೂರಲಿರುವ ವಸತಿಗೃಹಕ್ಕೆ ಜಟಕಾ ಬಂಡಿಗಳ್ಲಿ ಹೋದೊ. ಸಣ್ಣ ಮಳೆ ಬಾತಿತ್ತ್. ಬೀದಿ ಎಲ್ಲಾ ಕೊಳೆಯಾಗಿತ್ತ್. ನಾವ್ ಹೋಗಿ ಇಳಿವಷ್ಟರಲ್ಲಿ ಕೆಲವು ತುಂಬಾ ಚಂಡಿಯಾಗಿದ್ದೊ.

ನಮ್ಮದ್ ಇಂದ್ ಬಿಡು ಇಲ್ಲದ ಕಾರ್ಯಕ್ರಮ. ಆಗ್ರಲಿ ನೋಡಿಕೆ ಏನೆಲ್ಲಾ ಉಟ್ಟೊ ಅದಲ್ಲ ಇಂದೇ ನೋಡಿಕಂಡ್ ದಿಲ್ಲಿಗೆ ಹೋಕು. ವಸತಿ ಗೃಹದ ಒಂದು ಕೋಣೆಲಿ ನಮ್ಮ ಸಾಮಾನ್‌ಗಳ ಇಸಿ ಉಪಹಾರ ಇಲ್ಲೆ ಮುಗ್ಸಿ ನಗರ ಸುತ್ತಿಕೆ ಹೊರ್ಟೊ. ನಾವ್ಗೆ ಒಂದು ಬಸ್ಸ್ ಬೇಕಾಗಿತ್ತ್. ಬಸ್ಸ್ ಸ್ಟೇಂಡಿಗೆ ನಡ್ಕಂಡೇ ಹೋಗಿ ಒಂದು ಬಸ್ಸ್ ಗೊತ್ತು ಮಾಡಿಕಂಡ್ ನೋಡೊಕಾದ ಸ್ತಳಕ್ಕೆ ಹೋದೊ.

ಆಗ್ರ ಜಮುನಾ ನದಿನ ಎರ್ಡ್ ಕಡೆಗಳ್ಲಿ ವಿಶಾಲವಾಗಿ ಹರಡಿಕಂಡ್ ಇರುವ ನಗರ. ಇಲ್ಲಿ ಹಳೆ ನಗರ ಮತ್ತು ಹೊಸ ನಗರ ಅಂತ ಎರ್ಡ್ ಜಾಗ ಉಟ್ಟು. ಹಳೆ ನಗರ ಇರ್ದು ಜಮುನಾ ನದಿನ ಪೂರ್ವಕ್ಕೆ ಯಾ ಎಡದಂಡೆ ಮೇಲೆ. ಈ ನಗರಬಾಗ ಮಹಾಬಾರತ ಕಾಲಕ್ಕೆ ಸೇರ್ದ್ಂತ ಹೇಳುವೆ. ಹೊಸ ಆಗ್ರಾನಗರ ಜಮುನಾ ನದಿನ ಪಶ್ಚಿಮಕ್ಕೆ ಬಲ ದಂಡೆ ಮೇಲೆ ಇರ್ದು. ಹೊಸನಗರ ಕ್ರಿ.ಶ. 1558ರಲ್ಲಿ ಮೊಗಲ್ ದೊರೆ ಅಕ್ಬರ ಸ್ತಾಪನೆ ಮಾಡ್ದ್‌ಗಡ. ಹಾಂಗಾಗಿ ಈ ನಗರನ ಅಕ್ಬರಾಬಾದ್‌ಂತ ಕರ್ದವೆ. ಸಿಕಂದರಲೋಡಿಯ ಕಾಲಲಿ ಆಗ್ರಾ ನಗರ ರಾಜದಾನಿಯಾಗಿತ್ತ್ ಗಡ. ಆದ್ದರ್‌ಂದ ಈ ನಗರಕ್ಕೆ ಸಿಕಂದರ ಅಂತಲೂ ಹಸ್ರ್‌ಟ್ಟು. ಮೊಗಲ್ ಬಾದ್‌ಶಹ ಅಕ್ಬರನ ಗೋರಿ ಇದೇ ನಗರಲಿ ಒಳದ್.

ಹಳೆ ಆಗ್ರಾ ನಗರ ತುಂಬಾ ವಿಸ್ತಾರಾಗುಟ್ಟು. ಆದರೆ ಕಟ್ಟಡ ಮಾತ್ರ ತುಂಬಾ ಹಳ್ತ್. ನೋಡಿಕೆನೂ ಲಾಯ್ಕಿಲ್ಲೆ. ಹೊಸ ನಗರ ಮಾತ್ರ ಲಾಯ್ಕುಟ್ಟು. ಹೊಸ ಕಟ್ಟಡಗ, ಅಗಲದ ಬೀದಿ. ಆದರೆ ಮಳೆ ಬಂದರೆ ಬೀದಿ ಎಲ್ಲ ಕೆಸ್ರ್. ದುರ್ವಾಸನೆ ಬೇರೆ. ತಾಜ್‌ಮಹಲ್‌ನಂತ ಸುಂದರ ನಿರ್ಮಾಣ ಇರುವ ನಗರ ಹೀಂಗಿರುವ ದುಸ್ಥಿತಿಕಂಡ್ ಆಶ್ಚರ್ಯ ಆತ್.

ನಗರದ ಬೀದಿಲಿ ಹೋಕಾಕನ ಇಕ್ಕಡೆಲಿರುವ ಸಿಹಿತಿಂಡಿ ಅಂಗಡಿಗಳ ಚಿತ್ರ ಹೇಸಿಗೆ, ಅಸಹ್ಯ ಹುಟ್ಟಿಸಿದೆ. ಸಾಲ್ ಸಾಲಾಗಿರುವ ನಾನಾ ತರದ ಸಿಹಿತಿಂಡಿಗಳ ಅಂಗಡಿ, ಇಲ್ಲಿನ ಜನ ಬಾರಿ ಸಿಹಿತಿಂಡಿ ಪ್ರಿಯರ್‌ಂತ ಸಾರಿ ಹೇಳ್ದೆ. ಮಳೆ

ಬಂದ್ ರೋಡೆಲ್ಲ ಕೆಸ್ರಾದರೂ ಬೀದಿ ಪಕ್ಕಲಿ ನಾನಾ ತರದ ತಿಂಡಿ ಕಾಸುವ ಕಾಯಕ ನಡೆತ್ತಲೇ ಇತ್ತ್. ಕೆಸ್ರ್ ವಾಸನೆ ಕಡೆ ಅವರ ಗಮನ ಇದ್ದಾಂಗೆ ಅನ್ಸ್‌ತಿತ್ಲೆ. ನೊಣಗ ಇಪ್ಪೆ ಕುದ್ದಾಂಗೆ ಮುತ್ತಿಗೆ ಹಾಕಿದ್ದೊ. ಅದನ್ನ್ ನೋಡ್ರೆ ನಮ್ಮಂತವು ಯಾರೂ ತಕಂಡ್ ತಿಂಬಕಿಲೆ. ಅಲ್ಲಿ ಯಾರೂ ವ್ಯಾಪಾರ ಮಾಡದಿದ್ದರೂ ನೊಣಗ ಮಾತ್ರ ಸಕತ್ತ್ ವ್ಯಾಪಾರ ಮಾಡ್‌ತಿದ್ದೊ. ನಿಂಗೆ ನಾನಾ ಜಾತಿಯ ನೊಣಗಳ ಕಾಣಕುಂತಾದರೆ ಇಲ್ಲಿಗೆ ಬಂದರೆ ನೋಡಕ್. ನೊಣಗಳಿಗೆ ಇದ್ ಒಳ್ಳ ಆಶ್ರಯತಾಣ. ನೊಣಗಳ ಬಾರಿ ಲಾಯ್ಕಾಗಿ ಸಾಂಕುವೆ. ಯಾರೋ ಹೇಳ್ದೊ. ರಾಜಸ್ತಾನಲಿ ಇಲ್ಲಿಗಿಂತಲೂ ಜಾಸ್ತಿ ನೊಣಗ ಇದ್ದವೆಂತ. ಅಂತೂ ಇಲ್ಲಿನ ನೊಣಗಳ ಅವಸ್ತೆ ನೋಡಿಕಾಕನ ತಿಂಬ ಯಾವ ವಸ್ತುನೂ ತಕಂಕೆ ಹೆದ್ರಿಕೆ ಆದೆ. ಇಲ್ಲಿನ ಜನಗ ಸಕ್ರೆ ಇಲ್ಲದಿರುವ ಕಾಲಲೂ ಸಾಕಷ್ಟ್ ಉಪಯೋಗಿಸಿ ನೊಣಗಳಿಗೆ ದಾನ ಮಾಡುತ್ತೊಳೊ.

ನಮ್ಮ ಬಸ್ಸ್ ಪತ್ತೇಪುರ ಸಿಕ್ರಿ ಕಡೆ ಹೋಕಾಗಿತ್ತ್. ನಾವು ಬಸ್ಸ್ ಹತ್ತಿ ಅರ್ದಗಂಟೆ ಆದ್ರೂನೂ ಅದ್ ಹೊರ್ಡುವ ಲಕ್ಷಣ ಕಂಡತ್ಲೆ. ಆ ಬಸ್ಸ್‌ನ ಡ್ರೈವರ್ ಮತ್ತು ಕಂಡಕ್ಟರ್ ಒಳ್ಳ ಪುಳಿ ಮೂಟೆಗಳ ಹಾಂಗೆ ಇದ್ದೊ. ಬಹುಷ್ಯ ಅವು ಅಲ್ಲಿನ ಸಿಹಿ ತಿಂಡಿ ತಿಂದೇ ಹಾಂಗಾಗಿರೊಕು. ಬಸ್ಸ್ ಅವರ ಮಾತ್ ಕೇಳ್ತಿತ್ಲೆ. ಅವು ಬಸ್ಸ್ ಹೊರ್ಡ್‌ಸುವ ಸಾಹಸ ಬುಟ್ಟು ರೀಪೇರಿಗೆ ಸುರುಮಾಡ್ದೊ. ಈ ಬಸ್ಸ್ ನಂಬಿ ಕುದ್ದರೆ ಇಂದ್ ನಾವ್ ಆಗ್ರಾ ನಗರ ನೋಡಿ ದಿಲ್ಲಿಗೆ ಹೋದಾಂಗೆ ಅಂತ ಯೋಚ್ನೆ ಮಾಡ್ದೆ. ಕಾದ್ ಕಾದ್ ಸಾಕಾಗಿತ್ತ್. ಕೆಸ್ರ್‌ನ ದುರ್ವಾಸನೆ ಸಹಿಸಿಕೂ ಆಗ್‌ತಿತ್ಲೆ. ಅಂತೂ ಕಡೆಗೆ ಬಸ್ಸ್ ಡುರು ಡುರುಂತೇಳಿ ಪತ್ತೇಪುರ ಕಡೆಗೆ ಹೊರ್ಟತ್.

ಆಗ್ರಂದ ಪತ್ತೇಪುರ ಸಿಕ್ರಿಗೆ ಬಸ್ಸಿಲಿ ಹೆಚ್ಚ್ ಕಡಿಮೆ ಒಂದು ಗಂಟೆ ದಾರಿ. ಪತ್ತೇಪುರ ಸಿಕ್ರಿ ದಾರಿಲಿ ಸುಮಾರ್ ದೂರದವರೇಗೆ ಮಾರಾಟಕಿಸಿದ ಸಿಹಿ ತಿಂಡಿಗಳ ಮೇಲೆ ಎಡೆಬುಡದೆ ಅವ್ಯಾಹತವಾಗಿ ದಾಳಿ ಮಾಡುವ ನೊಣಗಳ ದಂಡಿನ ನೋಟ ಬುಟ್ಟರೆ ಬೇರೇನು ನೋಡಿಕೆ ಇಲ್ಲೆ. ನಗರ ದಾಟಿ ಮುಂದೆ ಹೋಕಾಕನ ವಿಶಾಲವಾಗಿರುವ ಬಯಲ್ ಪ್ರದೇಶ ಎದುರಾದೆ. ಇಲ್ಲಿ ಜನರ ಓಡಾಟ ಕಡಿಮೆ. ಬಸ್ಸ್ ಗಾಳಿನ ಸೀಳಿಕಂಡ್ ಓಡ್ತಿತ್ತ್. ನಾವು ಪತ್ತೇಪುರ ಸಿಕ್ರಿಗೆ ಹೋಗಿ ಇಳಿದೂ ಮಳೆ ಜೋರಾಗಿ ಬಾದು ಸರಿ ಆತ್. ಪತ್ತೇಪುರ ಸಿಕ್ರಿ ನೋಡುವ ಉತ್ಸಾಹ ತಣ್ಣಂಗೆ ಆತ್. ಪುಣ್ಯಕ್ಕೆ ಹಂಞ ಹೊತ್ಲೆ ಮಳೆ ನಿಂತತ್. ನೋಡಿಕೆ ಅನುಕೂಲನು ಆತ್.

ಪತ್ತೇಪುರ ಸಿಕ್ರಿಲಿ ಇರುದು ವಿಶಾಲವಾಗಿರುವ ಮತ್ತು ವ್ಯವಸ್ತಿತವಾಗಿರುವ

ಒಂದು ಸುಂದರ ಕೋಟೆ. ಅಲ್ಲಿಗೆ ಹೋಗಿ ಬಸ್ಸ್ಂದ ಇಳ್ದಾಕನ ಕಾಂಬೊದು ಒಂದು ಮಹಾದ್ವಾರ. ಇದೊಂದು ಹೆಬ್ಬಾಗಿಲ್ ಅದಕ್ಕೆ ಬುಲನ್ ದ್ವಾರವಾಜ್‌ಂತ ಹೆಸ್ರ್. ಇದಕ್ಕೆ ವಿಜಯದ್ವಾರ (Victory Gate)ಂತ ಇನ್ನೊಂದು ಹೆಸ್ರ್ಂದಲೂ ಕರ್ದವೆ. ಈ ಹೆಬ್ಬಾಗಿಲ್. ದಾಟಿ ಹೋಕುಂತಾದರೆ ಸುಮಾರ್ 50ಅಡಿ ಎತ್ತರದ ಮೆಟ್ಲ್‌ಗಳ ಹತ್ತಿ ಹೋಕು. ಈ ಕೋಟೆ ಕಟ್ಟಿಸಿದ್ ಮೊಗಲ್ ದೊರೆ ಅಕ್ಬರ. ಇದ್ ಅವನ ಹಿರಿಮೆಗೆ ಸಾಕ್ಷಿ ಎಂಬ ಹಾಂಗೆ ಉಟ್ಟು. ಪತ್ತೇಪುರ ಸಿಕ್ರಿನ ವಿಷಯ ಹೈಸ್ಕೂಲ್ ತರಗತಿಲಿ ಓದಿದ್ ಇನ್ನೂ ನೆನ್ಪಿತ್ತ್. ಅದಲ್ಲದೆ ನೀ ಕೊಟ್ಟ ನಮ್ಮ ಶಿವರಾಮ ಕಾರಂತರ ಪ್ರವಾಸ ಪುಸ್ತಕ 'ಅಬೂವಿಂದ ಬರಾಮಕ್ಕೆ' ಅದನ್ನ್ ಓದಿದ್ದೆ. ಆ ಮಹಾದ್ವಾರದ ಮೇಲ್‌ಬಾಗ ನೋಡೊಕುಂತಾದರೆ ಹೊಟ್ಟೆ ಮುಂದೆ ಮಾಡಿ ಬೆನ್ನ್ ಹಿಂದೆಗೆ ಬೊಗ್ಗಿಸಿ ಕುತ್ತಿಗೆ ಎತ್ತಿ ನೋಡಕಾದೆ. ಅದರ ದಾಟಿ ಹೋಕಾಕನ ನಾವೆಲ್ಲ ಒಂದು ಸಣ್ಣ ಜಂತ್ ಹುಳ ಹಾದ್ ಹೋಗುವಾಂಗೆ ಅನ್ಸಿದೆ. ಬಾಗಿಲ್ ಅಷ್ಟ್ ದೊಡ್ಡದ್. ಅದ್ ಅಲ್ಲಿಗೆ ಬರುವ ಪ್ರವಾಸಿಗರನೆಲ್ಲ ಹೆಮ್ಮೆಂದ ಸ್ವಾಗತಿಸಿದೆ. ನೆಲ ಮಟ್ಟಂದ ಅದರ ಎತ್ತರ 176ಅಡಿ. ಪ್ರವೇಶ ಭಾಗಂದ 134ಅಡಿ. ಇದ್ ನಮ್ಮ ದೇಶಲಿರುವ ಎಲ್ಲ ದ್ವಾರಗಳಿಗಿಂತ ದೊಡ್ಡದ್. ಇನ್ನ್ ಪ್ರಪಂಚದ ಮಹಾದ್ವಾರಗಳ್ಲಿ ಒಂದು ಗಡ. ಈ ಬಾಗ್‌ಲ್‌ನ ಎರ್ಡ್ ಕಡೆಗಳ್ಲಿ ಕುರಾನಿನ ಲಿಪಿ ಉಟ್ಟು. ಇದನ್ನ್ ದಾಟಿ ನಾವ್ ಕೋಟೆನ ಒಳ ಬಾಗಕ್ಕೆ ಹೋಕು. ಈ ಕೋಟೆನ ಅಕ್ಬರ ಯಾಕೆ ಕಟ್ಟಿಸಿತ್‌ಂತ ಎರ್ಡ್ ಕಾರಣ ಹೇಳಿವೆ.

ಇಲ್ಲಿ ಅಕ್ಬರನ ಪ್ರೀತಿಯ ಗುರು 'ಸೇಲಿಂಚಿಸ್ತಿ' ಅಲ್ಲಿತ್ತ್ ಗಡ. ಆ ಗುರುನ ಹತ್ತಿರನೆ ಇರುವ ಆಸೆ ಅವಂಗೆ. ಹಾಂಗಾಗಿ ಇದನ್ನ್ ಕಟ್ಟಿಸಿತ್‌ಂತೇಳುವೆ. ಮನ್ಸ್‌ಲಿ ದೊಡ್ಡ ಆಶೆ ಇತ್ತ್. ಕೈಲಿ ದೊಡ್ಡ ಸಾಮ್ರಾಜ್ಯದ ಸಂಪತ್ತ್ ಇತ್ತ್. ಅದಿಕಾರ ಹೇಂಗೂ ಇತ್ತ್. ಮತ್ತೇನ್ ಕಟ್ಟಿಸಿಕೆ.? ಆದರೆ ಅವನ ಗುರು ಅವಂಗಾಗಿ ಕಟ್ಟಿಸಿದ ಸುಂದರ ಮಂದಿರಕ್ಕೆ ಬಾಕೆ ಒಪ್ಪಿತೇಲೆ. ಹಾಂಗಾಗಿ ರಾಜದಾನಿನ ದಿಲ್ಲಿಂದ ಇಲ್ಲಿಗೆ ಬದಲಾಯ್ಸಿತೂಲೆ. ಇನ್ನೊಂದು ಕಾರಣ ಅಂದರೆ ಅಕ್ಬರನ ಹಿಂದೂ ರಾಣಿ ಜೋದ ಬಾಯಿಗಾಗಿ ಕಟ್ಟಿಸಿದ್ ಅಂತ. ಇಲ್ಲಿರುವ ಜೋದಾಬಾಯಿ ರಾಣಿ ಅರಮನೆ ಬಾರೀ ಪೊರ್ಲುಟ್ಟು. ಹಾಂಗೆನೇ ಪತ್ತೇಪುರ ಸಿಕ್ರಿಲಿ ಸಾಕಷ್ಟ್ ನೀರಿನ ಸೌಕರ್ಯ ಇಲ್ಲದಿದ್ದದೇ ಮತ್ತೊಂದು ಕಾರಣಂತೇಳಿವೆ.

ಏನೇ ಇರ್ಲಿ ಪತ್ತೇಪುರ ಸಿಕ್ರಿ ಮಾತ್ರ ನಾವ್ ನೋಡಿಯೇ ನೋಡಕಾದ ಒಂದು ಚಾರಿತ್ರಿಕ ಸ್ತಳ. ಇಲ್ಲಿರುವ ಜೋದಾಬಾಯಿ ಅರಮನೆ ಸೇಲಿಂಚಿಸ್ತಿಯ ಸ್ಮಾರಕ ತುಂಬಾ ಪೊರ್ಲುನ ನಿರ್ಮಾಣಗ.

ಬುಲನ್ ದ್ವಾರವಾಜನ ದಾಟಿ ಮುಂದೆ ಹೋಕನ ದೊಡ್ಡ ಜಾಲ್ ಸಿಕ್ಕಿದೆ. ಅದ್ ಎಷ್ಟ್ ದೊಡ್ಡದ್‌ಂತ ಹೇಳಿಯಾ? ಸುಮಾರ್ ಏಳೆಂಟ್ ಎಕ್ರೆ ವಿಸ್ತಾರಲಿ ಉಟ್ಟು. ಇದರ ಆವರಿಸಿ ಅಂಗಣದ ಸುತ್ತ ನಾಲ್ಕ್ ಮೂಲೆಗಳ್ಲಿ ಎತ್ತರದ ಕಂಬ ಇರುವ ಚಾವಡಿಗ ಉಟ್ಟು. ಅಂಗಣದ ನೆಲಕ್ಕೂ, ಚಾವಡಿಗೂ ಕೆಂಪು ಮರಳ್ ಕಲ್ಲ್‌ನ ಹಾಸಿಯೊಳೊ. ಅಂಗಣದ ನಡೂಲಿ ಬುಲನ್ ದ್ವಾರವಾಜಕ್ಕೆ ಎದ್‌ರ್‌ಲಿ ಸೆಲೀಮನ ಸಮಾದಿ ಉಟ್ಟು. ಈ ಜಾಗ ಎಲ್ಲ ಮುಸ್ಲಿಮ್ಮ್ ದಾರ್ಮಿಕರ ಸಂದರ್ಶನ ಸ್ತಳ ಗಡ. ಇವೆಲ್ಲ ಗಾತ್ರಲಿ ದೊಡ್ಡದಿದ್ದ್ ಅಮೃತ ಶಿಲೆಂದ ಕಟ್ಟಿದ್ದ್. ನಾನಾ ರೀತಿಯ ಸೂಕ್ಷ್ಮ ಚಿತ್ರ ಕಲೆಗಳ್‌ಂದ ಅಲಂಕರಿಸಿಯೊಳೊ. ಅಕ್ಬರನ ಗುರುಬಕ್ತಿ ಅಲ್ಲಿನ ಚಿತ್ರಕಲೆಲಿ ಕಂಡದೆ.

ಈ ಸಮಾದಿನ ಮೂಡು ದಿಕ್ಕಿಲಿ ಇಸ್ಲಾಂ ಖಾನನ ಸಮಾದಿ ಉಟ್ಟು. ಅಂವ ಸೆಲೀಮನ ಮಂಜ. ಅಕ್ಬರನ ಮಂಜ ಜಹಂಗೀರನ ಕಾಲಲಿ ಅಂವ ಬಂಗಾಳದ ಗವರ್ನರ್ ಆಗಿತ್ತ್‌ಗಡ. ಇದರ ಪಕ್ಕಲಿ ನೋಡಿಕೆ ಇರುವ ಮುಖ್ಯ ಸ್ತಳಗಂತೇಳಿರೆ ಬಾವೊಲಿ, ಕಾಜಾದರವಾಜ, ಶಿಸು ಸಮಾದಿ (Infants tomb) ರಂಗ ಮಹಲು, ಹಕೀಮನ ಮಿೂಯುವ ಮನೆ ಇದೆಲ್ಲ. ಇದರ್ನೆಲ್ಲ ನೋಡಿಕಂಡ್ ಸುತ್ತು ಹಾಕಿ ಮುಂದೆ ಹೋದರೆ ಸಣ್ಣ ಸಣ್ಣ ಅರಮನೆಗ, ಸಬಾಂಗಣ ಸಿಕ್ಕಿದೆ. ಅಕ್ಬರ ಚಕ್ರವರ್ತಿ ಎಲ್ಲಾ ದರ್ಮಗಳ ಸಾರ ಸಂಗ್ರಹಿಸಿ 'ದಿನ್-ಇಲಾಹಿ' ಎಂಬ ಹೊಸ ದರ್ಮ ಸ್ತಾಪನೆ ಮಾಡಿತ್ತ್. ಈ ದರ್ಮದ ಬಗ್ಗೆ ಚರ್ಚೆ ನಡ್ಸಿತಿದ್ದ ಕೊಠಡಿ, ರಜಪೂತ ರಾಣಿಯರ ಅರಮನೆಗ ಹೀಂಗೆ ಎಷ್ಟೊ ಸುಂದರ ಮಂದಿರಗಳ ನಾವ್ ಅಲ್ಲಿ ನೋಡಕ್. ರಾಣಿ ಜೋದಾಬಾಯಿಯ ಅರಮನೆ ಪೂರ್ತಿ ಕೆಂಪು ಕಲ್ಲಿಂದ ಕಟ್ಟಿದ್. ಬಾರೀ ಪೊರ್ಲುನ ಅರಮನೆ. ಜೋದಾಬಾಯಿಯ ಮಂಜನೇ ಸೆಲೀಮ ಯಾ ಜಹಂಗೀರ. ಅಕ್ಬರನ ನಂತರ ಇವನೇ ರಾಜ್ಯ ಆಳ್ದ್. ಜೋದಾಬಾಯಿಯ ಅರಮನೆಗೆ ತಾಗಿಕಂಡ್ ಪಡುವಕ್ಕೆ ಹೊರಬಾಗಿಲಿಗೆ ಎದುರಾಗಿ ಹಿಂದೂ ದೇವಸ್ತಾನ ಉಟ್ಟು. ಉತ್ತರಕ್ಕೆ ಹವಾ ಮಹಲ್ (Wind Palace). ಈಶಾನ್ಯ ದಿಕ್ಕಿಲಿ ಮರಿಯಮ್ಮ್ ಜಮನಿಯ ಅರಮನೆ. ಅವಳ್ ಸಹ ಅಕ್ಬರನ ರಾಣಿ. ಆ ಅರಮನೆನ ಹಿಂದೆ ಇರ್ದು ಸುವರ್ಣ ಮಹಲ್ (Golden House). ಈ ನಿರ್ಮಾಣನ ಅಮೂಲ್ಯ ವಸ್ತುಗಳ್‌ಂದ ಸಿಂಗರಿಸಿಯೊಳೊ. ಅದಕ್ಕೆ ಆ ಹೆಸ್ರ್. ಆದರೆ ಈಗ ಆ ಪೊರ್ಲುತನ ಇರುವ ಹಾಂಗೆ ಕಾಂಬೊದುಲೆ.

ಪತ್ತೇಪುರ ಸಿಕ್ರಿಲಿ ಪ್ರವಾಸಿಗರ ಮನ್ಸ್‌ನ ಹಿಡ್ದ್ ನಿಲ್ಸುವ ಪೊರ್ಲುನ ರಚನೆಂತೇಳಿರೆ ಪಂಚಕಿ ಮಹಲ್. ಇದ್ ಅದರ ಹೆಸ್ರೇ ಹೇಳುವಾಂಗೆ ಐದ್

ಉಪ್ಪರಿಗೆಗಳ ಮಹಲ್. ಈ ರಚನೆ ಸುತ್ತಮುತ್ತ ಎಲ್ಲಾ ಕಡೆ ತೆರ್ದ್‌ಕಂಡುಟ್ಟು. ಕೆಳಬಾಗದ ಉಪರಿಗೆಗಿಂತ ಎರಡನೆದ್ ಆಯಲಿ ಸಣ್ಣದ್. ಅದಕ್ಕಿಂತ ಮೂರ್ನೆದ್. ಹಾಂಗೆ ನಾಲ್ಕನೆದ್. ಕೊನೆ ಉಪ್ಪರಿಗೆ ಎಲ್ಲದಕ್ಕಿಂತ ಸಣ್ಣದ್. ರಚನೆಲಿ ಅವುಗಳೊಳಗೆ ಹೊಂದಾಣಿಕೆ ಉಟ್ಟು. ಮೊಗಲ್ ಬಾದಶಹ ಐದನೇ ಮಹಡಿಲಿ ಕುದ್ದ್ ಎದರ್ ಬಾಗದ ಅಂಗಣಲಿ ದಾಸಿಯರ್‍ನೊ ರಾಣಿಯರ್‍ನೊ ಕರ್ದ್ ಚದುರಂಗ ಆಡಿಸ್ತಿತ್ತ್ ಗಡ. ಆ ಪಂಚ ಮಹಲಿನ ಕಂಬಗ ಬಾರೀ ಪೊರ್ಲುದು. ಆ ಮಹಡಿಗೆ ಆದಾರ ಆಗಿರುದು ಕಂಬಗ ಮಾತ್ರ.

ಈ ಪಂಚ ಮಹಲಿನ ಹತ್ರ ಸಣ್ಣ ಕೊಳ ಒಂದುಟ್ಟು. ಈಶಾನ್ಯಲಿ ದಿವಾನಿ–ಇ–ಕಾಸ್ ಎಂಬ ಮಹಲ್ ಕಾಣಕ್. ಇದೊಂದು ವಿಶೇಷ ರಚನೆ ಬೀರ್‌ಬಲನ ಮನೆ ಇರ್ದು ಅಲ್ಲಿನೆ. ಇದ್‌ಕೂಡ ಕೆಂಪು ಕಲ್ಲಿನ ನಿರ್ಮಾಣ. ಇದ್ ನೋಡಕಾದ ಕಟ್ಟಡ. ಪತ್ತೇಪುರ ಸಿಕ್ರಿಲಿ ನೋಡಿಕಿರುವ ಬೇರೆ ವಿಶೇಷಂತೇಳಿರೆ ಲಿಂಕಮಿಚಾಲಿ, ತುರ್ಕಿಸುಲ್ತಾನನ ಮನೆ, ಖಾನ್ ಮಹಲ್, ನಗೀನಾ ಮಸೀದಿ, ಹೋಲೆ ಪೋಲ್, ಸಂಹಿನ್–ಪೈಜಿಯ ಮನೆಗ, ದಿವಾನಿ–ಇ–ಆಮ್, ಅಕ್ಬರಾಬಾದು ಇತ್ಯಾದಿ ಇದೆಲ್ಲ ಬೇಗ ಬೇಗ ನೋಡಿಕಂಡ್ ಕೋಟೆನ ಸುತ್ತ ವಿಶಾಲಾಗಿ ಹರ್ಡಿರುವ ಪ್ರದೇಶದ ಸೌಂದರ್ಯನ ಕಣ್ಣ್‌ತುಂಬಿಸಿ ಆಗ್ರಾಕ್ಕೆ ಹಿಂತಿರುಗಿ ಬಾಕಾಕನ ಹೊತ್ತು ಪಡುದಿಕ್ಕಿಗೆ ಮೋರೆ ಮಾಡಿತ್ತ್. ನಾವ್ ಸುತ್ತಿ ಸುತ್ತಿ ಸುಸ್ತಾಗಿದ್ದೊ. ಹೊಟ್ಟೆ ಹಸಿದಿತ್ತ್.

ನಾವ್ ಇಳ್ಕಂಡಿದ್ದ ಹೋಟೇಲ್‌ಲಿ ಅಂಬ್ರೆಪುಲಿ ಊಟ ಮುಗ್ಸಿ ಆಗ್ರಾ ಕೋಟೆ ಮತ್ತು ತಾಜಾಮಹಲ್ ನೋಡಿಕೆ ಹೋದೊ. ಅಲ್ಲೆ ದಾರಿಲಿರುವ 'ಇತ್–ಮತ್ ಉದೌಲನ' ಮುಸೋಲಿಯಮ್, ಸಿಕಂದರ ಮತ್ತು ಅಕ್ಬರನ ಗೋರಿಗಳ ನೋಡಿಕಂಡ್ ಮುಂದೆ ಹೋದೊ.

ಆಗ್ರ ಕೋಟೆ ಇರ್ದು ಅರ್ದ ವೃತ್ತಾಕಾರಲಿ. ಅದ್ ಯಮುನಾ ಯಾ ಜಮುನಾ ನದಿನ ಬಲ ಯಾ ಪಶ್ಚಿಮ ದಂಡೆಲಿ. ಈ ಕೋಟೆನ ಕಟ್ಟಿದ್ ಕೆಂಪು ಕಲ್ಲ್‌ಂದ. ತುಂಬಾ ವಿಶಾಲಾಗುಟ್ಟು. ಕಟ್ಟಿದಂವ ಅಕ್ಬರ ಚಕ್ರವರ್ತಿ. ಅದಕ್ಕಿಂತ ಹಿಂದೆ ಇವನ ಅಪ್ಪ ಹುಮಾಯೂನನ ಕಾಲಲಿ ಒಂದು ಹಳೆ ಕೋಟೆ ಅಲ್ಲಿತ್ತ್. ಆಗ ಅದ್ಕೆ ಬಾದಲ್ ಗ್ರಹ ಅಂತ ಹೆಸ್ರ್. ಅವನ ಆಡಳಿತದ ಸುರೂನ ಹತ್ತ್ ವರ್ಷಗಳ ಕಾಲಲಿ ದಿಲ್ಲಿಯ ಬದಲ್ ಇದನ್ನೆ ರಾಜದಾನಿಯಾಗಿ ಮಾಡಿ ಆಳ್‌ತಿತ್ತ್. ಅಕ್ಬರ ಆಗ್ರಾಕ್ಕೆ ಸುರೂ ಬಂದದ್ 1558ರಲ್ಲಿ. ಅಂವ ಬಾದಲ್ ಗ್ರಹದ ಪಕ್ಕಲಿ ಹೊಸಕೋಟೆ ಕಟ್ಟಿಸ್ತ್. ಅದೇ ಆಗ್ರ ಕೋಟೆ. ಈ ಕೋಟೆ ಎರ್ಡ್ ಪೌಳಿಗಳ್‌ಂದ ಸುತ್ತು ವರ್ದುಟು. ಅದರ ಹೊರ ಪೌಳಿಸುಮಾರ್ ನಲುವತ್ತ್

ಅಡಿ ಎತ್ತರ ಆದರೆ ಒಳಗಿನ ಪೌಳಿ ಎಪ್ಪತ್ತು ಅಡಿ ಎತ್ತರ ಉಟ್ಟು. ಹೊರ ಪೌಳಿಯ ಸುತ್ತ ಶಹಾಬುರುಜು ಮತ್ತು ಜಲದ್ವಾರ ಎಂಬ ಎರ್ಡ್ ಬುರುಜುಗಳ ವ್ಯವಸ್ತೆ ಉಟ್ಟು. ಇನ್ನ್ ಎರ್ಡ್ ಕಡೆ ಬುಟ್ಟು ಉಳ್ದಕಡೆ ಸುಮಾರ್ ಮೂವತ್ತೈದ್ ಅಡಿ ಅಗಲ ಎಪ್ಪತ್ತೈದು ಅಡಿ ಆಳದ ನೀರಿನ ಕಂದಕ ಉಟ್ಟು. ಈ ಕೋಟೆಗೆ ಎತ್ತರಲಿ ದಿಲ್ಲಿ ದ್ವಾರವಾಜಾ, ದಕ್ಷಿಣಲಿ ಅಮರಸಿಂಹ ದ್ವಾರ, ಸಾಮನ್ ಬುರುಜಿಗೆ ಹತ್ರಲಿ ಮೂಡಕ್ಕೆ ಜಲದ್ವಾರ ಮತ್ತು ಈಶಾನ್ಯಕ್ಕೆ ಷಹಾ ಬುರುಜು ಹೀಂಗೆ ನಾಲ್ಕ್ ಪ್ರವೇಶ ದ್ವಾರಗ ಉಟ್ಟು. ಈಗ ಇವುಗಳ ಪೈಕಿ ಅಮರಸಿಂಗ ದ್ವಾರ ಮಾತ್ರ ಎಲ್ಲವುಕೆ ಆಗಿ ತೆರ್ದ್ ಇಸಿವೆ.

ಕೋಟೆನ ಒಂದು ಮಗ್ಗುಲಿಗೆ ಯಮುನಾ ನದಿ ಹರಿವ ಶಬ್ದ ಇನ್ನೊಂದು ಕಡೆಗೆ ಪೇಟೆನ ಗದ್ದಲ ಕೇಳ್ದೆ. ಅಮರಸಿಂಗ ದ್ವಾರ ಹಾದ್ ಕೋಟೆನ ಒಳಗೆ ಹೋದರೆ ಹೊರಗಿನ ರಾಜ್ಯದ ಸಂಪರ್ಕನೆ ಇರ್ದುಲೆ. ಕೋಟೆಯ ಒಳಗಡೆ ಹಲವಾರ್ ಚಾವಡಿಗ, ಮುಖಮಂಟಪಗ, ಅರಮನೆಗ, ಇತರ ಕಟ್ಟಡಗ ಉಟ್ಟು. ಇಲ್ಲಿರುವ ಒಂದು ಸಬಾಂಗಣ ದಿಲ್ಲಿಲಿರುವ ಕೆಂಪು ಕೋಟೆನ ದಿವಾನಿ ಆಮ್ ಸಬಾಂಗಣದಷ್ಟೆ ದೊಡ್ಡದ್. ಇಲ್ಲಿರುದೆಲ್ಲ ಚಂದ್ರಕಾಂತ ಶಿಲೆಯ ರಚನೆಗ. ಕೆಲವು ಕಡೆ ಅಂತಪುರಗ, ವಿಶಿಷ್ಟ ರೀತಿಯ ಮಿಂಯುವ ಕೋಣೆಗ ಉಟ್ಟು ಮಿಂಯುವ ಕೋಣೆಗಳ ಗೋಡೆಗಳ ಬಣ್ಣ ಬಣ್ಣದ ಕುಪ್ಪಿ ಚೂರ್‌ಗಳ್‌ಂದ ಚಿತ್ರ ವಿಚಿತ್ರಾಗಿ ಅಲಂಕರಿಸಿಯೊಳೊ. ಈ ರೀತಿನ ಅಲಂಕಾರ ಯಾವ ಅಬಿರುಚಿಗಾಗಿಂತ ಊಹಿಸೊಕಷ್ಟೆ.

ಮೊಗಲ್ ಚಕ್ರವರ್ತಿ ಅಕ್ಬರನ ಮಂಙ ಜಹಂಗೀರ. ಜಹಂಗೀರನ ಮಂಙ ಷಹಜಹಾನ. ಇವನ ಮಂಙನೇ ಔರಂಗಜೇಬ. ಇಂವ ಮೊಗಲ್ ಸಾಮ್ರಾಜ್ಯದ ಕಡೆ ಚಕ್ರವರ್ತಿ. ಅವನ ನಂತರ ಸಾಮ್ರಾಜ್ಯ ಒಡ್ದ್ ಹೋಗಿ ಅಲ್ಲಲ್ಲಿ ಹೊಸ ರಾಜ್ಯಗ ಹುಟ್ಟಿಕಂಡತ್. ಔರಂಗಜೇಬ ಅಣ್ಣ ತಮ್ಮಂದಿರನೆಲ್ಲ ಕೊಂದ್ ಪಟ್ಟಕ್ಕೆ ಬಂದವ. ಅಂವ ಸರಳ ಜೀವನ ನಡ್ಸಿರೂ ಕ್ರೂರಿನೂ, ಪರಮತದ್ವೇಶಿಯೂ ಆಗಿತ್ತ್. ಅವನ ಕಾಲಲಿ ಅಯೋದ್ಯೆ, ಮಥುರಾ, ಕಾಶಿ ದೇವಸ್ತಾನಗಳ ಒಡ್ದ್ ಹಾಳ್ ಮಾಡಿ ಮಸೀದಿ ಕಟ್ಟಿಸಿತ್. ಅಯೋದ್ಯೆನ ಬಾಬರನ ಸೇನಾ ಪತಿ ಹಿಂದೆನೇ ಹಾಳ್ ಮಾಡಿತ್ತ್. ಔರಂಗಜೇಬ ತನ್ನ ಸ್ವಂತ ಅಪ್ಪ ಷಹಜಹಾನನ ಆಗ್ರ ಕೋಟೆಲಿ ಕೂಡಿ ಹಾಕಿತ್ತ್. ಅಲ್ಲಿನೆ ಅಂವ ತನ್ನ ಕೊನೆ ದಿನಗಳ ಕಳ್ದದ್. ಷಹಜಹಾನ ಅಲ್ಲಿ ಬಂದಿ ಆಗಿರಿಕಾಕನ ಕುದ್ರ್‌ತಿದ್ದ ಮೊಗಸಾಲೆ ಕೋಟೆನ ಎತ್ತರ ಬಾಗಲಿ ಈಗಲೂ ನೋಡಕ್. ಅಲ್ಲಿಂದ ತಾಜಾಮಹಲ್ ದೂರಲಿ ಲಾಯ್ಕಾಗಿ ಕಂಡದೆ. ತಾಜ್‌ಮಹಲಿಗೆ ತಾಗಿ ಹರಿವ ಯಮುನಾ ನದಿನೂ

ಕಂಡದೆ.ನಾವ್ ತಾಜ್‌ಮಹಲಿನ ದೂರದರ್ಶನ ಸುರೂಗೆ ಅಲ್ಲಿಂದಲೇ ಆತ್.

ಮಾಲಿನಿ, ಈ ಔರಂಗಜೇಬ ಉಟ್ಟಲ್ಲ ಇಂವ ಒಬ್ಬ ಧರ್ಮಾಂಧ, ಪರಮತ ದ್ವೇಷಿ. ಇಂವ ಹಿಂದೂಗಳಿಗೆ ಅನ್ಯಾಯ ಮಾಡ್ದ್ ಸುಳ್ಳಲ್ಲಂತ ಕಂಡದೆ. ಮುಸ್ಲಿಂ ಚರಿತ್ರಕಾರರೆ ಈ ಬಗ್ಗೆ ಬರ್‍ದ್ದೊಳೊ. ಕೆಲವು ಮುಸ್ಲಿಮ್ ಅರಸರ್‌ಗ ತಮ್ಮ ಸೈನಿಕರಿಗೆ ಸರಿಯಾಗಿ ಸಂಬಳ ಕೊಡ್ತ್ತಲ್ಲೆ. ಲೂಟಿ ಮಾಡಿ ಸಿಕ್ಕಿದ ಸಂಪತ್ತ್‌ನ ಅವು ಹಂಚಿಕಣ್‌ತಿದ್ದೊ. ಹಿಂದೂ ದೇವಸ್ತಾನಗಳ್ಲಿ ಸಂಪತ್ತಿರುದು ಅವ್ಕೆ ಗೊತ್ತಿತ್ತ್. ಅದ್ಕೆ ದೇವಸ್ತಾನಕ್ಕೆ ದಾಳಿ ಮಾಡ್ತಿದ್ದೊ ; ಮೂರ್ತಿ ಒಡ್ದ್ ಹಾಕ್‌ತಿದ್ದೊ, ಲೂಟಿನೂ ಮಾಡ್ತಿದ್ದೊ. ಇದರ್ದಂದ ಅವ್ಕೆ ಆಗ್‌ತಿದ್ದ ಲಾಬ ಅಂದರೆ ಸಂಪತ್ತಿನ ಗಳಿಕೆ ಮತ್ತು ಕಾಫೀರರ ಮಂದಿರ ಹಾಗೂ ದರ್ಮನ ನಾಶ ಮಾಡ್ದೊಂತೇಳುವ ಸಮಾದಾನ. ಇದರ್‌ಂದ ಮೌಲವಿ ಮತ್ತು ಮುಸ್ಲಿಮ್ ಸಮಾಜಂದ ಶಹಬಾಸ್‌ಗಿರಿ ಸಿಕ್ಕ್‌ತಿತ್ತ್. ಔರಂಗಜೇಬ ಕೆಲವು ಮುಸ್ಲಿಮ್ ಅರಸರ ಹಾಂಗೆ ಹಿಂದುಗಳ ಮೇಲೆ ಮಾತ್ರ ಹೆಚ್ಚಿಗೆ ತೆರಿಗೆ ಹೇರಿತ್ತ್. ಹೀಂಗೆ ಅಂವ ಹಿಂದೂಗಳಿಗೆ ಅನ್ಯಾಯ ಮಾಡುವುದರೊಟ್ಟಿಗೆ ಹಿಂದೂ ದೇವಾಲಯಗಳಿಗೆ ದಾನನೂ ಮಾಡ್ತಿದ್ದ ಉಲ್ಲೇಖ ಚರಿತ್ರೆಲಿ ಉಟ್ಟು. ಒರಿಸ್ಸಾದ ಪುರಿ ಜಗನ್ನಾಥ ಮಂದಿರಕೆ ಇನ್ನೂರು ಹಳ್ಳಿಗಳ್ನ ಇನಾಮಗಿ ಕೊಟ್ಟಿತ್ತ್. ಹಾಂಗೆ ಇನ್ನು ಕೆಲವು ಕಡೆನೂ ಅಂವ ದಾನ ಕೊಟ್ಟ ಬಗ್ಗೆ ಚರಿತ್ರೆಲಿ ದಾಕಲಾಗುಟು. ಆದರೆ ಇದರ ಹಿಂದೆ ರಾಜಕಾರಣ ಇತ್ತ್‌ಂತ ಹೇಳಿವೆ. ಇದರ್‌ಂದ ಹಿಂದೂಗಳಿಗೆ ಸಂತೋಷವಾಗಿ ತಪ್ಪು ತಿಳುವಳಿಕೆ ದೂರಾಗಿ ತಮ್ಮ ಅರಸೊತ್ತಿಗೆಗೆ ತೊಂದರೆ ಆಗದಿರಲಿಂತ ಮಾಡ್ವ ಉಪಾಯ ಆಗಿತ್ತ್. ನಮ್ಮ ಮೈಸೂರಿನ ಟಿಪ್ಪು ಸುಲ್ತಾನನೂ ಇದೇ ದಾರಿ ಅನುಸರಿಸಿದ್‌ಂತ ಕಂಡದೆ.

ಇನ್ನೊಂದು ಸಂಗತಿ ನಿಂಗೆ ಗೊತ್ತಿರಿಕೂ ಸಾಕ್, ನಮ್ಮ ದೇಶಲಿ ಮುಸ್ಲಿಮರ್ ಮಾತ್ರ ದೇವಾಲಯ ಹಾಳ್ ಮಾಡ್ದ್ ಅಲ್ಲ. ಕಾಶ್ಮೀರದ ಹರ್ಷದೇವ ಎಂಬವ ದೇವತಾಮೂರ್ತಿಗಳ ಕದ್ದ್ ಕರ್‍ಗಿಸಿ ಮಾರ್‍ತಿತ್ತ್ ಗಡ. ಮಹಾರಾಷ್ಟ್ರದ ಪೇಶ್ವೆಯರ್ ಶೃಂಗೇರಿ ಮೇಲೆ ದಾಳಿ ಮಾಡಿ ಲೂಟಿ ಮಾಡ್ದ್ ಚಾರಿತ್ರಿಕ ಸತ್ಯಂತೇಳುವೆ. ಇನ್ನ್ ವೈಷ್ಣವ ಅರಸರ್ ಶೈವ ದೇವಾಲಯಗಳ್ನ, ಶೈವ ಅರಸರ್ ವೈಷ್ಣವ ದೇವಾಲಯಗಳ್ನ ಹಾಂಗೆನೇ ಹಿಂದೂ ಅರಸರ್ ಬೌದ್ಧ ಮತ್ತು ಜೈನ ದೇವಾಲಯಗಳ್ನ ಲೂಟಿ ಮಾಡ್ದ್ ಸಹ ಉಟ್ಟು. ಅಂದರೆ ಒಟ್ಟಾಗಿ ರಾಜರಿಗೆ ಧರ್ಮಕ್ಕಿಂತ ತಮ್ಮ ರಾಜ್ಯ ಬಲಪಡಿಸುವುದೇ ಮುಖ್ಯ ಆಗಿತ್ತ್. ಮತಧರ್ಮಗಳೊಳಗಿನ ಸೇಡ್ ಕೂಡಾ ಇತ್ತ್.

ಈಗ ಮತ್ತೆ ಔರಂಗಜೇಬನ ವಿಚಾರಕ್ಕೆ ಬಂದರೆ ಅವನ ಒಡಹುಟ್ಟಿದವರ್ಲಿ

ದಾರಾಶುಕಾಂತೇಳಂವ ಅವನ ದೊಡ್ಡಣ್ಣ. ದಾರಾಶುಕ ಮಹಾವಿದ್ವಾಂಸ ಆಗಿತ್ತ್. ಅಂವ ಹಿಂದೂ ತತ್ವಜ್ಞಾನನ ತುಲನಾತ್ಮಕ ಆಗಿ ಅಬ್ಯಾಸ ಮಾಡಿ ಉಪನಿಷತ್ ಪುರಾಣಗಳ್ನ ಪಾರಸೀ ಬಾಸೆಗೆ ಬಾಷಾಂತರ ಮಾಡಿಸಿತ್ತ್ ಗಡ. ಅಂವ ನಿಜ ದೃಷ್ಟಿಲಿ ಪರಮತ ಸಹಿಷ್ಣು ಆಗಿತ್ತ್. ದಾರಾಶುಕಾ ದಿಲ್ಲಿ ಸಿಂಹಾಸನದ ಹಕ್ಕುದಾರನೂ ಆಗಿತ್ತ್. ಗೋಷಣೆನೂ ಮಾಡಿತ್ತ್. ಆದರೆ ಅಂವ ಧರ್ಮಾಂದ ಔರಂಗಜೇಬನ ಕುತಂತ್ರಕ್ಕೆ ಬಲಿಯಾಗಿ ಕೊಲೆ ಆತ್. ಇದ್ ದೇಶದ ಮಟ್ಟಿಗೆ ದುರಂತ ಅಂತ ಹೇಳಕ್.

ನಾವ್ ಆಗ್ರಾ ಕೋಟೆನ ಒಳಬಾಗಲಿರುವ ಹಿಂದೂ ಕಲಾ ಪದ್ಧತಿಲಿ ಕಟ್ಟಿದ ಬವ್ಯ ನಿರ್ಮಾಣ ಜಹಂಗೀರ್ ಮಹಲ್, ಆಮೇಲೆ ಖಾಸ್ ಮಹಲ್ (Privotee palace), ಅಂಗೂರಿ ಬಾಗ್, (Grape garden), ಶಿಷ್ ಮಹಲ್ (Place of Mirrors), ದಿವಾನ–ಇ–ಖಾಸ್, ಮೀನಾ ಮಸೀದಿ, ಹಮಾಮ್ ಶಾಹಿ (Kings Bath), ತ್ರೋನ್ ಟೆರೇಸ್, ಮತ್ಸ್ಯ ಭವನ, ದಿವಾನ್–ಇ, ಆಮ್, ನಾಗಿನ ಮಸೀದಿ, ಮೋತ್ತಿ ಮಸೀದಿ, ಇವನ್ನೆಲ್ಲಾ ನೋಡಿಕಂಡ್ ತಾಜ್ ಕಡೆಗೆ ಬಸ್ಸ್ ಹತ್ತಿದೊ.

ಮೇಲೆ ಹೇಳ್ದ ಕಟ್ಟಡಗಳೆಲ್ಲ ಅಮೃತ ಶಿಲೆಂದಲೇ ಕಟ್ಟಿದ್. ಅದರ ರಚನೆ ವಿನ್ಯಾಸ ಎಲ್ಲ ಅದರದೇ ಆದ ವಿಶಿಷ್ಟತೆಂದ ಕೂಡಿದ್ದ್ ನೋಡಕಾದ ಕಟ್ಟಡಗ.

ಆಗ್ರ ಕೋಟೆಂದ ತಾಜ್‌ಮಹಲಿಗೆ ಹೆಚ್ಚ್ ಕಡಿಮೆ ಒಂದು ಮೈಲ್ ದೂರ . ನಾವ್ ನೇರ ದಾರಿಲಿ ಹೋಗದೆ ದಯಾಲ್ಬಾಗ್‌ಗೆ ಹೋಗಿ ಅಲ್ಲಿ ತುಂಬಾ ಸಮಯಂದ ನಿರ್ಮಾಣ ಹಂತಲಿರುವ ಕಟ್ಟಡನ ನೋಡಿಕಂಡ್ ತಾಜ್‌ಮಹಲಿಗೆ ಹೋದೊ. ಆಗ್ರಾ ನಗರದ ಈ ಪ್ರದೇಶ ಇತರ ಕಡೆಗಿಂತ ಅಚ್ಚುಕಟ್ಟಾಗುಟ್ಟು.

ಉತ್ತರ ಭಾರತಲಿ 'ರಾಧಾ ಸ್ವಾಮಿ' ಎಂಬ ಒಂದು ಧಾರ್ಮಿಕ ಪಂಗಡ ಉಟ್ಟು. ಇದರ ಸ್ತಾಪಕ 'ಸ್ವಾಮಿ ಶಿವ ದಯಾಲ್‌ಜಿ'. ಸ್ತಾಪನೆ ಆದ್ ಕ್ರಿ.ಶ. 1861ರ್ಲಿ. ಈ ಪಂಥದ ಹಿಂಬಾಲಕರ್ ದೇಶ ವಿದೇಶಗಲ್ಲಿ ಒಳಗಡ. ಇಲ್ಲಿನ ಒಂದು ಮುಖ್ಯ ಆಕರ್ಷಣೆಂತೇಳಿರೆ 'ಸತ್ ಗುರು ಮಹರಾಜ್'ನ ಸಮಾಧಿ. ಇದ್ ಕ್ರಿ.ಶ. 1951ರ್ಲಿ ಕಟ್ಟಿಕೆ ಸುರು ಆದರೂ ಕೆಲಸ ನಿದಾನಗತಿಲಿ ಸಾಗ್ತಾ ಉಟ್ಟು. ಇದರ ರಚನೆ ತಾಜ್‌ಮಹಲಿನ ಹಾಂಗೆ ಸೂಕ್ಷ್ಮತೆಂದ ಕೂಡಿರದಿದ್ದರೂ ಇಲ್ಲಿಯ ಕೆತ್ತನೆಗ, ರಚನಾ ಕೌಶಲ ಇನ್ನೊಂದು ರೀತಿಲಿ ಅಪೂರ್ವ.

ನಾವ್ ತಾಜ್‌ಮಹಲ್ ಸೇರಿಕಾಕನ ಸೂರ್ಯ ಕಂತಿ ಅವನ ಸ್ತಾನನ ಚಂದ್ರ ಆಕ್ರಮಿಸಿ ಹಾಲ್‌ನಂತ ಬೆಳದಿಂಗಳ ಚೆಲ್ಲಿತ್ತ್. ಬೆಳದಿಂಗಳ ಬೆಳ್ಕ್‌ಲಿ ತಾಜ್‌ಮಹಲ್‌ನ ಸೌಂದರ್ಯ ಇಮ್ಮಡಿಸಿದೆ ಗಡ. ಅದ್ಕೆ ನಾವ್ ಆ ಹೊತ್ತಿಗೆ

ಹೋದ್. ಜಗತ್ತಿನ ಸುಂದರ ನಿರ್ಮಾಣಗಳ್ಲಿ ಒಂದಾದ ತಾಜ್‌ಮಹಲ್‌ನ ನೋಡುವ ಕುತೂಹಲ ಮೇರೆ ಮೀರಿತ್ತ್.

ತಾಜ್‌ಮಹಲ್‌ನ ಕಟ್ಟಿಸಿದ್ ಶಹಜಹಾನ. ಅಂವ ಅಕ್ಬರನ ಪುಳ್ಳಿ, ಔರಂಗಜೇಬನ ಅಪ್ಪ. ಅಂವನ ಪ್ರೀತಿನ ರಾಣಿ ನೂರ್‌ಜಹಾನಳ ನೆನ್ಪ್‌ನ ಶಾಶ್ವತಗೊಳ್ಸಿಕಾಗಿ ಇದರ ಕಟ್ಟಿಸಿತ್‌ಂತ ನಿಂಗೂ ಗೊತ್ತು. ನೂರ್‌ಜಹಾನ್ ಅಂದ್ರೆ ಲೋಕ ಸುಂದರಿಂತ ಅರ್ತ. ಸತ್ಯಕ್ಕೂ ಅವಳ್ ನಿನ್ನ ಹಾಂಗೆ ಪೊರ್ಲುನ ಗೂಡೆ ಆಗಿತ್ತ್ ಗಡ. ತಾಜ್‌ನ ನೋಡಿಕಾಕನ ನಾವ್ಗೆ ಅವರಿಬ್ಬರ ನೆಂಪು ಆದೆ.

ಶಹಜಹಾನ ತಾಜ್‌ಮಹಲ್‌ನ ಕಟ್ಟಿಸಿದ್ ನೂರ್‌ಜಹಾನ್ ತೀರಿ ಹೋದ ಮೇಲೆ. ಅವ್ಳ್ ತೀರಿ ಹೋಕನ ಅಂವ ದಂಡಯಾತ್ರೆಗೆ ಹೋಗಿತ್ತ್ ಗಡ. ಅಲ್ಲಿ ಹೋದಲೆಲ್ಲ ಗೆದ್ದ್ 1631ಲ್ಲಿ ಆಗ್ರಕ್ಕೆ ಮರಳಿ ಬಾತ್. ಮರಳಿ ಬಂದೊಡನೆ ಎಲ್ಲಾ ಕಡೆಗಳ್‌ಂದ ಶಿಲ್ಪಿಗಳ ಬರಮಾಡಿಕಂಡತ್. ಅವನ ರಾಣಿನ ಕೊನೆ ಬೇಡಿಕೆನ ಪೂರೈಸಿಕಾಗಿ ಬಾರೀ ಶ್ರಮ ಮತ್ತು ಸಂಪತ್ತ್‌ನ ಕರ್ಚ್ ಮಾಡ್ತ್. ದೇಶ ವಿದೇಶಗಳ್‌ಂದ ಒಳ್ಳೆ ಕೆಲ್ಸ ಗಾರರ್ನ ಬಾಕೆ ಮಾಡ್ತ್. ದಿನಂಪ್ರತಿ ಅಂತ ಸಾವಿರ ಕೆಲ್ಸಗಾರರ್ ಕೆಲ್ಸ ಮಾಡ್‌ತಿದ್ದೊ. ಪರ್ಷಿಯಾ, ಅರೇಬಿಯ, ಟರ್ಕಿ ದೇಶಗಳ್‌ಂದ ಕೆಲ್ಸಗಾರರ್ ಬಂದಿದ್ದೊ. ಉತ್ತಮ ವರ್ಗದ ಬಿಳಿ ಅಮೃತ ಶಿಲೆನ ರಾಜಸ್ತಾನದ ಜಯಪುರದ ಮಕ್ರಾನಾ ಮತ್ತು ರೈವಾಲಾಂದ ಬೇಕಾದಷ್ಟ್ ತರ್ಸಿಕಂಡಿತ್ತ್. ಕೆಂಪು ಕಲ್ಲ್‌ನ ಪತ್ತೇಪುರ ಸಿಕ್ರಿಂದ ತಂದಿತ್ತ್. ಬೆಲೆ ಬಾಳುವ ನಾನಾ ಬಣ್ಣದ ಕಲ್ಲ್ ಹರಳ್‌ಗಳ್ನ ದೇಶದೊಳಗಿಂದ ಮತ್ತು ಜಗತ್ತಿನ ಬೇರೆ ಬೇರೆ ಕಡೆಗಳ್‌ಂದ ತರ್ಸಿತ್ತ್.

ತಾಜ್‌ಮಹಲ್ ಕಟ್ಟುವ ಕೆಲ್ಸ 1631ಲ್ಲಿ ಸುರುಮಾಡಿ 1648ಕ್ಕೆ ಮುಗ್ಸಿತ್‌ಗಡ. ಈ ಅವದಿಲಿ ಇಪ್ಪತ್ತು ಸಾವಿರ ಕೆಲಸಗಾರರ ಶ್ರಮ ಇದಕ್ಕೆ ತಾಗಿಟು. ಆರು ಕೋಟಿಗೂ ಮೀರಿ ಆ ಕಾಲಲಿ ಹಣ ಕರ್ಚಾಗುಟ್ಟುಂತ ಹೇಳಿವೆ. ವರ್ಷಕ್ಕೆ ಲಕ್ಷಾಂತರ ರುಪಾಯಿ ತೆರಿಗೆ ಕೊಡುವ ಮೂವತ್ತು ಗ್ರಾಮಗಳ ಉತ್ಪತ್ತಿನ ಇದಕ್ಕೆ ಉಪಯೋಗ್ಸಿಟುಂತ ಹೇಳಿವೆ. ಮೊಗಲ ಸಾಮ್ರಾಜ್ಯ ವಿಶಾಲ ಆಗಿತ್ತ್. ಸಾಕಷ್ಟ್ ಸಂಪತ್ತೂ ಇತ್ತ್. ಆದ್ದರ್‌ಂದ ಬಲಾತ್ಕಾರದ ಶ್ರಮ ಇಲ್ಲಿ ನಡ್ದಿರಿಕಿಲ್ಲೆಂತ ಅಭಿಪ್ರಾಯ.

ಸ್ಲೀಮನ್ಸ್ ಎಂಬ ವಿದೇಶಿ ಪ್ರವಾಸಿ ತಾಜ್‌ಮಹಲ್ಲ್ ಬಗ್ಗೆ ಹೀಂಗೆ ಬರ್ದುಟು. ಈ ತಾಜ್‌ಮಹಲ್‌ನ ನೋಡ್ದ ಮೇಲೆ ನಾನ್ ನನ್ನ ಹೆಣ್ಣ್‌ನ ಹೀಂಗೆ ಕೇಳ್ದೆ. "ಈ ನಿರ್ಮಾಣದ ಬಗ್ಗೆ ನಿನ್ನ ಅಬಿಪ್ರಾಯ ಏನ್‌ಂತ?" ನನ್ನ ಪ್ರಶ್ನೆಗೆ ಅವಳ ಉತ್ತರ ಹೀಂಗಿತ್ತ್. 'ನನ್ನ ಗೋರಿ ಮೇಲೆ ಇಂತದೊಂದು ಕಟ್ಟುವ ಹಾಂಗಿದ್ದರೆ ನಾಳೆನೇ ನಾನ್ ಸಾಯಕೆ ತಯಾರ್‌ಂತ'.

ದೇಶ ವಿದೇಶಗಳ್‌ಂದ ದಿನನಿತ್ಯನೂ ಸಾವಿರಾರ್ ಪ್ರವಾಸಿಗರ್‌ನ ಸೆಳೆಯುವ ತಾಜ್‌ಮಹಲ್ ನಮ್ಮ ದೇಶದಲಿರುದು ನಮಗೊಂದು ಹೆಮ್ಮೆಯ ವಿಚಾರನೋ? ತೀರ್ಮಾನ ಅವರವರ ವಿಮರ್ಶೆಗೆ ಬುಟ್ಟದ್. ಇದನ್ನ ನೋಡ್ವ ಯಾರೇ ಆದ್ರೂ ಅವರ ಕೆತ್ತನೆ ಕೆಲ್ಸದ ಸೂಕ್ಷ್ಮತೆಗೆ ಬೆರ್‍ಗಾಗಿ, ಸುಂದರತೆಗೆ ಮರ್‍ಳಾಗಿ ಅಲ್ಲಿಂದ ತಿರ್‍ಗಿ ಬಾಕಾಕನ ಅವನ ಎದೆ ತುಂಬದಿರಿಕಿಲೆ ಇದರ ನಿರ್ಮಾಣದ ಬಗ್ಗೆ ಶಿವರಾಮ ಕಾರಂತರ್ ಹೇಳುವ ಹಾಂಗೆ ಪಟ್ಟ ಶ್ರಮ ಕಳ್ಕಂಡ ಹಣಕ್ಕಿಂತ ನಿರ್ಮಾಣಕ್ಕೆ ಕಾರಣ ಆದ ಅವರ ಪ್ರೇಮಮಯ ಕನ್ಸ್ ನಿಜಕ್ಕೂ ಹೆಚ್ಚ್‌ಂತೇಳಕ್. ಆದರೂ ಉತ್ತರ ಭಾರತದ ಉದ್ದಗಲಕ್ಕೆ ಹರಡಿರುವ ಕೋಟೆ, ಕೊತ್ತಲಿ, ಗೋರಿ, ಮಸೀದಿ, ಕಾಂಬಕಾಕನ ನನ್ನ ಕಾಡ್‌ದು ಅದರ ಹಿಂದೆ ಇರುವ ಮೋಸ, ವಂಚನೆ, ಹಿಂಸೆ ನಮ್ಮ ಗುಲಾಮಗಿರಿಯ ನೋವು. ನೀ ಏನ್ ಹೇಳಿಯ?

ತಾಜ್‌ಮಹಲ್‌ನ ನೋಡಿಕೆ ಒಂದು ದೊಡ್ಡ ಮಹಾದ್ವಾರನ ಹಾದ್ ಹೋಕು. ಇದರ ಪಂಚಾಂಗ ಇನ್ನೂರ ಹನ್ನೊಂದು ಚ.ಅಡಿ ಈ ದ್ವಾರದ ಬಾಗಿಲ್ 151 ಅಡಿ ಉದ್ದ 117ಅಡಿ ಅಗಲ ಇದ್ದ್ ನೂರು ಅಡಿ ಎತ್ತರ ಉಟ್ಟು. ಮೂರು ಮಹಡಿ ಇರುವ ಇದರ ಕಟ್ಟಿದ್ ಕೆಂಪು ಕಲ್ಲ್‌ಗಳ್‌ಂದ ದಕ್ಷಿಣ ದಿಕ್ಕಿಲೂ ಒಂದು ಪ್ರವೇಶ ದ್ವಾರ ಉಟ್ಟು.

ಇದ್ ದಾಟಿ ಮುಂದೆ ಹೋದರೆ ಬಾರೀ ಪೊರ್ಲುನ ಮತ್ತು ವ್ಯವಸ್ಥಿತವಾದ ಹೂ ತೋಟ ಉಟ್ಟು. ಅಲ್ಲಿರುವ ಹಾಲ್‌ಗಲ್ಲಿಂದಲೇ ಮಾಡ್ದ ನೀರ್‍ನ ಕೊಳ, ಕಾರಂಜಿ ನಮ್ಮ ಮನಸೂರೆಗೊಳ್ಳದೆ ಇರುದಿಲೆ. ಮೊಗಲರ ಹೂದೋಟ ಎಲ್ಲಾ ಕಡೆ ಇರುದೇ ಹಾಂಗೆ.

ಇನ್ನೂ ಮುಂದುವರ್‍ದರೆ ಇನ್ನೊಂದು ಪಂಚಾಂಗ ಸಿಕ್ಕಿದೆ. ಅದರ ಮೇಲೆನೆ ತಾಜ್‌ಮಹಲ್ ಇರುದು. ಅದರ ನಡೂಲಿ ಸಮಾದಿಗ ಒಳದ್. ಇದರ ಆವರಿಸಿ ಕಟ್ಟಡ ಒಳದು. ಸಮಾಧಿಗೆ ಹಾಸಿದ ಹಾಲ್‌ಗಲ್ಲ್‌ನ ಸೂಕ್ಷ್ಮ ರೀತಿಲಿ ಬಳ್ಳಿ ಹೂಗಳ ಆಕಾರಲಿ ಕೊರ್‍ದ್ ಬಣ್ಣದ ಹರಳ್‌ಗಳ ಹುಡಿ ತುಂಬಿಸಿ ಅಲಂಕರಿಸಿದ ರೀತಿ ಕಣ್ಣಾರೆ ನೋಡಿಯೇ ತಿಳಿಯೊಕು. ಇದನ್ನೆಲ್ಲ ಹೇಂಗೆ ವಿವರಿಸೊಕುಂತ ಗೊತ್ತಾದುಲೆ. ಬೇಕಾದ ಶಬ್ದಗಳೂ ಸಿಕ್ಕುದುಲೆ. ಅದರ ರಚನಾ ಚತುರತೆ ಜಾಣ್ಮೆನ ಮೆಚ್ಚದೆ ಇರಿಕೆ ಆದುಲೆ. ಇದರ ನೋಡಿಯೇ ಕುಸಿ ಪಡೊಕು. ಚಂದ್ರನ ಬೆಳದಿಂಗಳ ಬೆಳ್ಕ್‌ಲಿ ಅದರ ಪೊರ್ಲು ಏನ್‌ಂತೇಳಲಿ.

ತಾಜ್‌ಮಹಲಿನ ಅಕ್ಕ ಪಕ್ಕಲಿ ಮಸೀದಿ, ಮತ್ತಿತರ ಮಹಲ್‌ಗ ಉಟ್ಟು. ಅದರ ಹಿಂಬಾಗಲಿ ಯಮುನಾನದಿ ಹರ್‍ದದೆ. ಇಲ್ಲಿಂದ ದೂರಲಿ ಆಗ್ರಾ ಕೋಟೆನೂ ಕಂಡದೆ. ಇದರೆಲ್ಲ ನೋಡಿಕಂಡ್ ರೈಲ್ ನಿಲ್ದಾಣಕ್ಕೆ ಹೋದೊ. ಇಂದೇ ರಾತ್ರಿ ಇಲ್ಲಿಂದ ದೆಹಲಿಗೆ ಪ್ರಯಾಣ ಬೆಳ್ಸಿವೆ. ನನ್ನ ಮುಂದಿನ ಪತ್ರ ಅಲ್ಲಿಂದಲೇ

ಇತೀ ನಿನ್ನ ಗೆಳೆಯ

ದೆಹಲಿ
10–10–1959

ಗೆಳತಿ ಮಾಲಿನಿಗೆ,

ನಾವೀಗ ನಮ್ಮ ರಾಜಧಾನಿ ದೆಹಲಿ ನಗರಲಿ ಒಳೊ. ನಮ್ಮ ಆಗ್ರಾ ದೆಹಲಿ ರೈಲ್ ಪ್ರಯಾಣ ನೆನ್ಸಿಕನ ಇಂತ ಪ್ರವಾಸನೆ ಬೇಡಂತಾದೆ. ಅದೇನ್ ನೂಕು ನುಗ್ಗಲ್‌ಂತೇಳಿಯ. ಇಡೀ ರಾತ್ರಿ ನಿದ್ದೆ ಇಲ್ಲದನೆ ಕಳೆಕಾಗಿ ಬಾತ್. ನಿಲ್ದಾಣಗಳಲ್ಲಿ ರೈಲ್ ನಿತ್ತರೆ ಸಾಕ್, ಜೇನ್ ನೊಣಗಳ ಹಾಂಗೆ ಜನ ಮುತ್ತಿಗೆ ಹಾಕ್‌ತಿದ್ದೊ. ಗಂಡ್ಸರ್ ಹೆಂಗ್ಸರ್‌ಂತಿಲ್ಲೆ. ಹಾಂಗೆ ಬೊಳ್ಪಾಕನ ದೆಹಲಿ ಮುಟ್ಟಿದ ಮೇಲೆನೆ ನಾವ್ ಸರಿಯಾಗಿ ಉಸಿರಾಡ್ದ್.

ದೆಹಲಿಂತೇಳಿಕಾಕನ ಪ್ರಾಚೀನ, ಅರ್ವಾಚೀನ, ವರ್ತಮಾನಕಾಲಗಳ್ಲಿ ನಡ್ದ ನಡೆಯುತ್ತಿರುವ ಸಂಗತಿಗ ಕಣ್ಣ್‌ಮುಂದೆ ಹಾದ್ ಹೋದೆ. ಕುರು ಸಾಮ್ರಾಜ್ಯದ ಹಸ್ತಿನಾವತಿ, ಪಾಂಡವರ ರಾಜಧಾನಿ ಇಂದ್ರಪ್ರಸ್ಥ ಇದ್ದದ್ ಇಲ್ಲಿನೆ. ಹಸ್ತಿನಾವತಿ ಪಟ್ಟಕ್ಕಾಗಿ ದಾಯಾದಿ ಮತ್ಸರಂದ ಪಾಂಡು–ಕೌರವರೊಳಗೆ ಯುದ್ಧ ನಡ್ದ ಕುರುಕ್ಷೇತ್ರ ಇಲ್ಲಿಂದ ಹಂಞ ದೂರ ಹರಿಯಾಣಲಿರುವ ಕುರುಕ್ಷೇತ್ರ ಎಂಬಲ್ಲಿ. ಕೆಚ್ಚೆದೆಯ ರಜಪೂತರಸ ಪ್ರತ್ವಿರಾಜ ಚವ್ಹಾಣ್ ಆಳ್ದ ಜಾಗ ಇದ್. ಮಹಮ್ಮದ್ ಗೋರಿಯ ನಂತ್ರ ದಿಲ್ಲಿ ಸುಲ್ತಾನರ್ ಇಲ್ಲಿಯೇ ಆಳ್ದ್. ಕುಂಟ ತೈಮೂರನೆಂಬ ಕ್ರೂರಿ, ಅನಾಗರೀಕ ಇಲ್ಲಿಗೆ ದಾಳಿ ಮಾಡಿ ಇಲ್ಲಿದ್ದ ಪುಸ್ತಕ ಬಂಡಾರಕ್ಕೆ ಕಿಚ್ಚಿ ಕೊಟ್ಟದ್ ಈ ಜಾಗಲಿ. ಅದ್ ತಿಂಗಳು ಗಟ್ಟಲೆ ಉರ್ದಿತ್ತ್‌ಗಡ. ಮೊಗಲರಸರ ವೈಬವ ಮೆರ್ದದ್ ಇಲ್ಲಿಯೆ. ಸುಮಾರ್ ಇನ್ನೂರು ವರ್ಷಗಳ ಕಾಲ ಬ್ರಿಟೀಷ್ ಸಾಮ್ರಾಜ್ಯದ ಪತಾಕೆ ಹಾರ್ದ್ ಕೂಡ ಇಲ್ಲಿಂದಲೇ. ಇಲ್ಲಿ ಹುಟ್ಟಿದ ರಾಜ್ಯಗಳೆಷ್ಟ್, ಅದಕ್ಕಾಗಿ ಹೋರಾಡಿದವೆಷ್ಟ್, ರಕ್ತ ಹರ್ಸಿದವರೆಷ್ಟ್ ? ಮೆರೆದವುಗಳೆಷ್ಟ್, ಮರೆಯಾದವು ಏಷ್ಟ್? ಸುಖ ಜೀವನ ತೊರ್ದೊವು ಎಷ್ಟ್ ? ಪ್ರಾಣ ಕೊಟ್ಟವು ಎಷ್ಟ್? ಹಾಂಗಾಗಿ ಇಲ್ಲಿ ನಡ್ದ ಗಟನೆಗ ಒಂದೆರಡೊ? ಇಂದ್ ಸ್ವತಂತ್ರ ಭಾರತ ತ್ರಿವರ್ಣ ಬಾವುಟ ಹಾರುತಿರುವುದೂ ಇಲ್ಲಿನೆ. ಭಾರತಾಂಬೆ ನಮಗೆಲ್ಲ ಅಭಯ ಹಸ್ತ ನೀಡುತಿರುದು ಸಹ ಇಲ್ಲಿಂದಲೇ. ಇಲ್ಲಿಗೆ ಬರುವ ಪ್ರವಾಸಿಗರ ಹೃದಯಲಿ ನೂರಾರ್ ಬಾವನೆಗಳ ಹುಟ್ಟು ಹಾಕಿ ನಲಿಸುವ, ಚಿಂತಿಸುವ ನಗರ ಇದೇ ದೆಹಲಿ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ತ್ಯಾಗಿಗಳ, ವೀರರ, ಮೆರ್ಸಿದ ಈ ನಗರಕ್ಕೆ ಎಲ್ಲವು ಸಿಂಹಿ ಕಂಹಿ ನೆನ್ಪ್‌ಗಳ ಹೊತ್ತ್‌ಕಂಡೇ ಬಾದು. ನಾನ್‌ಕೂಡ ಹಾಂಗೆ ಬರುವಲ್ಲಿ ಒಬ್ಬಂತ ಬೇರೆ ಹೇಳಕಾಗಿಲ್ಲೆ.

ದಿಲ್ಲಿ ವಿಶಾಲ ಬಯಲ್‌ಲಿ ಹರ್ಡಿರುವ ವಿಶಾಲ ನಗರ. ವಿಸ್ತಾರಕ್ಕೆ ಇನ್ನು

ಜಾಗ ಉಟ್ಟು. ನಾವು ಹೊಸ ದಿಲ್ಲಿಲಿ ಇಳ್ದವು ಮನ ರೈಲ್ ಹತ್ತಿ ಹಳೆ ದಿಲ್ಲಿಗೆ ಹೋಗಿ ಇಳ್ದೊ. ಹೊಸ ದಿಲ್ಲಿ ರೈಲ್ ನಿಲ್ದಾಣಂದ ಹಳೆ ದಿಲ್ಲಿ ರೈಲ್ ನಿಲ್ದಾಣಕ್ಕೆ ಬರೇ ಎರ್ಡ್ ಮೈಲ್. ಹಳೆ ದಿಲ್ಲಿಲಿ ನೋಡಿಕೆ ಇರ್ದು ಕೆಲವು ಚಾರಿತ್ರಿಕ ಸ್ತಳಗ. ಇಲ್ಲಿರುವ ಕಟ್ಟಡಗಳೂ ಹಳೆ ಕಾಲದ್ದ್. ಸ್ವಾತಂತ್ರ್ಯ ನಂತರ ಪಾಕಿಸ್ತಾನಂದ, ಕಾಶ್ಮೀರಂದ ಬಂದ ನಿರಾಶ್ರಿತರ್ ಇನ್ನೂ ಸಹ ಡಬ್ಬಿ ಹಾಸಿದ ಗೂಡು ಮನೆಗಳ ಕಟ್ಟಿಕಂಡ್, ವಾಸಮಾಡುತ್ತೊಳೊ. ಇದ್ ಇಲ್ಲಿನ ನಗರ ಸೌಂದರ್ಯಕ್ಕೆ ಕಪ್ಪು ಚುಕ್ಕೆ. ನಾವು ಹಳೆ ದಿಲ್ಲಿಲಿ ಇಳೆಕಾಕನ ಮುಂದೆನೇ ನಿಶ್ಚಯಿಸಿದ ನಗರ ಪಾಲಿಕೆ ಬಸ್ಸ್ ನಮ್ಮ ಕಾಯ್ತಾ ಇತ್. ಮಾರ್ಗದರ್ಶಕರೂ ಇದ್ದೊ. ಆಯಾಯ ದಿನದ ಕಾರ್ಯಕ್ರಮ ನಗರ ಪಾಲಿಕೆಯವರಿಂದಲೇ ಗೊತ್ತಾಗಿದ್ದದೆ. ಮಧ್ಯಾಹ್ನದೊಳಗಿನ ಕಾರ್ಯಕ್ರಮ ಬೊಳ್ಪಿಗೆ 9ಗಂಟೆಗೆ ಸುರಾಗಿ ಒಂದು ಗಂಟೆ ವರೇಗೆ ಮಧ್ಯಾಹ್ನದ ಮೇಲೆ ಎರಡ್ ಗಂಟೆಂದ 6 ಗಂಟೆವರೇಗೆ ಅದರೊಳಗೆ ದಿಲ್ಲಿಲಿ ನೋಡಿಕಿರುವ ಜಾಗ ಬಹುಮಟ್ಟಿಗೆ ನೋಡಿ ಆದೆ. ಈ ಹೊತ್ತ್‌ಲಿ ಬೆಳಿಗ್ಗೆ ಪ್ರಯಾಣಿಸುವ ದೂರ ಹನ್ನೆರಡ್ ಮೈಲ್ ಆದರೆ ಮತ್ತೆ ಇಪ್ಪತ್ತೇಳ್ ಮೈಲ್. ಅಂತೂ ಒಟ್ಟಿಗೆ ಒಂದು ದಿನಲಿ 39ಮೈಲ್ ಪ್ರಯಾಣ ಮಾಡಕಾದೆ. ಇಷ್ಟಕ್ಕೆ ನಾವು ಕೊಡಕಾದ ಶುಲ್ಕ ಅಂದರೆ ತಲಾ ಮೂರು ರುಪಾಯಿ ಮಾತ್ರ. ಇದೆಲ್ಲ ದಿಲ್ಲಿ ನಗರ ಸಭೆವು ಪ್ರವಾಸಿಗರಿಗಾಗಿ ಮಾಡ್ದ ವ್ಯವಸ್ತೆ.

ನಾವ್ ಒಂಬತ್ತ್ ಗಂಟೆಗೆ ಸರಿಯಾಗಿ ಬಸ್ಸ್ ಹತ್ತಿ ಹೊರ್ಟೊ. ನಾವ್ ಸುರೂಗೆ ಹೋದ್ ಕೆಂಪು ಕೋಟೆ ದಾರಿಲಿರುವ ಜಾಮಾಮಸೀದಿಗೆ. ಇದ್ ತುಂಬಾ ಪೊರ್ಲುನ ಕಟ್ಟಡ. ಈಗನ ಕಾಲಕ್ಕೆ ನಮ್ಮ ದೇಶಲಿರುವ ಎಲ್ಲಾ ಮಸೀದಿಗಳ್‌ಂದ ದೊಡ್ಡದ್‌ಗಡ. ಇದರ್ನ ಕ್ರಿ.ಶ. 1644–58ರ ಕಾಲಲಿ ಶಹಜಹಾನನೇ ಕಟ್ಟಿಸಿದ್. ಇದರ ಕಟ್ಟಿಕೆ ಕೆಂಪು ಕಲ್ಲ್ ಮತ್ತು ಅಮೃತ ಶಿಲೆ ಉಪಯೋಗಿಸಿಯೊಳೊ. ಮೆಟ್ಲ್‌ಗಳ ದಾಟಿ ಮುಂದೆ ಹೋದರೆ ಕೆಂಪಾದ ಉಸುಬು ಕಲ್ಲ್ ಹಾಸಿದ ಅಂಗಣ ಸಿಕ್ಕಿದೆ. ಅಲ್ಲಿಂದ ಮುಂದೆಗೆ ಇನ್ನೋದು ಅಂಗಣ ಉಟ್ಟು ಅಲ್ಲಿ ಸುತ್ತ ನಾಲ್ಕ್ ಮೂಲೆಗಳ್ಲಿ ನಾಲ್ಕ್ ಚಾವಡಿಗ ಉಟ್ಟು. ನಾವು ಒಳಗೆ ಹೋಕಾಕನ ಮಸೀದಿನ ಸಭಾಂಗಣ ಕಂಡದೆ. ಅಲ್ಲಿ ನೆಲಕ್ಕೆ ಕೆಂಪು ಕಲ್ಲ್ ಹಾಸಿಯೊಳೊ. ಲಕ್ಷ ಸಂಖ್ಯೆಲಿ ಒಮ್ಮೆಗೆ ನಿಂತ್ ಪ್ರಾರ್ಥನೆ ಮಾಡುವಷ್ಟ್ ವಿಶಾಲ ಇರುವ ಅಂಗಣ; ಮಸೀದಿಗೆ ಎದ್‌ರಾಗಿ ಉಟ್ಟು. ಅಲ್ಲಿರುವ ಸುಂದರ ಕಮಾನ್‌ಗ ಸಾರ್ಸನಿಕ್ ರೈಲಿಯವು. ಸ್ತಂಬಗಳಿರುವ ಹಿರಿಯ ಚಾವಡಿನ ಮೇಲೆ ಅಮೃತ ಶಿಲೆನ ಮೂರು ಗುಂಬಜ್‌ಗ ಉಟ್ಟು. ನಾವು ಹೋಕಾಕನ ಚಾವಡಿಲಿ ಕೆಲವು ಮುಸಲ್ಮಾನ ಸಾಧುಗ ಅವರ ಧರ್ಮಗ್ರಂಥಗಳ ಓದುತಿದ್ದೊ.

ಮುಸ್ಲಿಮ್ ಮಸೀದಿಗಳಲ್ಲಿ ಹಿಂದೂ ದೇವಾಲಯಲಿ ಕಾಂಬ ಹಾಂಗೆ ನಾನಾ ಬಂಗಿಯ ಶಿಲಾ ಮೂರ್ತಿಗಳಾಗಲಿ ಚಿತ್ತಾರದ ಕೆತ್ತನೆಗಳ್‌ಂದ ಅಲಂಕರಿಸಿದಾಗಲಿ ಕಾಣುವ ಹಾಂಗಿಲ್ಲೆ. ಅವು ತೀರಾ ಸರಳವಾಗಿದ್ದ್ ಗೋಡೆಗಳ ಮೇಲೆ ಹೂಬಳ್ಳಿಗಳ ಯಾ ಖುರಾನಿನ ವಾಕ್ಯಗಳ್ನ ಬರ್ದದರ ಕಾಣಕ್. ಯಾವುದೇ ಮೂರ್ತಿ ಅಲ್ಲಿರ್ದುಲೆ. ನಾವ್ ಕೆಲವು ಒಂದಿಷ್ಟ್ ಹೊತ್ತು ಅಲ್ಲಿ ಕುದ್ದ್ ದೇವರ ಗ್ಯಾನ ಮಾಡಿ ಹಿಂತಿರ್ಗಿ ಬಂದ್ ಬಸ್ಸ್ ಹತ್ತಿದೊ.

ಜುಮ್ಮಾ ಮಸೀದಿಂದ ನಾವು ಮುಂದೆ ಹೋದ್ದ್ ರಾಜಘಾಟಿಗೆ. ರಾಜಘಾಟ್ ದಿಲ್ಲಿಲಿರುವ ಮುಖ್ಯವಾದ ಸಂದರ್ಶಕ ಸ್ತಳ. ದಿಲ್ಲಿಗೆ ಬಂದ ಸಂದರ್ಶಕ ದೇಶೀಯನಾಗಿರ್ಲಿ ಯಾ ವಿದೇಶಿಯನೇ ಆಗಿರ್ಲಿ ಇಲ್ಲಿಗೆ ಸಂದರ್ಶನ ನೀಡದೆ ಹೋದುಲೆ. ಇಲ್ಲಿಯೇ ನಮ್ಮ ರಾಷ್ಟ್ರ ಪಿತ ಗಾಂಧೀಜಿಯವರ ಸಮಾದಿ ಇರ್ದು. ಇದ್ ಹಾಲ್‌ಗಲ್ಲಿನ ರಚನೆ. ತುಂಬಾ ಸರಳವಾಗಿ ರಚಿಸಿಯೊಳೊ. ಸುತ್ತ ವಿಶಾಲ ಜಾಗ ಇದ್ದ್ ಅಲ್ಲಿ ಹೂತೋಟ ಮಾಡಿಯೊಳೊ. ನಾವ್ ಅಲ್ಲಿಗೆ ಹೋಕಾಕನ ಎಷ್ಟೋ ಪ್ರವಾಸಿಗ ಹೋಗಿ ಬರ್ತಿದ್ದೊ. ನಾವು ಸುತ್ತು ಬಂದ್ ಅಲ್ಲಿದ್ದ ತುಳಸಿ ಅರ್ಪಿಸಿ ದೇವರ ನೆನ್ದ್ ಹಿಂತಿರುಗಿದೊ. ದೇಶಕ್ಕಾಗಿ ಸರ್ವಸ್ವನ ತ್ಯಾಗ ಮಾಡ್ದ ಆ ಮಹಾಪುರುಷನ ಜೀವಂತವಾಗಿ ನೋಡಿಕೆ ಆಗದಿದ್ರುನೂ ಅವರ ಸಮಾದಿಯ ದರ್ಶನ ಆದ್ರೂ ಆತಲ್ಲಂತೇಳ್ವ ತೃಪ್ತಿಂದ ಎದೆ ತುಂಬಿ ಬಂದಿತ್ತ್. ಅಲ್ಲಿಂದ ತಿರ್ಗಿ ಬಾಕೆ ಮುಂದೆ ಅಲ್ಲಿ ಮಾರಾಟಕಿದ್ದ ಗಾಂಧೀಜಿಯವರ ಪುಸ್ತಕಗಳಲ್ಲಿ 'My Experiments with Truth' ಎಂಬ ಅವರ ಇಂಗ್ಲೀಷ್ ಆವೃತ್ತಿಯ ಅವರ ಜೀವನ ಚರಿತ್ರೆಯ ಪುಸ್ತಕ ನಾ ತಕಂಡೆ. ನಮ್ಮ ಪೈಕಿ ಬೇರೆ ಯಾರೂ ಪುಸ್ತಕ ತಕಂಬ ಮನ್ಸ್ ಮಾಡ್ತ್‌ಲೆ.

ಆ ಮೇಲೆ ನಾವ್ ನೋಡ್ದ್ ದಿಲ್ಲಿ ಮೃಗಾಲಯನ ಮೈಸೂರಿನ ಮೃಗಾಲಯನ ನೋಡ್ದವುಕೆ ಇದೊಂದು ಸಾಮಾನ್ಯ ಅಷ್ಟೆ. ಮುಂದೆ ನಾವ್ ನೋಡ್ದು ಹುಮಾಯುನನ ಗೋರಿ. ಹುಮಾಯೂನ ಅಕ್ಬರನ ಅಪ್ಪ. ಇದನ್ನ್ ಕಟ್ಟಿದ್ ಕ್ರಿ.ಶ. 1565ರ್ಲಿ ಅವನ ರಾಣಿ ಹಮಿದಾ ಬಾನು ಬೇಗಂ ಎಂಬವಳ್. ಅದರ ಪಕ್ಕಲಿ ಅವಳ ಸಮಾದಿನೂ ಉಟ್ಟು. ಇದರ ಕಟ್ಟಿದ್ ಕೆಂಪು ಕಲ್ಲ್‌ಗಳ್‌ಂದ. ಇದರ ರೀತಿಲೇ ತಾಜಮಹಲ್ ಕಟ್ಟಿದ್‌ಂತ ಹೇಳಿವೆ. ಇಲ್ಲಿ ನಾವ್ ಮೊಗಲ ಶಿಲ್ಪ ಕಲೆನ ವೈಬವನ ಕಾಣಕ್. ಗೋರಿನ ನಡೂಲಿ ದೊಡ್ಡ ಗುಂಬಜ್ ಉಟ್ಟು. ಈ ಗೋರಿ ನೋಡಕಾದ್ದೆ. ಗೋರಿನ ಸುತ್ತ ಇರುವ ಹೂದೋಟ ಅದಕ್ಕೊಂದು ಕಳೆ ತಂದುಟು.

ಈ ಪ್ರದೇಶಲಿ ನಡ್ದ ಕೆಲವು ಗಟನೆಗಳ್‌ಂದಾಗಿ ಇಲ್ಲಿಗೆ ವಿಶೇಷತೆ ಬಂದುಟು. ದಿಲ್ಲಿ ಸಿಂಹಾಸನಕ್ಕಾಗಿ ಜಹಂಗೀರನ ಮಂಙ 'ದಾರಾಶಿಕೆಲಿ' ಎಂಬವನ, ಅವನ

ಕಡೆ ತಮ್ಮ ಔರಂಗಜೇಬ ಕೊಂದದ್ ಇಲ್ಲೆಗಡ. ಫರೂಕ್‌ಜಿಯಾರ್ ಮತ್ತ್ ಎರಡ್ನೆ ಆಲ್ ಮಗಿಲ್ ಎಂಬ ಇಬ್ಬರ್ ಮೊಘಲ್ ಅರಸರ ಒಬ್ಬ ಸರ್ದಾರ ಕೊಲೆ ಮಾಡ್ದ್ ಇಲ್ಲಿ. ಕ್ರಿ.ಶ. 1857ಲ್ಲಿ ನಡ್ದ ಸಿಪಾಯಿ ದಂಗೆ ಯಾ ನಮ್ಮ ಸುರೂನ ಸ್ವಾತಂತ್ರ್ಯ ಸಮರ ಕಾಲಲಿ ಮೊಗಲರ ಕಡೆ ಅರ್ಸ ಬಹುದ್ದೂರ್ ಷಹಾ ಎಂಬವ ಇಲ್ಲಿ ಅಡಗಿತ್ತ್ ಗಡ. ಆಗ ಬ್ರಿಟೀಷ್ ಸೈನಿಕರ್ ಇಲ್ಲಿಯೇ ಅವನ ಸೆರೆ ಹಿಡ್ದದ್.

ಹುಮಾಯೂನನ ಗೋರಿ ಮೇಲೆ ಹತ್ತಿ ಕೊಡಿಲಿ ನಿಂತ್ ನೋಡಿರೆ ಯಮುನಾ ನದಿ, ಜುಮ್ಮಾ ಮಸೀದಿ, ಕುತುಬ್ ಮಿನಾರ್‌ಗಳ ದೂರ ದರ್ಶನ ಆದೆ. ಇದೆಲ್ಲ ನೋಡಿ ಕೆಂಪು ಕೋಟೆಗೆ ಬಾಕಾಕನ ಗಂಟೆ 12 ಆಗಿತ್ತ್. ನಡು ಮಧ್ಯಾಹ್ನದ ಸುಡು ಬಿಸಿಲಿನ ಕಾರ ಮೈಯೆಲ್ಲ ಸುಟ್ಟೇ ಹೋಗುವಾಂಗೆ ಆಗಿತ್ತ್. ಕೆಲವು ಕಡೆ ಬಸ್ಸ್ ಇಳ್ದ್ ನಡೆಕೆ ಸಾಕೋ ಸಾಕಾಗಿ ಹೋಗಿತ್ತ್. ಬಾಯಿ ಆರಿ ನೀರ್ ಕುಡ್ದ್ ಕುಡ್ದ್ ಹೊಟ್ಟೆ ಡುಮ್ಮ ಆಗಿ ನಡೆಕೆ ಕಷ್ಟ ಆಗ್ತಿತ್ತ್. ನಾವು ಕೊಡಗಿನ ಶೀತ ಪ್ರದೇಶಂದ ಬಂದವ್ಂತ ಸೂರ್ಯ ಹಂಞನೂ ಕರುಣೆ ತೋರ್ಲಿತ್‌ಲೆ. ಅಂತ ಬಿಸಿಲಿಗೆ ದಿಲ್ಲಿಂದ ಹೊರ್ಡಿಕಾಕನ ಮೈಯೆಲ್ಲ ಬೆಂದ್ ಹೋಗಿ ಸುಟ್ಟ ಬಾಳೆಕಾಯಿ ಹಾಂಗೆ ಆಗಿದ್ದೊ. ನಮ್ಮ ಗೂಡೆಗಳ ಅವಸ್ತೆ ಹೇಳುದೇ ಬೇಡ.

ಕೆಂಪುಕೋಟೆನ ಹತ್ರ ನಿತ್ತ ಕೂಡ್ಲೆ ಟಿಕೆಟ್ ತಕಂಡ್ ಗೇಟ್‌ದಾಟಿ ಒಳಗೆ ಹೋದೊ. ಕೆಂಪುಕೋಟೆ ದಿಲ್ಲಿಲಿರುವ ಹೆಸ್‌ರ್ ಪಡ್ದ ಸ್ತಳಗಳ್ಲಿ ಒಂದು. ಈ ಕೋಟೆನ ಪೂರ್ತಿ ಕೆಂಪು ಕಲ್ಲಿಂದ ಕಟ್ಟಿದ ಕಾರಣ ಇದಕ್ಕೆ ಕೆಂಪು ಕೋಟೆಂತ ಹೆಸ್ರ್ ಬಾತ್. ಈ ಕೋಟೆನ ಬಗ್ಗೆ ಒಬ್ಬ ಪಾಶ್ಚಿಮಾತ್ಯ ಪ್ರವಾಸಿ ಫರ್ಗ್ಯೂಸನ್ ಎಂಬವ ಅವನ ಅಬಿಪ್ರಾಯನ ಹೀಂಗೆ ಹೇಳಿಟು. 'ಕೆಂಪು ಕೋಟೆ ಬಹುಷ್ಯ ಜಗತ್ತಿಲೇ ಯಾ ಪೂರ್ವಾತ್ಯ ರಾಷ್ಟ್ರಗಳ್ಲಿ ಅತ್ಯಂತ ಭವ್ಯ ನಿರ್ಮಾಣ' ಅಂತ. ನಂಗೆ ಜಗತ್ತಿನ ಕತೆ ಗೊತ್ತಿಲೆ. ನಾ ಈ ವರೇಗೆ ನೋಡ್ದ ಕೋಟೆಗಳ್ಲಿ ಇದ್ ವಿಶಾಲವಾಗಿದ್ದ್ ಬವ್ಯವಾಗುಟ್ಟು. ನಾವು ರಾಜಸ್ತಾನಕ್ಕೆ ಹೋದರೆ ಅಲ್ಲಿ ಬೆಟ್ಟಗಳ ಮೇಲೆ ಕಟ್ಟಿದ ಒಂದೊಂದು ಕೋಟೆಗ ವಿಶೇಷವಾಗುಟ್ಟು. ಈ ಕೋಟೆ ಕಟ್ಟಿಸಿದ್ ಕ್ರಿ.ಶ. 1639–1648ರ ಅವಧಿಲಿ ಮೊಗಲ ಸಾಮ್ರಾಟ ಶಹಜಹಾನ.

ಕೆಂಪು ಕೋಟೆನ ಹೊರಬಾಗಿಲ್ ದಾಟಿ ಮುಂದೆ ಹೋದರೆ ಎಲ್ಲೂಕಡೆ ಅಂಗಡಿಗ ಉಟ್ಟು. ಇಲ್ಲಿ ಹೋಕಾಕನ ಕೆಬಿ ಕೇಳದ ಕೆಪ್ಪರ ಹಾಂಗೆ ಹೋದೇ ಒಳ್ಳೆದ್. ಯಾಕೆ ಗೊತ್ತಾ? ಅಲ್ಲಿರುವ ವ್ಯಾಪಾರಿಗ ನಾವ್ಗೆ ಮುತ್ತಿಗೆ ಹಾಕಿ ಅವರ ಅಂಗಡಿಗೆ ಹೋಗಿ ವ್ಯಾಪಾರ ಮಾಡುವ ಹಾಂಗೆ ಒತ್ತಾಯಿಸುವೆ. ಜೇನ್ ನೊಣ ಮುತ್ತುವ ಹಾಂಗೆ. ನಾವು ಅವರ ಪಕ್ಕಕ್ಕೆ ಸರ್ಲಿ ಸೀದಾ ಮುಂದೆ

ಹೋಗಿ ದಿವಾನಿ ಆಮ್ ಚಾವಡಿನ ಸೇರ್ರೊ.

ದಿವಾನಿ ಆಮ್ ಸಬಾಂಗಣ ಸಾರ್ವಜನಿಕರಿಗಾಗಿ ಇರುವಂತದ್ದ್. ತುಂಬಾ ವಿಸ್ತಾರಾಗಿ ಉಟ್ಟು. ಇದರ ಸುತ್ತ ಸಾಲ್ ಸಾಲಾಗಿ ಕಮಾನಿನ ಕಂಬಗ ಉಟ್ಟು. ಅದರ ನಡೂಲಿ ಬಾದಶಹ ಕುದ್ರ್‌ತಿದ್ದ ಸಿಂಹಾಸನ ಇಸುವ ವೇದಿಕೆ ಉಟ್ಟು. ಇದ್ ಅಮೃತ ಶಿಲೆಂದ ಮಾಡ್ದ್. ಈ ಶಿಲೆನ ಕೆತ್ತಿ ಕೊರ್ದ್ ನಾನಾ ಬಣ್ಣದ ಕಲ್ಲಿನ ಹುಡಿ ತುಂಬಿಸಿ ಮಾಡ್ದ ಹೂ ಬಳ್ಳಿಗಳ ಸುಂದರ ಕೆತ್ತನೆಗಳ ನೋಡಕ್. ಅಲ್ಲಿಂದ ಮುಂದೆ ಹೆಜ್ಜೆ ಹಾಕಿರೆ ಪೊರ್ಲುನ ಉದ್ಯಾನವನ ಸಿಕ್ಕಿದೆ. ಅಲ್ಲಿರುವ ಕೊಳಗ, ಕಾರಂಜಿಗ ಅಲ್ಲಿನ ಆಕರ್ಷಣೆ ಹೆಚ್ಚಿಸಿದೆ. ಅಲ್ಲಿ ಗಿಡ, ಮರ ಬೆಳ್ಸಿ ಹಸ್ರ್‌ನ ಸೊಗಸ್ ಹೆಚ್ಚಿಸಿಯೊಳೊ. ಅಲ್ಲಿರುವ ವಾಸ್ತು ರಚನೆಗಳ ಸೊಗಸ್‌ನ ನೋಡಿಯೇ ಕುಸಿ ಪಡೊಕು. ಪೂರ್ತಿ ಅಮೃತ ಶಿಲೆಂದಲೇ ಮಾಡ್ಸಿದ ಬಾದಶಹನ ದಿವಾಖಾನೆ ಅಲ್ಲಿ ಉಟ್ಟು. ಅಲ್ಲಿನೆ ಅಮೃತಶಿಲೆಂದ ಅಲಂಕರಿಸಿದ ಕಾಲುವೆ ಉಟ್ಟು. ಒಂದು ಕಾಲಲಿ ಯಮುನೆನ ನೀರ್ ಈ ಕಾಲುವೆಲಿ ಹರಿತಿತ್ತ್ ಗಡ. ಆಗ ಯಮುನೆನೂ ಕೋಟೆ ಪಕ್ಕಲಿ ಹರಿತಿತ್ತ್. ಮುಂದೆ ಬಾದಶಹರ ಕಾಲ ಕಳ್ತ್‌ಂತೇಳಿ ಚಂಚಲ ಸ್ವಬಾವದ ಯಮುನೆ ತನ್ನ ದಾರಿ ಬದಲ್‌ಮಾಡಿ ಈಗ ಅಲ್ಲಿಂದ ತುಸು ದೂರಲಿ ಹರ್ದದೆ. ಮಾಲಿನಿ! ನಿಂಗೆ ಒಂದು ವಿಷಯ ಗೊತ್ತಿರುದು ಉತ್ತರ ಬಾರತದ ನದಿಗ ಆಗಾಗ ತಮ್ಮ ಹರಿವ ದಾರಿನ ಬದಲಾಯ್ಸಿವೆ. ಏಕೆಂತೇಳಿರೆ ಅಲ್ಲಿನ ನದಿಗ ನಮ್ಮೂರಿನ ನದಿಗಳ ಹಾಂಗೆ ಅಲ್ಲ. ನಮ್ಮಲ್ಲಿ ಆಳಲಿರುವ ಕಣಿವೆಗಲ್ಲಿ ಹಳ್ಳ ಹರಿದು ಇಲ್ಲಿ ಸಮತಟ್ಟ್ ಜಾಗಲಿ. ಹಾಂಗಾಗಿ ಇಲ್ಲಿ ಹಳ್ಳಕ್ಕೂ ದಡಕ್ಕೂ ಇರುವ ಅಂತರ ಬಾರೀ ಕಡಿಮೆ ಅದಕ್ಕೆ ಇಲ್ಲಿ ನದಿಗ ತಮ್ಮ ಪಾತ್ರ ಆಗಾಗ ಬದಲಿಸುದು. ಇಲ್ಲಿ ಅಮೃತಶಿಲೆ ಇಲ್ಲದ ರಚನೆಗಳೇ ಇಲ್ಲೆಂತೇಳಕ್. ಅಂತೂ ಇಲ್ಲಿ ಅದರ ಮೇಲೆ ನಡೆಕಾಕನ ಒಂದು ತರ ಕುಸಿ ಆದೆ. ಕೆಂಪು ಕೋಟೆನ ಮತ್ತೊಂದು ಕಡೆಲಿ 'ದಿವಾನಿ ಖಾಸ್'ಂತೇಳುವ ಸಭಾಂಗಣ ಉಟ್ಟು. ಇದ್ ಖಾಸಗಿ ಸಭಾ ಭವನ. ಜಗತ್‌ಪ್ರಸಿದ್ಧ ಮೈಯೂರ ಸಿಂಹಾಸನ ಇಲ್ಲೆ ಇದ್ದದ್ ಈಗ ಅದರ ಬ್ರಿಟಿಷರ್ ಅವರ ದೇಶಕ್ಕೆ ತಕಂಡ್ ಹೋಗೊಳೊ ಆ ಕಾಲಲೇ ಅದರ ಬೆಲೆ 12,000,000 ಪೌಂಡ್ ಗಡ.

ಬಾದಶಹರ ರಾಣಿ ವಾಸದ ಸ್ನಾನಗ್ರಹ ಚಂದ್ರಕಾಂತ ಶಿಲೆಯ ರಚನೆ. ಹಾಲ್‌ಗಲ್ಲಿನ ಕಾಲುವೆಂದ ಹರ್ದ್ ಬಂದ ನೀರ್, ಮನ್ಸ್‌ನ ಸೆಳೆವ ನಡುಮನೆ ಒಳಗೆ ಹರ್ದ್‌ಬಂದ್ ಸುರೂಗೆ ಹಂಞ ಗುಂಡಿ ಇರುವ ಕೊಳಲಿ ತುಂಬ್‌ತಿತ್ತ್‌ಗಡ. ಆ ನೀರಿಗೆ ಹೂವು ಅತ್ತರ್ ಎಲ್ಲ ಹಾಕಿ ರಾಣಿ ವಾಸದೊವು ಮಿಾಯ್‌ತಿದ್ದದ್. ಆ ಕಾಲದ ರಾಜ ರಾಣಿ ವಿಲಾಸನ ನೆನೆಕಾಕನ ಮನ್ಸ್‌ನ ಮೂಲೆಲಿ ಅಸೂಯೆ

ಹುಟ್ಟಿದೆ. ಮೊಗಲರ ಕಾಲದ ಅರಮನೆ, ಉದ್ಯಾನವನ, ಮಂಟಪ, ಮಿಂಯುವ ಮನೆ ಇದೆಲ್ಲಾ ನೋಡಿಕಾಕನ ಇದಕ್ಕಾಗಿ ಅವು ಎಷ್ಟ್ ಸಂಪತ್ತ್‌ನ ವ್ಯಯಿಸಿದೊಂತ ಆಶ್ಚರ್ಯ ಆದೆ. ಅವರ ವೈಭವನ, ಬೋಗ ಜೀವನನ ನೆನ್ಸಿಕಾಕನ ಬೆರಗಾದೆ. ಅವರಲ್ಲಿದ್ದ ಸೌಂದರ್ಯ ದೃಷ್ಟಿಗೆ ಮನ್ಸ್ ಸೋತದೆ.

ಮಿಂಯುವ ಮನೆಂದ ಹಂಞ ದೂರಲಿ ಒಂದು ಮಸೀದಿ ಉಟ್ಟು. ಅದ್ ನಿರ್ಮಲ ಜಾಗ. ಹಾಲ್‌ಗಲ್ಲಿನ ಮನೆ. ಶಾಂತ ವಾತಾವರಣ. ಮನ್ಸಿಗೆ ಒಂದು ತರದ ಕುಸಿ. ಅದರ ಮೇಲೆ ಪೊರ್ಲುನ ಗೂಡೆಗ, ಹೆಂಗ್ಸರ್ ತಳುಕಿ, ಬಳುಕಿ, ಬಾಗಿ ಮೆಲ್ಲನೆ ನಡೆಕಾಕನ ನೋಡೊವುಕೆ ಹಿಂದಿನ ನೆನ್ಪಾದು ಸುಳ್ಳಲ್ಲ. ನೀ ಜೊತೆಗಿರ್‌ತಿದ್ದರೆ ನೀ ನಡೆವ ಪೊರ್ಲುನ ಕಂಡ್ ಕುಸಿ ಪಡ್ತಿದ್ದೆ. ನಾವ್ ಅಲ್ಲಿಗೆ ಹೋಗಿರ್‌ಕಾಕನ ನಮ್ಮ ಹಾಂಗೆ ಎಲ್ಲಿಂದಲೋ ಬಂದ ಪೊರ್ಲುನ ಗೂಡೆಗ ಸುಮಾರ್ ಇದ್ದೊ.

ಇಲ್ಲಿನ ಉದ್ಯಾನವನ ಅಲ್ಲಲ್ಲಿ ನೆಟ್ಟ್ ಬೆಳ್ಸಿದ ಮರಗಳ ನೆರ್ಳ್‌ನ ಅಡಿಲಿ ನಡೆಕಾಕನ ಅದರಡಿಲಿ ಕುದ್ದ್ ಹಾಯಾಗಿ ವಿಶ್ರಾಂತಿ ತಕಂಡ್ ಅಲ್ಲಿನ ಸೌಂದರ್ಯನ ಉಂಡ್‌ಕಂಡ್ ನಿದ್ರಾದೇವಿಗೆ ಸೆರೆಯಾಗಿ ಬುಡುಕುಂತ ಆಸೆ ಆಗ್‌ತಿತ್ತ್. ಆಸೆಯೇನೋ ಸರಿ. ಆದರೆ ಪುರುಷೊತ್ತ್ ಎಲ್ಲಿಟ್ಟು? ಹಿಂದಿನ ಕಾಲಲಿ ವಾಸ ಇದ್ದ್ ಅಲ್ಲಿನ ಸೌಂದರ್ಯನ, ಸುಖಜೀವನದ ರುಚಿ ಉಂಡ್ ತೃಪ್ತರಾಗಿದ್ದರೆ ಈಗ ಜನಗ ಇದನ್ನೆಲ್ಲಾ ಕಣ್ಣಾರೆ ಕಂಡ್ ಹಿಂದಿನ ದಿನಗಳ ನೆನ್ಸಿಕಂಡ್ ಸಂತೋಷ ಪಟ್ಟ್ ಅದರ್‌ಂದಲೇ ತೃಪ್ತರಾಗಿ ಹಿಂತಿರ್‌ಗಿ ಬರೋಕೆ ಹೊರ್ಟ್ ಹಿಂದಿನ ವೈಭವಕ್ಕಾಗಿ ಅಸೂಯೆ ಪಡ್ದು ಸರಿನೂ ಅಲ್ಲ.

ಕೆಂಪುಕೋಟೆ ನೋಡಿ ಹೊರಗೆ ಬಾಕೆ ಮುಂದೆ ಕೋಟೆನ ಎದ್‌ರ್ ಬಾಗಲಿ ಮೇಲೆ ಸ್ವಾತಂತ್ರ್ಯದಿನ ನಮ್ಮ ರಾಷ್ಟ್ರ ಧ್ವಜ ಹಾರ್ಸುವ ಜಾಗನ ನೋಡಿಕಂಡ್ ಹೊರಗೆ ಬಾಕಾಕನ ಗಂಟೆ ಎರಡಾಗಿತ್ತ್. ಮಧ್ಯಾಹ್ನದ ಊಟ ಬೇಗ ಬೇಗ ಮುಗ್ಸಿ ಬಸ್ಸ್ ಹತ್ತಿ 'ಫಿರೋಜ್' ಷಹಾ ಕೋಟ್ಲದ ಕಡೆಗೆ ಹೊರ್ಟೊ.

ಫಿರೋಜ್ ಷಹಾ ಕೋಟ್ಲ ಅಂದರೆ ಒಂದು ಹಳೆ ಕೋಟೆ ಇರುವ ಪ್ರದೇಶ. ಅದರ ಕಟ್ಟಿಸಿದ್ ಕ್ರಿ.ಶ. 1354ರ್ಲಿ ಫಿರೋಜ್ ಷಹಾ ತುಗ್ಲಕ್‌ಂತೇಳವ. ಈ ಕೋಟೆನ ಹೆಚ್ಚಿನ ಬಾಗ ಎಲ್ಲ ಈಗ ಹಾಳ್ ಬಿದ್ದುಟು. ಆದರೆ ನಾವ್ ಹೋದ್ದ್ ಈ ಕೋಟೆನ ನೋಡಿಕೆ ಅಲ್ಲ ; ಅಲ್ಲಿರುವ ಅಶೋಕ ಕಂಬನ ನೋಡಿಕೆ. ಫಿರೋಜ್ ಷಹಾಂಗು ಅಶೋಕ ಸ್ತಂಬಕ್ಕೂ ಇದಾವ ಸಮ್ಮಂದಂತ ನಿಂಗೆ ಆಶ್ಚರ್ಯ ಆದು. ನಿಂಗೆಂತಲ್ಲ ಯಾರಿಗೂ ಆದು. ಇದೇ ಕುತೂಹಲದ ಸಂಗತಿ. ಅಂಬಾಲದ ತೋಪ್ರಂತೇಳುವ ಸ್ತಳಲಿದ್ದ ಅಶೋಕ ಸ್ತಂಬನ ಫಿರೋಜ್ ಷಹಾಂತೇಳವ ತಂದ್ ಇಲ್ಲಿ ನೆಟ್ಟದ್. ಅದ್ ಸಣ್ಣ ಸ್ತಂಬ ಏನೂ ಅಲ್ಲ. ಅದ್

ಉಕ್ಕಿನ ಕಂಬ. ಬುಡಬಾಗ ಎರ್ಡ್ ಕೈ ಸೇರ್ಸಿ ತಬ್ಬಿ ಹಿಡ್ದರೆ ಕೈ ಕೂಡ್ದುಲೆ. ಅಷ್ಟ್ ತೋರ ಉಟ್ಟು. ಅದರ ಎತ್ತರ 46 ಅಡಿ 8 ಇಂಚ್. ಅದರ ಅರ್ದಬಾಗ ಮೇಲೆಲಿ ತುಂಡಾಗುಟು. ಆ ಕಂಬದ ಮೇಲೆ ಬರ್ದ ಬ್ರಾಹ್ಮಿ ಲಿಪಿಯ ಅಕ್ಷರ ಈಗಲೂ ಕಂಡದೆ. ಇದೇ ಮಾರಾಯ ಫೀರೋಜ್ ಷಹಾ ಮೀರತ್ ಎಂಬಲ್ಲಿಂದ ತಂದ ಇನ್ನೊಂದು ಅಶೋಕ ಕಂಬ ದಿಲ್ಲಿನ ಸುಬಾಜಿಮಂಡಿ ಎಂಬಲ್ಲಿ ಉಟ್ಟು. ಇಲ್ಲಿ ಆಶ್ಚರ್ಯ ಅಂದರೆ ಅಷ್ಟ್ ದೊಡ್ಡ, ಅಷ್ಟ್ ತೂಕದ ಕಂಬನ ಅಂವ ಹೇಂಗೆ ತಾತ್ ಮತ್ತು ಹೇಂಗೆ ನೆಟ್ಟಂಗೆ ಮಾಡಿ ನೆಟ್ಟತ್‌ಂತ. ಇಲ್ಲಿಂದ ಹಂಞ ದೂರಲಿ ಇಂದ್ರಪ್ರಸ್ಥ, ಪಾಂಡವರ ರಾಜಧಾನಿ ಇರುದು.

ಮುಂದೆ ನಾವ್ ರಾಷ್ಟ್ರಪತಿ ಬವನ, ಇಂಡಿಯಾ ಗೇಟ್ ನೋಡಿಕಂಡ್ ಪಾರ್ಲಿಮೆಂಟ್ ಬವನಕ್ಕೆ ಹೋದೊ. ಇಂಡಿಯಾ ಗೇಟ್‌ಂತ ಕರೆವ ರಚನೆ ಯುದ್ದ ಸ್ಮಾರಕ. ಅದರ ಎತ್ತರ 130ಅಡಿ. ಅದ್ ಒಂದನೇ ಮಹಾಯುದ್ಧಲಿ ಬ್ರಿಟಟಿಷರ ಕಡೆಂದ ಹೋರಾಡಿ ಪ್ರಾಣ ಕಳ್ಕಂಡ ಬಾರತೀಯ ಸೈನಿಕರ ನೆನ್ಪಿಗೆ ಕಟ್ಟಿದ್. ಇದ್ ಬೆಲ್ಜಿಯಮ್ಮ್ ದೇಶಲಿರುವ ಮೆನಿನ್ ಗೇಟಿನ ಮಾದರಿಲಿ ಕಟ್ಟಿದ್. ಇಲ್ಲಿಂದ ಸ್ವಲ್ಪ ದೂರಲಿ ರಾಷ್ಟ್ರೀಯ ಸ್ಟೇಡಿಯಮ್ ಉಟ್ಟು.

ರಾಷ್ಟ್ರಪತಿ ಬವನ ನಾವ್ ದೂರಂದಲೇ ನೋಡ್ದ್. ಇದರ ಕಟ್ಟಿಸಿದ್ ಬ್ರಿಟಿಷರ್. ಇಂಗ್ಲೆಂಡಿನ ರಾಣಿಯ ಪ್ರತಿನಿದಿ ವೈಸ್‌ರಾಯಿಗಳಿಗಾಗಿ 1931ರಲ್ಲಿ ಏಡ್‌ವರ್ಡ್ ಲುಟಿಯನ್ಸ್ (Edword Lutyens) ಎಂಬವನ ಯೋಜನೆ ಪ್ರಕಾರ ನಿರ್ಮಾಣ ಆದ್. ಈ ಬವನ ಇರುದು 330 ಎಕ್ರೆ ಪ್ರದೇಶಲಿ. ಈ ಬವನಲಿ 340 ಕೋಣೆಗಳೂ ಉಟ್ಟುಗಡ. ಹಿಂಬಾಗಲಿ ಸುಂದರ ಹೂತೋಟ ಉಟ್ಟು. ಈ ತೋಟ ಜಗತ್ತಿನ ಅತ್ಯಾಕರ್ಷಕ ಹೂ ತೋಟಗಳಲ್ಲಿ ಒಂದು ಗಡ. ಇದರ ಮುಂಬಾಗಲಿ ರಾಷ್ಟ್ರೀಯ ಮ್ಯೂಜಿಯಮ್ ಉಟ್ಟು.

ಪಾರ್ಲಿಮೆಂಟ್ ಬವನ ವೃತ್ತಾಕಾರಲಿ ಕಟ್ಟಿದ್. ಇಲ್ಲಿನೆ ಲೋಕಸಬೆ ಮತ್ತು ರಾಜ್ಯಸಬೆ ನಡಿದು. ನಾವ್ ಅಲ್ಲಿಗೆ ಹೋದ ದಿನಗಳ್ಲಿ ಪಾರ್ಲಿಮೆಂಟ್ ನಡಿತಿತ್ಲೆ. ಬಾಗಿಲ್ ತಕಂಡ್ ಇತ್ತ್. ನಾವ್ ಕೆಲವು ಅದರ ಒಳ ಪ್ರವೇಶಿಸಿ ಬೇಗ ಬೇಗ ನೋಡಿಕಂಡ್ ಕುತುಬ್ ಮಿನಾರ್ ಕಡೆ ಹೋದೊ.

ಹೈಸ್ಕೂಲು ಮಟ್ಟಲಿ ಕುತುಬ್ ಮಿನಾರಿನ ಚಿತ್ರ ಇಲ್ಲದ ಚರಿತ್ರೆ ಪುಸ್ತಕನೇ ಇಲ್ಲೆಂತೇಳಕ್. ಇದರ ನೋಡಿ ನೋಡಿ ಆಕರ್ಷಿತನಾಗಿ ಇದನ್ನೆಲ್ಲಾ ಮುಂದೆ ನಾನ್ ನೋಡ್ವೆಂತೇಳಿ ಕನ್ಸಿಲಿ ಕೂಡ ಗ್ರಹಿಸಿತ್ಲೆ. ಈಗ ಆ ಆಸೆ ಪೂರೈಸಿದಂಗಾತ್. ಪ್ರವಾಸ ಹೊರ್ಡಿಕಾಕನ ಇದರಷ್ಟೆ ಎತ್ತರದ ಸವಿ ಕನ್ಸ್ ಹೊತ್ತ್‌ಕಂಡ್ ಬಂದಿದ್ದೆ. ಸ್ವತಹ ಇಲ್ಲಿವರೆಗೆ ನೋಡಿ ಒಂದು ಕಡೆ ಕುಸಿ ಆದರೆ ಇನ್ನೊಂದು ಕಡೆ ಬೇಜಾರನೂ ಆತ್.

ಕುತುಬ್ ಮಿನಾರ್‌ನ ಕಟ್ಟಿಕೆ ಸುರುಮಾಡ್ದ್ 1199ರ್ಲಿ ಕುತುಬುದ್ದೀನ್ ಐಬಕ್ಕ್ ಎಂಬವ. ಅದರ ಕೆಲ್ಸ ಮುಗಿಯಕೆ ಮುಂದೆನೇ ಅಂವ ತೀರಿ ಹೋದ ಕಾರಣ ಕೆಲ್ಸ ಬಾಕಿ ಆಗಿತ್ತ್. ಆ ಕೆಲ್ಸನ ಪೂರ್ತಿ ಮಾಡ್ದ್ ಅವನ ನಂತರ ಅದಿಕಾರಕ್ಕೆ ಬಂದ ಸುಲ್ತಾನಂತೇಳುವೆ. ಇನ್ನ್ ಕೆಲವು ಕುತುಬುದ್ದೀನ್ ಐಬಕನೇ ಮುಗ್ಸಿದ್; ಫಿರೋಜ್‌ಷಹಾ ತುಗ್ಲಕ್ ಎಂಬವ 1368ರ್ಲಿ ಅದರ ರಿಪೇರಿ ಮಾಡ್ತ್‌ಂತೇಳುವೆ. ಅದರ ಎತ್ತರ 238ಅಡಿ. ಅದರ ಬುಡ ಬಾಗದ ಸುತ್ತಳತೆ 47ಅಡಿ 3ಇಂಚ್. ಅದರ ಕೊಡಿಗೆ ಏರಿಕೆ 379 ಮೆಟ್ಲ್ ಉಟ್ಟು. ಕೊಡಿಲಿ ಅದರ ಸುತ್ತಳತೆ 9ಅಡಿ. ಅದರ ಸುರೂನ ಮೂರು ಮಹಡಿ ಕೆಂಪು ಕಲ್ಲ್‌ಂದ ಕಟ್ಟಿದ್. ಮೇಲೆನ ಎರಡ್ ಮಹಡಿ ಅಮೃತ ಶಿಲೆಂದ. ಇಲ್ಲಿ ಐದ್ ಮಹಡಿ ಉಟ್ಟು. ಸುರೂನ ಮಹಡಿ ನೆಲಂದ 95ಅಡಿ ಎತ್ತರಲಿ ಉಟ್ಟು. ಮೇಲಿನ ಎರ್ಡ್ ಮಹಡಿನ ಫಿರೋಜ್ ಷಹಾ ಕಟ್ಟಿಸಿದ್‌ಂತ ಹೇಳಿವೆ. ಪ್ರತಿ ಮಹಡಿನ ಹಂತದಲಿ ಅದಕ್ಕೆ ಸುತ್ತ ಬಾಕೆ ಅನುಕೂಲವಾಗುವ ಹಾಂಗೆ ವ್ಯವಸ್ತೆ ಉಟ್ಟು. ಇದರ ಪಕ್ಕಲಿ ಕುತುಬ್ ಮಿನಾರಿಗಿಂತ ಬಾರೀ ದೊಡ್ಡ ಮತ್ತು ಎತ್ತರದ ಮಿನಾರ್ ಕಟ್ಟಕುಂತೇಳಿ ಅಲ್ಲಾ-ಉದ್ದಿನ್-ಖಿಲ್ಜಿ ಸುರುಮಾಡ್ತ್. ಅರ್ದ ಕೆಲಸ ಆಕನ ಅಂವ ಎಡೆಲಿ ತೀರಿ ಹೋದ ಕಾರಣ ಅಷ್ಟಕ್ಕೇ ನಿಂತ್ ಹೋತ್. ಈಗ ಅದರ ಗುರುತು ಮಾತ್ರ ಕಾಣಕ್. ಕಳ್ದ ವರ್ಷ ದೌಲತಾಬಾದಿಲಿ ಚಾಂದ್ ಮಿನಾರ್ ಹತ್ತಿದೆ ಅಂತ ಹೇಳಿದ್ದೆ ಅಲ್ಲ. ಅದ್ ಇದಕ್ಕಿಂತ ತುಂಬಾ ಸಣ್ಣದ್.

ನಾನಿಂಗೆ ಹೇಳಿಕೆ ಇಷ್ಟಪಡುವ ಒಂದು ಸಂಗತಿ ಅಂದರೆ ಕುತುಬ್ ಮಿನಾರ್‌ನ ಕುತುನುದ್ದೀನ್-ಐಬಕ್ಕ್ ಎಂಬವನೇ ಕಟ್ಟಿದ ಬಗ್ಗೆ ಚರಿತ್ರಾಕಾರರಿಗೆ ಅನುಮಾನ ಉಟ್ಟು. ಹಿಂದೆ ದಿಲ್ಲಿಲಿ ಪೃಥ್ವಿರಾಜ ಚೌವಾಣ ಎಂಬ ರಜಪೂತ ಅರಸ ಆಳ್ತಿತ್. ಅಂವ ಶೂರನೂ ಆಗಿತ್ತ್. ಮಹಮ್ಮದ್ ಘೋರಿ ಸುರು ದಾಳಿ ಮಾಡಿಕಾಕನ ಅವನ ಸೋಲಿಸಿ ಜೀವದಾನ ನೀಡಿ ಓಡ್ಸಿತ್ತ್. ಅಂವ ಯಾವ್ದೊ ಒಂದು ಯುದ್ದಲಿ ಗೆದ್ದ ನೆನ್ಪಿಗಾಗಿ ಕಟ್ಟಿದ ವಿಜಯ ಸ್ತಂಬನ ಹಂಞ ಬದಲಾಯಿಸಿ ಕುತುಬ್‌ದ್ದೀನ್ ಕಟ್ಟಿದ್‌ಂತ ಹೇಳುವೆ. ಅಂತೂ ದಿಲ್ಲಿಗೆ ಬಂದವು ಇದೊಂದು ನೋಡಕಾದ ವಿಶೇಷದ ನಿರ್ಮಾಣ.

ನಾವ್ ಮಿನಾರಿನ ಹತ್ರ ಹೋಕಾಕನ ನಮ್ಮಂದ ಮುಂದೆ ಬಂದ ಪ್ರವಾಸಿರ ತಂಡದವು ಅಲ್ಲಿದ್ದೊ. ನಮ್ಮ ಪೈಕಿ ಎಲ್ಲವೂ ಹತ್ತಿಕೆ ಮನ್ಸ್ ಮಾಡ್ತ್‌ಲೆ. ನಾನಂತೂ ಹತ್ತಿಯೇ ತೀರೊಕುಂತ ನಿಶ್ಚಯ ಮಾಡಿದ್ದೆ. ನಾವ್ ಕೆಲವು ಹೆಂಗೊ ದಾರಿ ಮಾಡಿಕಂಡ್ ಕೊಡಿವರೇಗೆ ಹತ್ತಿ ಅಲ್ಲಿ ನಿತ್ತ್ ಅಲ್ಲಿಗೆ ಕಾಂಬ ದಿಲ್ಲಿನ ವಿಹಂಗಮ ದೃಶ್ಯ, ಪ್ರಕೃತಿನ ಮೈಮಾಟ ಆಸ್ವಾದಿಸಿ ಕೆಳಗೆ ಇಳ್ದ್

ಬಂದೊ. ಅಲ್ಲಿ ಇಳಿದು ಅಂದರೆ ಸುಲಬದ ಕೆಲಸ ಅಲ್ಲ. ಬಾರಿ ಎಚ್ಚರಿಕೆ ಬೇಕಾದೆ. ಸುತ್ತು ಹಾಕುವ ಅಗಲ ಕಿರಿದಾದ ಮೆಟ್ಲ್ ಜಾರಿ ಬಿದ್ದರೆ ಏಳುದೇ ಕಷ್ಟ. ಹಂತಗಳಲಿ ಗಾಳಿ ಬೆಳ್ಕ್‌ನ ವ್ಯವಸ್ತೆ ಉಟ್ಟು. ಆದರೂ ಜಾಗ್ರತೆ ಬೇಕಾದೆ.

ಇದೇ ಜಾಗಲಿ ಇನ್ನೊಂದು ಮಸೀದಿನೂ ಉಟ್ಟು. ಅದರ ಹೆಸ್ರ್ ಕುವಾತ್–ಉಲ್–ಇಸ್ಲಾಮ್‌ಂತ. ಇದನ್ನ್ ಕಟ್ಟಿಸಿದ್ ಕೂಡ ಕುತುಬ್‌ದ್ದೀನ್–ಐಬಕ್ ಕ್ರಿ.ಶ. 1193ರ್ಲಿ. ಈ ಮಸೀದಿನ ಕೆಲ್ಸ ಪೂರ್ತಿ ಮಾಡಿಕೆ ಅಂವ 27 ಹಿಂದೂ ದೇವಸ್ತಾನಗಳ ಹುಡಿ ಮಾಡಿ ಕಂಬಗಳ ತಂದ್ ಇದರ ಪೂರ್ತಿ ಮಾಡ್ದ್ ಗಡ. ಈಗಳೂ ಕೂಡ ಆ ಕಟ್ಟಡದ ಗೋಡೆಗಳ ಸಾರಣೆ ಎಳ್ಪಿಸಿರೆ ಒಳಗೆ ಹಿಂದೂ ಕಲಾರಚನೆ ಕಂಡದೆ. ಯಾರೋ ಅಲ್ಲಿಗೆ ಬಂದ ಪ್ರವಾಸಿಗರ್ ಎಳ್ಪಿದ ಕಡೆ ಕಂಡ್ ನಾ ನಿಂಗೆ ಬರಿತಿರುದು. ಈ ಕೆಟ್ಟ ಮನ್ಸಿನವುಕೆ ಒಂದು ಸುಂದರ ರಚನೆನ ಹಾಳ್ ಮಾಡಿ ಇನ್ನೊಂದರ ಕಟ್ಟುವ ವಿಕೃತ ಮನ್ಸ್ ಎಲ್ಲಿಂದ ಬಾತೊ. ಆಯೋದ್ಯೆಲಿ, ಮಥುರಲಿ, ಕಾಶಿಲಿ ಹೆಚ್ಚಿನ ಕಡೆ ಇದೇ ಕತೆ, ಇದೇ ವ್ಯಥೆ. ಈ ಮಸೀದಿನ ಕೆತ್ತನೆ, ಅಲಂಕಾರ, ಕಮಾನ್‌ಗ, ಗಿಡ, ಲತೆ, ಹೂಗಳ ಕೆತ್ತನೆ ಎಲ್ಲ ತಾಜಾ ಹಿಂದೂ ಸಂಪ್ರದಾಯದ್ದ್.

ಕುತುಬುದ್ದೀನ್ ಸತ್ತಮೇಲೆ, ಅಲ್ತಮಿಸ್ ಎಂಬ ಸುಲ್ತಾನ ಈ ಮಸೀದಿನ ವಿಸ್ತರಿಸಿತ್ ಗಡ. ಆ ಮೇಲೆ ಅಲ್ಲಾ–ಉದ್ದೀನ್–ಖಿಲ್ಜಿಂತೇಳುವ ಸುಲ್ತಾನನೂ ಕೂಡ ಇದರ ವಿಸ್ತರಣೆಗೆ ಹೊರ್ಟ್ 'ಅಲೈ ದ್ವಾರವಾಜ್' ಎಂಬುದರ ಕಟ್ಟಿಕೆ ಸುರು ಮಾಡಿರೂ ಆ ಕೆಲಸ ಮುಗ್ಸಿಕೆ ಅವಂಗೆ ಆತ್ಲೆಂತೇಳುವೆ.

ಕುತುಬ್ ಮಿನಾರ್‌ನ ನೋಡಿ ಆದ ಮೇಲೆ ನಾವು ಒಂದು 'ಉಕ್ಕಿನ ಕಂಬ' ನೋಡಿಕೆ ಹೋದೊ. ಈ ಕಂಬದ ವ್ಯಾಸ 16ಅಡಿ. ನೆಲಂದ ಅದರ ಎತ್ತರ 23ಅಡಿ 8ಇಂಚ್. ಇದರ ಕಬ್ಬಿಣ ನೂರಕ್ಕೆ 99.97ರಷ್ಟ್ ಉತ್ತಮ ಮಟ್ಟದ್ ಗಡ. ಇದ್ ಒಂದುವರೆ ಸಾವಿರದಷ್ಟ್ ಹಳೆ ಕಾಲದಾಗಿದ್ದ್ ಶತಮಾನಗಳೇ ಕಳ್ದರೂ ಆಲೋಹಕ್ಕೆ ಇನ್ನೂ ತುಕ್ಕು ಹಿಡ್ತ್‌ಲೆ. ಇಷ್ಟ್ ಕಾಲಲಿ ಚಳಿ, ಮಳೆ, ಬಿಸಿಲಾಗಲಿ ಯಾವುದೂ ಅದರ ರೂಪನ ಕೆಡ್ಸಿಕೆ ಆತ್ಲೆ. ಈಗಿನ ಕಾಲದ ಯಂತ್ರಸಲಕರಣೆಗಳಿಲ್ಲದ ಆ ಕಾಲಲಿ ಅದರ ಹೇಂಗೆ ತಂದ್ ನೆಟ್ಟನೊ ಎಲ್ಲ ಆಶ್ಚರ್ಯ ಆದೆ. ನಾವ್ ಅದರ ತಬ್ಬಿ ಹಿಡಿಯಕೆ ತಯಾರಿ ಮಾಡ್ದಕೋ? ಯತ್ನಿಸಿರೂ, ನಮ್ಮ ಎರಡೂ ಕೈ ಕೂಡ್ಸಿಕೆ ಆತ್ಲೆ. ಈ ಕಂಬದ ಮೇಲೆ ಗುಪ್ತ ವಂಶದ ಅರಸರ ಸಾಹಸದ ಬಗ್ಗೆ ಕೆತ್ತಿದ ಲಿಪಿಗ ಉಟ್ಟು. ಈ ಕಂಬ ಗುಪ್ತ ವಂಶದ ಅರಸ ಚಂದ್ರವರ್ಮಂದ್‌ಂತ ಹೇಳಿವೆ. ಈ ಕಂಬದ ಕೊಡಿಲಿ ನಮ್ಮ ಪುರಾಣಲಿ ಬರುವ ವಿಷ್ಣುವಿನ ವಾಹನ ಗರುಡನ ಮೂರ್ತಿ ಉಟ್ಟು. ಮತ್ತೆ ಇದ್ ಇರುದು ಕೂಡ ವಿಷ್ಣು ದೇವಸ್ತಾನದ ಎದ್‌ರ್ ಕಡೆ. ಇದನ್ನೆಲ್ಲಾ

ನೋಡಿಕಂಡ್ ಮುಂದೆ ನಾವ್ ಹೋದ್ದ್ ಲಕ್ಷ್ಮಿನಾರಾಯಣ ದೇವಸ್ತಾನ ನೋಡಿಕೆ.

ಲಕ್ಷ್ಮಿನಾರಾಯಣ ದೇವಸ್ತಾನ ಕಟ್ಟಿಸಿದ್ ನಮ್ಮ ದೇಶದ ಖ್ಯಾತ ಉದ್ಯಮಿ ಬಿರ್ಲಾ ಮನೆತನದವು. ಉತ್ತರ ಭಾರತಲಿ ಹಿಂದೂ ದೇವಸ್ತಾನಗ ಇರ್ದು ಇದೇ ಮನೆತನದವು ಕಟ್ಟಿಸಿದ್‌ಗಡ. ಹಿಂದಿನ ಹಿಂದೂ ದೇವಸ್ತಾನಗಳೆಲ್ಲಾ ಎಂದೊ ನೆಲಸಮ ಆಗುಟು. ಲಕ್ಷ್ಮಿ ದೇವತೆನ ಕೃಪೆ ಪಡ್ದ ಬಿರ್ಲಾದವುಕೆ ಇಂತ ದೇವಸ್ತಾನಗ ಕಟ್ಟುದು ದೊಡ್ಡ ಕೆಲಸ ಅಲ್ಲ. ಆದರೆ ಆ ಮನ್ಸ್ ಬಾತಲ್ಲ. ಅದ್ ದೊಡ್ಡದ್. ಲಕ್ಷಗಟ್ಟಲೆ ವ್ಯಯಿಸಿ ಕಟ್ಟಿದ ಈ ಮಂದಿರ ಬಾರಿ ಲಾಯ್ಕುಟ್ಟು. ದೇವಸ್ತಾನದ 'ಗರ್ಭಗೃಹ' ನವರಂಗ ಮಂಟಪಗಳ್‌ಂದ ಅಲಂಕರಿಸಿಯೊಳೊ. ದೇವಾಲಯದ ಬೇರೆ ಬೇರೆ ಶಿಕರಗ ಮೇಲೆದ್ದ್ ರಂಜಿಸಿದೆ. ಒಳ ಬಾಗದ ಗೋಡೆಗಳ ಮೇಲೆ ಹಿಂದೂ ಪುರಾಣದ ಚಿತ್ರಗಳ ಕೆತ್ತಿಯೊಳೊ. ಇನ್ನ್ ಕೆಲವು ಕಡೆ ಬಣ್ಣಂದ ಚಿತ್ರಿಸಿಯೊಳೊ. ದೇವಸ್ತಾನ ದ ಮುಖ್ಯ ಪ್ರತಿಮೆ ಲಕ್ಷ್ಮಿನಾರಾಯಣರ ವಿಗ್ರಹ ಹಾಲುಗಲ್ಲಿಂದ ಮಾಡ್ದ್. ನೋಡಿಕಾಕನ ಬಾವ ತನ್ಮಯತೆ ಹುಟ್ಟಿದೆ.

ದೇವಸ್ತಾನದ ಒಂದು ಮಗ್ಗುಲು ಯಾತ್ರಿಕರಿಗಾಗಿ ವಸತಿ ಗೃಹ ಉಟ್ಟು. ಇನ್ನೊಂದು ಕಡೆ ಅವೇ ಕಟ್ಟಿಸಿದ ಬೌದ್ಧ ದೇವಾಲಯ ಉಟ್ಟು. ಹಿಂಬಾಗಲಿ ವಿಶಾಲ ಹೂತೋಟ, ಅದಕ್ಕೂ ಹಿಂದೆ ಕಾಡಿನ ವಿಶಾಲ ತಪ್ಪಲು, ಉದ್ಯಾನವನಲಿ ಕೃತಕ ಕೊಳ, ಕಾರಂಜಿ, ಹಸಿರು, ಮರ, ಗಿಡ, ಕಲ್ಲಿಂದ ಕೆತ್ತಿ ಮಾಡ್ದ ನಾನಾ ಪ್ರಾಣಿ ಪಕ್ಷಿಗಳ ಮೂರ್ತಿಗ ಅಲ್ಲಿನ ಆಕರ್ಷಣೆಗೆ ಮೆರುಗು ಕೊಟ್ಟಿದೆ.

ನಾವು ಬಿರ್ಲಾ ಮಂದಿರ ಮುಟ್ಟಿಕಾಕನ ಹಿಂಬೊತ್ತಾಗಿತ್ತ್. ತುಂಬಾ ಜನ ದೇವರ ದರ್ಶನಕ್ಕೆ ಬರ್ತಿದ್ದೊ. ನಾವ್ ಮುಖ್ಯ ಮಂದಿರದೊಳಗೆ ಹೋಕನ ಭಜನೆ ಜೋರಾಗಿ ನಡಿತಿತ್ತ್. ನಾವ್ ದೇವರ ದರ್ಶನ ಮಾಡಿ ಒಂದಿಷ್ಟ್ ಹೊತ್ತು ಕುದ್ದ್, ಕಣ್ಮುಚ್ಚಿ ನಮ್ಮಿಬ್ಬರಿಗೆ ದೇವರ ಕರುಣೆ ಬೇಡಿಕಂಡ್, ನಮ್ಮ ಪ್ರವಾಸದ ಯಶಸ್ಸಿಗೂ ಬೇಡಿಕಂಡ್ ಹಿಂದೆ ಬಂದೆ. ಹಾಂಗೆ ಬಾಕನ ನಾರಾಯಣ ಸ್ವಾಮಿ ಹೇಳ್ದ ಮಾತ್ ಮಾರ್ಮಿಕ ಆಗಿತ್ತ್. ನಾವೇಕೆ ದಿಲ್ಲಿಗೆ ಬಂದದ್‌ಯಾ? ಸತ್ತವರ ಮಸಣ ನೋಡಿಕೆನೊ? ಅಷ್ಟೊಂದು ಪ್ರಾಚೀನತೆಯ ಉನ್ನತಿ, ಹಿನ್ನೆಲೆ ಇರುವ ನಗರ ಗೋರಿಗಳ ನಗರಾಗಿ ಹೋತಲ್ಲ. ಎಂತ ದುರವಸ್ತೆ ಆಗಿ ಹೋತ್! ನಮ್ಮ ಪುಣ್ಯಕ್ಕೆ ಬಿರ್ಲಾದವು ಇಂತ ದೇವಸ್ತಾನ ಕಟ್ಟಿಸಿ ಒಳ್ಳೆ ಕೆಲ್ಸ ಮಾಡ್ದೊ. ನಂಗೂ ಹಾಂಗೆನೇ ಅನಿಸಿತ್ತ್. ರಾಜಾ ಪುರೂರವನಂತ ದೊರೆ, ಚಂದ್ರಗುಪ್ತ, ಅಶೋಕರಂತ ಮೌರ್ಯ ಅರಸರ್, ರಾಣಾ ಪ್ರತಾಪ, ಪ್ರಥ್ವಿ ರಾಜರಂತ ರಜಪೂತ ವೀರರ್, ಸಮುದ್ರಗುಪ್ತ, ಚಂದ್ರಗುಪ್ತ ರಂತ ವೀರರ್,

ಹರ್ಷನಂತ ರಾಜ, ಶಿವಾಜಿ ಮಹಾರಾಜನಂತ ದೇಶಪ್ರೇಮಿಗ, ಕೃಷ್ಣದೇವರಾಯನಂತ ಅರಸರಾಳಿದ ಈ ನೆಲಕ್ಕೆ ಈ ದುರ್ದಸೆ ಯಾಕೆ ಬಾತ್? ಶೂರತನಕ್ಕೆ, ತಾಕತ್ತಿಗೆ, ಇನ್ನ್ ಮೇದಾಶಕ್ತಿಗೆ ಕೊರತೆ ಇತ್ತೊ? ಯಾವ್ದೂ ಇತ್ಲೆ. ಮತ್ತೇನ್ ಪರಸ್ಪರ ದ್ವೇಷ, ದ್ವೇಷ, ಮತ್ಸರ, ಮತ್ಸರ, ಮತ್ಸರ ! ಕೊಡಲಿನ ಕಾವು ಮರದ ಬುಡಕ್ಕೆ ಕೇಡಾತ್ !

ಇಂದಿನ ಕಾರ್ಯಕ್ರಮ ಮುಗ್ಸಿ ನಾವ್ ಉಳ್ಕಂಡ ರೈಲ್ವೆ ಮಂದಿರಕ್ಕೆ ಬಂದಾಕನ ನಮ್ಮನ್ನೆಲ್ಲ ರಾತ್ರಿಯ ಊಟಕ್ಕೆ ಕರ್ಕಂಡ್ ಹೋಕುಂತೇಳಿ ಕೊಡಗಿನ ಮಹನೀಯರೊಬ್ಬ ಬಂದಿದ್ದೊ. ಅವು ನಮ್ಮ ಮಿೂರ ಮೇಡಮ್ನವರ ನೆಂಟ್ರ್ ಆಗಿದ್ದೊ. ನಾವು ಬೇಗ ಬೇಗ ಮಿೂದ್‌ಕಂಡ್ ಬಟ್ಟೆ ಬದಲಾಯ್ಸಿ ಅವರಲ್ಲಿಗೆ ಹೋದೊ. ನಂಗೆ ಹಿಂದಿನ ವರ್ಷ ಹೈದ್ರಾಬಾದಿಲಿ ಮತ್ತು ಪೂನಲಿ ಏರ್ಪಡಿಸಿದ ಔತಣಕೂಟ ನೆಂಪಾಗಿ ಬಾಯ್ಲಿ ನೀರ್‌ರೂರಿತ್. ಇಲ್ಲಿನೂ ಏನೇನೂ ಕಡಿಮೆ ಇತ್ಲೆ. ಕೊಡಗಿನವು ಎಲ್ಲಿದ್ದರೂ ಸರಿನೆ. ಆದರಾತಿತ್ಯಕ್ಕೆ ಹಿಂದುಳಿಯೊವಲ್ಲ. ಕೊಡಗಿನ ತುಂಬಾ ಜನ ಸೇರಿದ್ದೊ. ಅವು ನಮ್ಮನ್ನೆಲ್ಲ ಮಾತಾಡ್ಸಿ ಉಣಬಡಿಸಿದ ಊಟ ಮರೆಯುವ ಹಾಂಗಿಲ್ಲೆ. ಸುತ್ತಿ ಸುತ್ತಿ ಸುಸ್ತಾದ ನಾವ್ಗೆ ಊಟ ಲಾಯ್ಕಾಗಿ ಹಿಡಿಸಿತ್ತ್. ತಿರ್ಗಿ ಬಂದ್ ಮಲ್ಗಿದ್ದ ನಾವ್ಗೆ ರಾತ್ರಿ ಕಳ್ದದೇ ಗೊತ್ತಾತ್ಲೆ.

ಮರುದಿನ ಬೊಳ್ಪಿಗೆ ಬೇಗ ಎದ್ದ್ ಕಾಫಿ ತಿಂಡಿ ಎಲ್ಲ ಮುಗ್ಸಿಕಂಡ್ 'ಆಲ್ ಇಂಡಿಯಾ ರೇಡಿಯೊ ಬ್ರಾಡ್ ಕಾಸ್ಟಿಂಗ್ ಹೌಸ್' ನೋಡ್ದೊ. ಕೊಡಗಿನವು ಒಬ್ಬ ಅಲ್ಲಿ ಉದ್ಯೋಗಿಯಾಗಿದ್ದ್‌ದ್ ನಾವ್ಗೆ ಅನುಕೂಲ ಆತ್. ಇದ್ ನಾನ್ ನೊಡ್ದ ಸುರೂನ ಆಕಾಶವಾಣಿ ಕೇಂದ್ರ. ಕಾರ್ಯಕ್ರಮಗಳ ರೆಕಾರ್ಡಿಂಗ್ ಮಾಡುವ ಕ್ರಮ, ಅದರ ಪ್ರಸಾರ ಮಾಡುವ ರೀತಿ ಎಲ್ಲ ತಿಳ್ಕಂಡ್ ಇಂಡಿಯಾ ಗೇಟ್, ಪಾರ್ಲಿಮೆಂಟ್ ಬವನ, ರಾಷ್ಟ್ರಪತಿ ಭವನ ಇನ್ನೊಮ್ಮೆ ದೂರಂದ ನೋಡಿಕಂಡ್ 'ಜಂತರ್ ಮಂತರ್' ವೀಕ್ಷಣೆಗೆ ಆ ಕಡೆ ಹೋದೊ. ಇದ್ ಇರ್ದು ಪಾರ್ಲಿಮೆಂಟ್ ಬವನದ ಮಾರ್ಗದ ಪಕ್ಕಲಿ. ಇದರ ಹೆಸ್ರ್ ಹೇಳಿಕಾಕನ ಇದೆಂತದ್‌ಂತ ಆಶ್ಚರ್ಯ ಆದು. ಇದ್ ಖಗೋಳ ವಿಜ್ಞಾನಕ್ಕೆ ಸಂಬಂದಿಸಿದ್. ಕ್ರಿ.ಶ. 1725ಲ್ಲಿ ಜಯಪುರದ ಮಹಾರಾಜ ಜಯಸಿಂಹ ಎಂಬವ ನಿರ್ಮಿಸಿದ್. ಅಂವ ಅಂವನ ಕಾಲಲಿ ಜಗತ್ತಿಲೇ ಹೆಸರಾಂತ ಖಗೋಳ ವಿಜ್ಞಾನಿಗಳಲ್ಲಿ ಒಬ್ಬನಾಗಿತ್ತ್ ಗಡ. ಇದರ ನೋಡಿಕೆ ತುಂಬಾ ಕುತೂಹಲದಾಯಕಾಗಿ ಉಟ್ಟು. ಸೂರ್ಯ, ಸೂರ್ಯನ ಸುತ್ತು ಹಾಕುವ ಬೂಮಿ ಇತರ ಗ್ರಹಗ, ಚಂದ್ರನಂತ ಉಪಗ್ರಹಗಳ ಚಲನ ವಲನಗಳ ಅಳಿಯಕೆ ಇಂದಿನ ವೈಜ್ಞಾನಿಕ ಉಪಕರಣಗ ಇಲ್ಲದ ಆ ಕಾಲಲಿ ಅದರ ತಿಳಿಯಕೆ ಮಾಡ್ದ ಒಂದು ವ್ಯವಸ್ಥೆ. ಈಗ ಇದರ ಉಪಯೋಗ ಇಲ್ಲದಿರುದು ಆದರೆ ಹಿಂದೆ ಅದೊಂದು ದೊಡ್ಡ ಸಾಧನೆ.

ಜಯಪುರಲಿ ರಾಜ ಜಯಸಿಂಹ ನಿರ್ಮಿಸಿದ ಇದಕ್ಕಿಂತ ದೊಡ್ಡ ವ್ಯವಸ್ತೆ ಉಟ್ಟುಗಡ ನಾವ್ ಹೇಂಗೂ ದಿಲ್ಲಿಂದ ಮುಂದೆ ಜಯಪುರಕ್ಕೆ ಹೋಕೆ ಉಟ್ಟು. ಆಗ ಅಲ್ಲಿ ಇನ್ನೊಮ್ಮೆ ನೋಡಿ ತಿಳ್ಕಂಬ ಅವಕಾಶ ಉಟ್ಟಲ್ಲಂತೇಳುವ ಸಮಾದಾನಲಿ ಚಾಂದಿನಿ ಚೌಕ ಬಜಾರ್ ನೋಡಿಕಂಡ್ ಹೋದೊ.

ಚಾಂದಿನಿ ಚೌಕ ಬಜಾರ್ ಬಾರಿ ದೊಡ್ಡ ವ್ಯಾಪಾರ ಕೇಂದ್ರ. ಅಲ್ಲಿ ಏನುಟ್ಟು ಏನಿಲ್ಲೆಂತೇಳುವ ಹಾಂಗಿಲ್ಲೆ. ಇಲ್ಲಿ ವ್ಯಾಪಾರ ಮಾಡುವ ಗಿರಾಕಿಗ ತುಂಬಾ ಬುದ್ಧಿವಂತರಾಗಿರೊಕು. ಇಲ್ಲದಿದ್ದರೆ ಟೊಪ್ಪಿ ಕಾಕ್ಸಿಕಂಡ್ ಬರೋಕಾದು. ಇಲ್ಲಿ ನಾವೆಲ್ಲ ನೋಡ್ದೆ. ಹೊರ್ತು ಏನೂ ತಕಂಬಕೆ ಹೋತ್ಲೆ. ಈ ಬಜಾರ್ ಕೆಂಪುಕೋಟೆಂದ ಪತೇಪುರ ಮಸೀದಿವರೇಗೆ ಸುಮಾರ್ ಒಂದು ಮೈಲ್ ಉದ್ದಕ್ಕೆ ಉಟ್ಟು. ಹಿಂದೆ ಯಮುನಾ ನದಿಯ ಒಂದು ಕಾಲುವೆ ಈ ಬಜಾರಿನ ನಡೂಲಿ ಹರಿತಿತ್ತ್ ಗಡ. ಈಗ ಅದರ ಮುಚ್ಚಿಯೊಳೊ. (1910). ಈ ಪ್ರದೇಶ ಕೆಲವು ಸಿಂಹಿ ಕಂಹಿ ಚಾರಿತ್ರಿಕ ಗಟನೆಗಳಿಂದಾಗಿ ಚರಿತ್ರೆಲಿ ಹೆಸ್ರಿಗೆ ಬಂದುಟು. ಮೊಗಲ್ ಚಕ್ರವರ್ತಿ ಷಹಾಜ–ಹಾನ್ ಇಲ್ಲಿ ಒಂದು ವೈಭವದ ಮೆರವಣಿಗೆ ಏರ್ಪಡಿಸಿದ್; ರಾಜಕುಮಾರ ಶಹಜಹಾನನ ಮಂಜ ದಾರಾಶಿಕೆಲೀನ ಅವನ ತಮ್ಮ ಔರಂಗಜೇಬನ ಆಜ್ಞೆ ಮೇರೆಗೆ ಕೈದಿಯಾಗಿ ಮೆರವಣಿಗೆ ಮಾಡ್ಸಿದ್ ಇಲ್ಲಿನೆ. ನಾದಿರ್ ಶಹಾ ಎಂಬ ದಾಳಿಗಾರ ಇಲ್ಲಿಂದಲೇ ದಿಲ್ಲಿ ನಾಗರಿಕರ ಹತ್ಯಾಕಾಂಡಕ್ಕೆ ಆಜ್ಞಾಪಿಸಿದ್. ಮಾರಾಟ ನಾಯಕ ಮಾದವ ರಾವ್ ಸಿಂದಿಯಾ, ರೋಹಿಲ್ಲಾದ ಸಾಹಸಿ ಗುಲಾಮ್ ಖಾದಿರ್ ದಿಲ್ಲಿ ಅರಸರ ಸೋಲಿಸಿ ಜಯಗೋಷ ಮಾಡ್ದ್ ಸಹ ಇಲ್ಲಿಂದಲೆ.

ನಮ್ಮ ದಿಲ್ಲಿ ಕಾರ್ಯಕ್ರಮ ಇಲ್ಲಿಗೆ ಮುಗ್ದ ಹಾಂಗೆ ಆತ್. ನಾವ್ ಇಂದೇ ರಾತ್ರಿ 8–30ರ ದಿಲ್ಲಿ ಜಯಪುರ ಗಾಡಿಲಿ ಜಯಪುರಕ್ಕೆ ಹೊರ್ಡಿಕೆ ತಯಾರಿ ಮಾಡಿಂತ ಪ್ರೊಫೆಸರ್ ಹೇಳ್ದೊ. ನಾವ್ ಪೂರ್ವ ತಯಾರಿ ಮಾಡದ ಕಾರಣ ನಮ್ಮ ಪ್ರಧಾನ ಮಂತ್ರಿ ನೆಹರೂರವರ್ನ ಮತ್ತು ಜನರಲ್ ತಿಮ್ಮಯ್ಯನವರ ಕಾಂಬಕೆ ಆತ್ಲೆ. ನೆಹರೂರವರ್ನ ಅಂದ್ ಮಡಿಕೇರಿಗೆ ಬಂದಿರ್‌ಕಾಕನ ನೋಡ್ದ್ ನಿಂಗೆ ಗೊತ್ತುಟು. ಜನರಲ್ಲ್ ತಿಮ್ಮಯ್ಯನವು ಕೊಡಗಿನವು. ಇನ್ನೊಮ್ಮೆ ಯಾಗಾರ್ ನೋಡಕ್. ಅಂತೂ ಇಂದ್ ರಾತ್ರಿನೇ ನಮ್ಮ ರಾಜಧಾನಿಗೆ ದೊಡ್ಡ ನಮಸ್ಕಾರ ಹೇಳಿ ಹೊರ್ಟವೆ. ಜಯಪುರದ ಬೆಡಗಿನ ಬಗ್ಗೆ ನನ್ನ ಮುಂದಿನ ಪತ್ರಕ್ಕೆ ಕಾಯ್ತಾ ಇರ್.

ಇಂತೀ ನಿನ್ನ ಗೆಳೆಯ

ಜಯಪುರ
11–10–1959

ಗೆಳೆತಿ ಮಾಲಿನಿಗೆ,

ನಾವೀಗ ಬೆಡಗಿನ ಜಯಪುರಲಿ ಒಳೊ. ರಾಜಸ್ತಾನದ ಪ್ರಮುಖ ನಗರಗಳಲ್ಲಿ ಇದೂ ಒಂದು. ರಾಜಸ್ತಾನ ಕೆಚ್ಚೆದೆಯ ವೀರ ರಜಪೂತರ್ ಮೆರ್ದ ನಾಡ್ ಇದ್. ಯಾವ ವೀರರ ಸಾಹಸದ ಚರಿತ್ರೆನ ಓದಿಕಾಕನ ಮೈ ಜುಮ್ಮ್‌ಂತೇಳುವ ರಣ ಪರಾಕ್ರಮಿಗಳ ನೆಲಲಿ ಒಳೊ. ತ್ಯಾಗಕ್ಕೆ, ವೀರತೆಗೆ, ಪ್ರೇಮಕ್ಕೆ ಹೆಸರಾದ ಈ ರಾಜ್ಯಂದ ನಿಂಗೆ ಪತ್ರ ಬರೆಯಕೆ ನಂಗಾಗುತ್ತಿರುವ ಸಂತೋಷ ಅಷ್ಟಿಷ್ಟಲ್ಲ.

ನಾನ್ ಹೈಸ್ಕೂಲ್‌ಲಿ ಓದ್‌ತಿರ್‌ಕನ ಗಳಗನಾಥರ್ ರಜಪೂತರ ಬಗ್ಗೆ ಮತ್ತು ಮಾರಾಟದ ಬಗ್ಗೆ ಬರ್ದ ಚಾರಿತ್ರಿಕ ಕಾದಂಬರಿಗಳ ಪೂರ್ತಿ ಓದಿದ್ದೆ. ಆ ಕತೆಗ ಈಗ ನೆನ್ಪಾಗುತಾ ಉಟ್ಟು. ಅವರಲ್ಲಿ ಸ್ವದೇಶ ಪ್ರೇಮಕ್ಕೆ, ಸ್ವಾಭಿಮಾನಕ್ಕೆ, ಶೌರ್ಯ ಸಾಹಸಕ್ಕೆ ಕೊರತೆ ಇತ್ಲೆ. ಆದರೇನ್ ಅವರ ಮತ್ಸರ ಮತ್ತು ಒಗ್ಗಟ್ಟಿನ ಮಂತ್ರದ ಕೊರತೆ ಎಲ್ಲ ಬಣ್ಣ ಮಸಿ ನುಂಗಿತ್‌ಂತೇಳುವ ಹಾಂಗೆ ಸರ್ವನಾಶಕ್ಕೆ ಕಾರಣ ಆತ್. ಅಲ್ಲದಿದ್ದರೆ ಮುಸಲ್ಮಾನರ್ ರಾಜ್ಯ ಸ್ಥಾಪನೆ ಮಾಡ್ದು ಹೋಗಲಿ, ಇಲ್ಲಿ ಪಾಶ್ಚಿಮಾತ್ಯರ್ ದಬ್ಬಾಳಿಕೆ ಮಾಡಿಕೆ ಸಹಾ ಅವಕಾಶ ಇರ್‌ತಿತ್ಲೆ.

ಈ ನೆಲ ಮರುಬೂಮಿ ಆಗಿರುದು. ಆದರೆ ಇಲ್ಲಿನ ಜನ ಅನಬವಿಸಿದ ಜೀವನಾನಂದ ಅದೇನ್ ಕಡಿಮೆನೊ. ಇಲ್ಲಿನ ಕೋಟೆ ಕೊತ್ತಲಗಳ ವೈಭವ ಕಾಂಬಕಾಕನ ಇನ್ನ್ ಶಿಲ್ಪ ಸೌಂದರ್ಯ, ಜನರ ಉಡಿಗೆ ತೊಡುಗೆ, ಕಲೆಗಾರಿಕೆ, ಹಾಡ್ ಕುಣಿತ ನೋಡಿಕಾಕನ ಇವು ಯಾರಿಗೂ ಕಡಿಮೆ ಅಲ್ಲಂತ ಅನ್ಸಿದೆ. ಇಲ್ಲಿ ಆಳಿದ ವೀರರ ಸಾಹಸ ಶೌರ್ಯಕ್ಕೆ, ತ್ಯಾಗಕ್ಕೆ, ಧೈರ್ಯಕ್ಕೆ ಕೊರತೆ ಉಟ್ಟೊ? ಇಲ್ಲಿ ಆಳಿದ ರಾಜರ್‌ಗ ಎಷ್ಟೊ? ರಾಣರ್‌ಗ ಎಷ್ಟೊ? ಠಾಕೂರರೆಷ್ಟೊ? ಇಲ್ಲಿನ ಕತೆಗಳೆ ವೀರರ ಕತೆ, ಸಾಹಸಗಳ ಕತೆ. ಇಲ್ಲಿನ ಕ್ಷತ್ರಿಯ ವೀರರ್ ಸ್ವಾತಂತ್ರ್ಯಕ್ಕಾಗಿ ಸ್ತ್ರೀಯರ ಪಾತಿವೃತ್ಯಕ್ಕಾಗಿ, ಗಂಡಸರ್ ಕಾಮಿನಿಯರಿಗಾಗಿ, ಕಾದಾಡಿದ ಕತೆ ಒಂದು ಕಡೆ ಆದರೆ ದಾಯಾದಿ ಮತ್ಸರ್‌ಂದ ಒಳಜಗಳ ಮಾಡಿಕಂಡ್ ತನ್ನ ತನನ ಕಳ್ಕಂಡ ಕತೆ ಇನ್ನೊಂದು ಕಡೆ ಒಂದು ಕಡೆ ಸಂತೋಷ ತಂದರೆ ಮತ್ತೊಂದು ಕಡೆ ದುಃಖ ಕೊಟ್ಟದೆ. ಅವು ಮಾಡ್ದ ಯುದ್ದ ಮೆರೆದ ಶೌರ್ಯ, ಎಲ್ಲ ಅಸಾಮಾನ್ಯ. ಚರಿತ್ರೆಲಿ ಮೆರ್ದವು ಅವೆ ಮರೆಯಾದವು ಅವೆ. ಘಜನಿ ಮಹಮ್ಮದ್‌ನಂತ ಲೂಟಿ ಕೋರಂಗೆ ಅವಕಾಶ ಕೊಟ್ಟೊ. ಘೋರಿ ಮಹಮ್ಮದ್‌ನಂತ ಮಾರಿನ ಕರ್ಸಿದವು ಯಾರ್? ಮಗಳ್ ವಿದವೆಯಾದರೂ ಚಿಂತೆ ಇಲ್ಲೆ ಅಳಿಯ ಸತ್ತೇ ಸಾಯುಕುಂತ, ಪಿತೂರಿ

ಹೂಡಿ ಕಡೆಗೆ ನಾಶ ಆದ ಜಯಚಂದನಂತವರ ನೆನ್ನಿಕಾಕನ ದುಃಖ ಆವರ್ರಿ ಬಂದದೆ. ಉಸಿರ್‌ನಿಂತಾಂಗೆ ಆದೆ. ಈಗ ಅವೆಲ್ಲಾ ಹೆಸ್ರಿಗೆ ಮಾತ್ರ ಒಳೊ ಅಷ್ಟೆ. ನಾವ್ ಜಯಪುರ ತಲ್ಪಿದ್ ನಿನ್ನೆ ಬೊಳ್ಪಿಗೆ ಅಂದಾಜ್ 8–30ಕ್ಕ್. ನಾವ್ಗೆ ಕಾದಿರಿಸಿದ ಬೋಗಿ ಇದ್ದದರ್‌ಂದ ಆರಾಮಾಗಿ ಪ್ರಯಾಣ ಸಾಗಿತ್‌ಂತ ಹೇಳಕ್. ನಾವ್ ಬಂದ್ ಇಳೆಕಾಕನ ಜಯಪುರಲಿರುವ ಕೊಡವ ದಂಪತಿಗ ನಮ್ಮ ಕಾಯ್ತಾ ಇದ್ದೊ. ಅವು ಕೂಡ ನಮ್ಮ ಮಿೂರ ಮೇಡಮ್ಮ್‌ನ ನೆಂಟ್ರ್. ದಿಲ್ಲಿಲಿ ನಮ್ಮ ಊಟಕ್ಕೆ ಕರ್‌ದೊವು ಕೂಡ ಅವರ ನೆಂಟ್ರೇ ಆಗಿದ್ದೊ. ಜಯಪುರಲಿ ಸುತ್ತಾಡಿಕೆ ಬಸ್ಸ್, ಉಳ್ಕಂಕೆ ಸರಕಾರಿ ಹಾಸ್ಟೇಲ್ ಎಲ್ಲ ಏರ್ಪಾಡ್ ಅವೇ ಮಾಡಿದ್ದೊ. ನಾವ್ ಯಾವ್ದೇ ತೊಂದರೆ ಇಲ್ಲದೆ ಅಲ್ಲಿಗೆ ಹೋಗಿ ಇಳ್ದ್ ಸ್ನಾನ, ಉಪಹಾರ ಎಲ್ಲ ಬೇಗ ಮುಗ್ಸಿಕಂಡ್ ಜಯಪುರನ ಪರಿಚಯ ಮಾಡಿಕಂಬಕೆ ಹೊಸ ಹುರ್ಪುಂದ ಹೊರ್‌ಟ್ಟೊ.

ರಜಪೂತರ ಬಗ್ಗೆ ಒಂದಿಷ್ಟ್ ಗೊತ್ತಿರೊವುಕೆ ಅವರ ಹೆಸ್ರ್, ರಾಜಸ್ತಾನದ ಬಗ್ಗೆ ಕೇಳಿಕಾಕನ ವಿದ್ಯುತ್ ಹರ್ದ ಅನುಬವ ಆಗಿ ರೋಮಾಂಚನ ಆದು ಸಹಜ. ಅದ್ಕೆ ಅವು ತೋರ್ದ ಶೌರ್ಯ, ಸಾಹಸಗ ದೇಶಪ್ರೇಮವೆ ಕಾರಣಾಂತೇಳಕ್. ಇಲ್ಲಿನ ಅರಮನೆ, ಇಲ್ಲಿನ ಕೋಟೆ ಕೊತ್ತಲಗ, ಮರುಬೂಮಿ, ಜೀವನಕ್ರಮ, ಸಂಪ್ರದಾಯ, ವೇಷ ಬೂಷಣ, ವೀರರ ಜೀವನ ಗಾತೆ, ಸಾರುವಲಾವಣಿ, ನಮ್ಮನ್ನ್ ಕೊಡಿ ಕಾಲ್‌ಲಿ ನಿಲ್ಲುವಾಂಗೆ ಮಾಡ್ದೆ. ಅರಾವಳಿ ಪರ್ವತ ಇಲ್ಲಿನೆ ಇರುದು. ಈ ಬೆಟ್ಟ ರಾಜ್ಯನ ಎರ್ಡ್ ಪಾಲಾಗಿ ಮಾಡ್ದೆ. ಇದರ ವಾಯುವ್ಯ ಪ್ರದೇಶ, ಬಹು ಮಟ್ಟಿಗೆ ಮರುಬೂಮಿ. ಆಗ್ನೇಯ ಪ್ರದೇಶ, ವಿಸ್ತಾರ ಆಗಿರುವ ಬಯಲು ಪ್ರದೇಶ, ಪಲತ್ತಾದ ಪೀಠಬೂಮಿ, ಗುಡ್ಡ–ಬೆಟ್ಟ ಹಾಂಗೂ ದಟ್ಟವಾದ ಕಾಡ್‌ಗಳ್‌ಂದ ಕೂಡಿಟು. ಇಲ್ಲಿ ಎರ್ಡ್ ಹಳ್ಳಗ ಹರ್ದವೆ. ಒಂದು ಚಂಬಲ್ ನದಿ. ಇನ್ನೊಂದು ಅದರ ಉಪನದಿ ಬಾಣಾನ್. ಇವು ಇಲ್ಲಿನ ಎರ್ಡ್ ದೊಡ್ಡ ಹಳ್ಳಗ.

ರಾಜಸ್ತಾನದ ಹೆಚ್ಚಿನ ಜನರ್ ವಾಸಿಸುದು ಹಳ್ಳಿಗಳ್ಲಿ. ನಾನಾ ತರದ ಜನಗ ಇಲ್ಲಿ ಒಳೊ. ಭಿಲ್ಲರ್ ಮತ್ತು ಮಿೂನರ್‌ಂತೇಳವು ಇಲ್ಲಿನ ಆದಿವಾಸಿ ಜನಗ. ರಜಪೂತ ವರ್ಗದೊವು ಈ ನಾಡ್‌ನ ಗೆದ್ದ್‌ಕಂಡ ಮೇಲೆ ಇದ್ ರಾಜಸ್ತಾನ ಅಂತ ಆತ್‌ತ ಹೇಳ್ವೆ ರಜಪೂತರ್ ಹುಟ್ಟಿಂದ ಯೋದರ್, ಹೋರಾಟಗಾರರ್. ಇವು ರಾಮಾಯಣ, ಮಹಾಬಾರತ ಕಾಲದ ವೀರ ಕ್ಷತ್ರಿಯ ವಂಶದವುಂತ ಹೇಳಿಕಂಡವೆ.

ರಾಜಸ್ತಾನದ ಜೀವನವೇ ಒಂದು ಬಣ್ಣದ ಬದ್ಕ್. ಇಲ್ಲಿನ ಗಂಡ್ಸರ್ ಮತ್ತು ಹೆಂಗ್ಸರ್ ಉಡುವ ನಾನಾ ತರದ ಬಣ್ಣದ ಉಡುಗೆ ತೊಡುಗೆಗಳ್ಲಿ ರಜಪೂತರ

ಜೀವನೋತ್ಸಾಹ ಕಂಡ್‌ಬಂದದೆ. ಗಂಡ್ಸರ್ ದೋತಿ ಹಾಗೂ ಉದ್ದ ಕೈ ಇರುವ ಬಿಗಿಯಾದ ಗುಂಡಿ ಇಲ್ಲದ ಅಂಗಿ 'ಬಂದಿಯಾ ಅಂಗಾರಕ', ತಲೆಗೆ ಪೋಲೆಯ ಎಂಬ ಮುಂಡಾಸ್ ದರ್ಸ್‌ವೆ. ಇವರ ಮುಂಡಾಸ್ ತಲೆಗಿಂತ ದೊಡ್ಡದ್. ವಿಶೇಷ ದಿನಗಳ್ಲಿ ರಜಪೂತ ವೀರರ್ ಬಿಗಿಯಾದ ಚೂಡಿದಾರ, ಪಾಯಿ ಜಾಮಾ, ಕುಡ್ತಾ ಮತ್ತು ಆಚ್‌ಕನ್ ಯಾ ನಿಲುವಂಗಿ ಹಾಕಿಕಂಡವೆ. ಅದರೊಂದಿಗೆ ಪೋಲೆಯದ ಬದಲಿಗೆ ಪಾಗ ಅಥವಾ ಪಗಡಿಂತೇಳುವ 18ಗಜ ಉದ್ದದ ಮುಂಡಾಸ್‌ನ ಸುತ್ತಿಕಂಡವೆ. ಹೆಂಗ್ಸರ್ ಸುಮಾರ್ ನಲುವತ್ತ್ ಗಜ ಅಂದರೆ 120ಅಡಿ ಉದ್ದದ ಗಾಗ್ರ ಎಂಬ ಲಂಗ ಹಾಂಗೂ ಕಂಚಲಿ ಎಂಬ ರವಿಕೆ ಮತ್ತು ಒರ್ನಿ ಎಂಬ ಏಳುವರೆ ಅಡಿ ಉದ್ದದ ಬಟ್ಟೆ ಹಾಕಿಕಂಡವೆ. ಅವು ಹಾಕಿಕಂಬ ಆಬರಣ ನಾಜೂಕಾಗಿ ರಚನೆ ಆದ್. ಮದುವೆಯಾದ ಹೆಂಗ್ಸರ್ ಬಿಳಿ ಬಣ್ಣದ ಇಲ್ಲದಿದ್ದರೆ ನಸು ಕೆಂಪಿನ ಬಳೆಗಳ ಹಾಕಿಕಂಬೊದು ಸಂಪ್ರದಾಯ. ಇಲ್ಲಿನ ಕಲೆ, ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಕೈಗಾರಿಕೆ ಎಲ್ಲ ಶ್ರೀಮಂತಿಕೆಂದ ಕೂಡಿರುದು ವಿಶೇಷಂತೇಳಕ್.

ಜಯಪುರ ಸುತ್ತಾಡಿ ಬಂದ ಮೇಲೆ ಇದ್ ದೇಶದ ಅತ್ಯಂತ ಸುಂದರ ಪಟ್ಟಣಗಳಲಿ ಒಂದುಂತೇಳ್ದು. ಸತ್ಯಂತ ಗೊತ್ತಾತ್. ಈ ನಗರಕ್ಕೆ ಪಿಂಕ್ ಸಿಟಿ (Pink City) ಗುಲಾಬಿ ನಗರಂತಲೂ ಹೆಸ್ರುಟ್ಟು. ಇಡೀ ನಗರದ ಕಟ್ಟಡಗಳಿಗೆ ಗುಲಾಬಿ ಬಣ್ಣನೆ ಬಳ್ದದ್. ಮತ್ತೆ ಎಲ್ಲೆಲ್ಲೂ ಅದೇ ಬಣ್ಣ ಕಂಗೊಳಿಸುದ್, ಹಾಂಗೆ ಕರೆಕೆ ಕಾರಣ. ಈ ನಗರನ ಸವಾಯಿ ಜಯಸಿಂಗಂತೇಳವ 1699–1743ರ್ಲಿ ಕಟ್ಟಿದರ್‌ಂದ ಜಯಪುರಂತ ಹೆಸ್ರ್ ಬಾಕೆ ಕಾರಣ. ಇಂವ ರಾಜಕುಮಾರ, ಒಳ್ಳೆ ಯೋದ, ಗ್ರಹಶಾಸ್ತ್ರ ಪ್ರವೀಣ, ಕಟ್ಟಡ ನಿರ್ಮಾತೃ ಎಲ್ಲ ಆಗಿತ್ತ್ ಗಡ. ಆದರೆ ದುರ್ದೈವ ಅಂದರೆ ಇಂವ ಮುಗಲ್ ದೊರೆ ಔರಂಗಜೇಬನ ಬಲಗೈ ಬಂಟನೊ, ಸಹಾಯಕನೊ ಆಗಿದ್ದ್ ಹಲವಾರ್ ಯುದ್ಧಗಳ ಗೆದ್ದ್ ಕೊಟ್ಟದ್. ಇಂವ ಹದಿಮೂರನೆ ವಯಸ್ಸಿಲಿ ಪಟ್ಟಕ್ಕೆ ಬಂದದ್. ಆಗ ಅಂಬರಂತೇಳುವಲ್ಲಿ ರಾಜದಾನಿ ಇತ್ತ್. ಅದ್ ಬೆಟ್ಟದ ಮೇಲೆ ಇರುವ ಕೋಟೆ. ಇಂವ ರಾಜದಾನಿನ ಬಯಲ್‌ಸೀಮೆಗೆ ವರ್ಗಾಯ್ಸಿ ಹೊಸ ನಗರ ಕಟ್ಟಿಸಿದ್. ಇದನ್ನ್ ಅಂವ ಯುರೋಪಿನ ನಗರಗಳ ಯೋಜನೆಗಳ ಮಾದರಿಯಾಗಿ ಇಸಿಕಂಡ್ ಪ್ರಾಚೀನ ಹಿಂದೂ ಸೂತ್ರಗಳಿಗೆ ಹೊಂದಿಸಿ ನಿರ್ಮಿಸಿದ್.

ಈ ನಗರ ದಕ್ಷಿಣ ದಿಕ್ಕ್ ಬುಟ್ಟರೆ ಉಳಿದೆಲ್ಲಾ ಕಡೆಗಳ್ಲಿ ಬೆಟ್ಟಗ ಸುತ್ತುವರ್ದುಟು. ಹೆಚ್ಚಿನ ಬೆಟ್ಟಗಳ ಮೇಲೆ ಕೋಟೆ ಕೊತ್ತಲಗ ಉಟ್ಟು. ನಗರದ ಸುತ್ತಲೂ ಎಂಟ್ ದ್ವಾರಗಳಿರುವ ಬಲವಾದ ಗೋಡೆ ಉಟ್ಟು, ಆಯಾತಾಕಾರಲಿರುವ

ಈ ಆವರಣದ ಒಳಗೆ ಉತ್ತರ ದಕ್ಷಿಣವಾಗಿ ಮತ್ತು ಪೂರ್ವ ಪಶ್ಚಿಮವಾಗಿ ಮುಖ್ಯ ಮಾರ್ಗ ಉಟ್ಟು. ಈ ಮುಖ್ಯ ರಸ್ತೆಗೆ ಅಲ್ಲಲ್ಲಿ ಉಪಮಾರ್ಗ ರಚಿಸಿ ನಗರನ ಹಲವು ಬಾಗಗಳಾಗಿ ವಿಂಗಡಿಸಿಯೊಳೊ. ಮುಖ್ಯ ಮಾರ್ಗ ನೂರಹತ್ತ್ ಅಡಿಗಿಂತ ಅಗಲ ಇದ್ದರೆ ಉಪಮಾರ್ಗ ಐವತ್ತೈದ್ ಅಡಿ ಅಗಲ ಉಟ್ಟು. ರಸ್ತೆನ ಅಕ್ಕ ಪಕ್ಕಗಲ್ಲಿ ಕೆತ್ತನೆಯ ಕೆಲಸ ಮಾಡ್ದ ಕಿಟಕಿಗ ಇರುವ ಮನೆಗಳ ಕಾಣಕ್. ಈ ಮನೆಗಳ ಬಣ್ಣ ಸ ಗುಲಾಬಿ ಬಣ್ಣನೇ ಇದ್ದ್ ಹಿಂಬೊತ್ತು ಸೂರ್ಯನ ಹೊಂಬಿಸಿಲ್ ಬೀಳಿಕಾಕನ ಕಾಂಬ ದೃಶ್ಯ ತುಂಬಾ ಮೋಹಕ.

ನಾವ್ ಸುರೂಗೆ ನೋಡ್ದ್ ನಗರದ ಅರಮನೆ ಸಿಟಿ ಪ್ಯಾಲೆಸ್. ಸುತ್ತೊಳು ಗೋಡೆ ಇರುವ ನಗರದ ಅರಮನೆ ಇಡೀ ಪೇಟೆನ ಏಳನೇ ಒಂದು ಪಾಲ್ ಆದೆ ಗಡ. ಪಡುವ ಕಡೆಂದ ತ್ರಿಪೋಲಿಯಾ ಹೆಬ್ಬಾಗಿಲ್ ಮೂಲಕ ಮತ್ತು ಪೂರ್ವದ ಮುಖ್ಯ ದ್ವಾರ 'ಶಿರೇಕೀದಿಯೋರಿ ದ್ವಾರ'ನ ದಾಟಿ ಅರಮನೆ ಪ್ರವೇಶ ಮಾಡಕ್. ಅರಮನೆನ ಒಂದು ಬಾಗಲಿ ಮಹಾರಾಜರ ಸ್ವಂತ ನಿವಾಸ, ಕಚೇರಿ ಉಟ್ಟು. ಅರಮನೆನ ಆವರಣದ ಒಳಗೆ ಜಯಪುರದ ಹಿಂದಿನ ಅರಸರ್ ನಿರ್ಮಿಸಿದ ವಾಸ್ತು ರಚನೆ ಅಪರೂಪದ್‌ಂತ ಹೇಳಕ್. ಮುಬಾರಕ್ ಮಹಲಿನ ಹೊರಬಾಗಲಿ ಚಂದ್ರಕಾಂತ ಶಿಲೆನ ನಾಜೂಕಾದ ಕೆತ್ತನೆಗಳ ನೋಡಿಯೇ ಕುಸಿ ಪಡಕು. ಜಯಪುರ ಚಂದ್ರಕಾಂತ ಶಿಲೆಗೆ ಹೆಸ್ರ್ ಹೋದ ಸ್ತಳ. ಮಹಾರಾಜರ್ ಕಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ದರ್ಶನ ಕೊಡುವ ಪ್ರತ್ಯೇಕ ಸಬಾಂಗಣ ನೋಡಿಕೆ ಸಿಕ್ಕಿದೆ. ಸಾರ್ವಜನಿಕ ಸಬಾಂಗಣಲಿ ಮಹಾರಾಜರ್ ಸಂಗ್ರಹಿಸಿದ ಬೆಲೆ ಬಾಳುವ ತೈಲಚಿತ್ರಗ, ಕೈಬರಹದ ಪ್ರತಿಗಳ ಇಸಿಯೊಳೊ. ಅರಮನೆನ ಕೊಡಿಲಿರುವ ಮುಕುಟ ಮಂದಿರಲಿ ನಿಂತ್ ನೋಡಿರೆ ನಗರ ಮತ್ತು ನಗರದ ಸುತ್ತಲೂ ಇರುವ ಬೆಟ್ಟ ಗುಡ್ಡಗಳ ಸಾಲ್ ಮನಸೆಳ್ದದೆ. ಚಂದ್ರ ಮಹಲ್‌ನ ಒಳಗೆ 'ಸಿಲೇಖಾನ' ಯಾ ಶಸ್ತ್ರಾಸ್ತ್ರಗಳ ಸಂಗ್ರಹ ಉಟ್ಟು. ಇಲ್ಲಿ ಹಳೇ ಕಾಲದ ಮತ್ತು ಆಗಿನ ಕಾಲದ ಎರ್ಡ್ ಸಾವಿರಕ್ಕೂ ಮಿರಿದ ನಾನಾ ತರದ ಆಯುದಗಳ ಸಂಗ್ರಹ ಉಟ್ಟು. ಮಾಲಿನಿ, ಮಹಾರಾಜ ಮಾನ್‌ಸಿಂಗನ ಖಡ್ಗದ ತೂಕ ಎಷ್ಟ್‌ಂತ ಗೊತ್ತುಟ? ಹನ್ನೊಂದುವರೆ ಪೌಂಡ್. ಇವನೇ ಅಕ್ಬರನ ಪ್ರಖ್ಯಾತ ಜನರಲ್ ಆಗಿದ್ದ್ ಹಲವಾರ್ ಯುದ್ಧಗಳ ಗೆದ್ದ್ ಕೊಟ್ಟಂವ. ಇಲ್ಲಿ ಅರಸರ ಪೋಷಾಕ್‌ಗಳ ತೂಗಿ ಹಾಕಿಯೊಳೊ. ಅವರ ಮಹಾಕಾಯದ ಅಂಗಿಯೊಳಗೆ ನಮ್ಮಂತ ಎರ್ಡ್‌ಮೂರು ಜನ ಹಿಡಿವೊಂತ ಕಂಡದೆ. ಕೈ ತೋಳುನೂ ಹಾಂಗೆ. ಅವರ ಕಡ್ಗನ ನಾವ್ ಎರ್ಡ್ ಕೈ ಜೋಡ್ಸಿ ಹಿಡಿಯಕಾದೆ. ಕಬ್ಬಿಣದ ಶಿಸ್ತ್ರಾಣ ತೊಟ್ಟ್ ಎದೆ ಕೈಗಳಿಗೆ ಕಬ್ಬಿಣದ ಪಟ್ಟಿ ಕಟ್ಟಿ, ಆ ಖಡ್ಗಗಳ್ ಹಿಡ್ದ್

ಹೋರಾಡಿಕೆ ಆನೆ ಬಲವೇ ಬೇಕು. ಅದರ ಗ್ರಹಿಸಿಕಾಕನ ಆಶ್ಚರ್ಯ ಆದೆ. ಅಂತಹ ವೀರರ್ ನಮ್ಮಲ್ಲಿ ಇದ್ದೂ ಪರದಾಸ್ಯಕ್ಕೆ ತುತ್ತಾತಲ್ಲ! ಎಂತ ವಿಪರ್ಯಾಸ ನೋಡು.

ಜಯಪುರಲಿ ಮನಸೆಳೆದ ಅನೇಕ ನಿರ್ಮಾಣಗಳಲಿ ಇನ್ನೊಂದುಂತೇಳಿರೆ ಹವಾಮಹಲ್. ಹವಾಮಹಲ್‌ಂದರೆ ಗಾಳಿ ತಿಂಬ ಅರಮನೆ. ಇದ್ ಮುಖ್ಯ ರಸ್ತೆನ ಪಕ್ಕಲಿ ನಗರದ ನಡೂಲಿ ಉಟ್ಟು ಇದನ್ನ್ 1799ಲ್ಲಿ ಮಹಾರಾಜ ಸವಾಯಿ ಪ್ರತಾಪ ಸಿಂಹ ಕಟ್ಟಿಸಿದ್. ಪ್ರತಾಪ ಸಿಂಹ ಅಂದರೆ ಉದಯ ಸಿಂಹನ ಮಂಙ ರಾಣಾ ಪ್ರತಾಪ ಅಲ್ಲ. ಈ ವಿಶಾಲ ಕಟ್ಟಡಲಿ ವಾಸ್ತು ರಚನೆ ತುಂಬಿ ತುಳುಕಿದೆ. ಅದರ ಮುಂದುಗಡೆನ ರಸ್ತೆಲಿ ಉತ್ಸವಗಳ ಮೆರವಣಿಗೆ ಹೋಕಾಕನ ರಾಣಿ ವಾಸದೊವು ಇಲ್ಲಿಯೆ ಕುದ್ದ್ ನೋಡುತಿದ್ದದ್‌ಗಡ. ಪಡುವಣ ಗಾಳಿ ಬೀಸಿ ಬಂದ್ ತಂಪು ಹವೆ ಇಲ್ಲಿ ಇದ್ದದೆ. ಇದರ ಮುಂದುಗಡೆ ಹವಾಮಹಲ್

ಹವಾಮಹಲ್‌ನ ಮುಂದುಗಡೆ ಚಂದ್ರಾಮಹಲ್, ಅದರ ಉತ್ತರಕ್ಕೆ ಗೋವಿಂದರಾಜ ದೇವಸ್ತಾನ. ಸವಾಯಿ ಜಯಸಿಂಗ್ ಮಥುರಾಂದ ತಂದ ಶ್ರೀಕೃಷ್ಣನ ಮೂರ್ತಿ ಈ ದೇವಸ್ತಾನಲಿ ಉಟ್ಟುಗಡ. ಔರಂಗಜೇಬ ಮಥುರಾದ ಮೇಲೆ ದಾಳಿ ಮಾಡಿಕಾಕನ ಸವಾಯಿ ಜಯಸಿಂಗ ಆ ಮೂರ್ತಿನ ತಂದ್ ಇಸಿದ್‌ಂತ ಚರಿತ್ರಕಾರರ್ ಹೇಳಿವೆ.

ಜಲಮಹಲ್ ಕೂಡ ಇಲ್ಲೆ ಹತ್ರಲಿ ಉಟ್ಟು. ಇದ್ ಮಾನ್‌ಸಾಗರ್ ಸರೋವರದ ನಡೂಲಿ ಒಳದ್. ಇದ್ ನೀರ್‌ಲ್ಲಿ ತೇಲಿಕಂಡ್ ಇರುವ ಹಾಂಗೆ ಕಂಡದೆ. ಕಟ್ಟಡದ ಒಂದು ಅಂತಸ್ತ್ ನೀರಿನ ಅಡಿಲಿ ಮುಳ್ಗಿ ಹೋಗುಟುಗಡ. ಇದರ ನಿರ್ಮಾಣ ಆದ್ ಹದಿನೆಂಟನೇ ಶತಮಾನಲಿ. ಮೊದಲ ಮಾಧೊಸಿಂಗ್ ಎಂಬವಂದ. ಇದೆಲ್ಲ ನೋಡಿ ನಾವ್ ಮಧ್ಯಾಹ್ನದ ಊಟಕ್ಕೆ ಹೋದೊ.

ಊಟ ಮುಗ್ಸಿ ವಿಶ್ರಾಂತಿ ಏನೂ ತಕಣದೆ ನಗರದ ಪಕ್ಕಲಿರುವ ಮೃಗಾಲಯ ನೋಡಿಕಂಡ್ ಅಂಬೇರದ ಕಡೆ ಹೋದೊ. ಅಂಬೇರ ಇರ್ದು ನಗರದ ಈಶಾನ್ಯ ದಿಕ್ಕಿಲಿ ನಗರಂದ ಹನ್ನೊಂದು ಕಿಲೋಮೀಟರ್ ದೂರಲಿ ಬೆಟ್ಟಗಳ ಮೇಲೆ ಒಳದ್. ಜಯಪುರ ನಿರ್ಮಾಣ ಆಕೆ ಮುಂದೆ, ಕಛವಾ ರಜಪೂತರ (Kachawa Rajfouts) ರಾಜಧಾನಿ ಇದಾಗಿತ್ತ್. ಇವು ರಾಮಾಯಣದ ರಾಮನ ಮಂಙ ಕುಶನ ನಂತರದ ವಂಶಸ್ತರ್‌ಂತೇಳಿವೆ. ಅಂಬರ್‌ಗೆ ಹಿಂದೆ ಅಂಬಾರತಿ ಅಂತ ಹೆಸ್ರಿತ್ತ್ ಗಡ. ಅಂಬಕೇಶ್ವರ ಎಂಬ ಶಿವನ ಹೆಸ್ರ್‌ಂದ ಈ ಹೆಸ್ರ್ ಬಾತ್‌ಂತ ಅನಿಸಿಕೆ. ಇನ್ನೊಂದು ಲೆಕ್ಕಲಿ ಅಯೋಧ್ಯೆ ಆಳಿದ ಸೂರ್ಯವಂಶದ ರಾಜ

ಅಂಬರೀಶಂದ ಈ ಹೆಸ್ರ್ ಬಾತ್‌ಂತಲೂ ಹೇಳಿವೆ. ಅಲ್ಲಿರುವ ಒಂದು ಶಾಶನ ಕ್ರಿ.ಶ. 954ರ ಕಾಲದ್‌ಂತ ಚರಿತ್ರಕಾರರ ಅಬಿಪ್ರಾಯ.

ಇಲ್ಲಿನ ಕೋಟೆ, ಅರಮನೆ, ಕಾವಲುಗೋಪುರ ಎಲ್ಲ ಇರುದು ಬೆಟ್ಟ ಗುಡ್ಡಗಳ ಮೇಲೆ. ಇದರ ನಿರ್ಮಾಣನೆ ಒಂದು ಸಾದನೆ. 17ನೇ ಶತಮಾನಲಿ ರಾಜ ಮಾನ್‌ಸಿಂಗ ಈಗಿನ ಕೋಟೆ ಕಟ್ಟಿಕೆ ಸುರ್‌ಮಾಡ್ದ್. ಕೆಲ್ಸ ಮುಗ್ಸಿದ್ ಸವಾಯಿ ಮಾನ್‌ಸಿಂಗ.

ಕೋಟೆನ ನೋಡಿಕೆ ಬೆಟ್ಟ ಗುಡ್ಡಗಳ ಬಳಸುದಾರಿ ಸುತ್ತಿ ಸುತ್ತಿ ಮೇಲಕ್ಕೇರ್‌ತಾ ಹೋಕು. ದೊಡ್ಡ ದೊಡ್ಡ ಕುರೆಗ ನಮ್ಮ ಆಗಮನನ ಸ್ವಾಗತ ಮಾಡಿವೆ. ಅವರ ಕಣ್ಣೆಲ್ಲ ನಮ್ಮ ಕೈ ಕಡೆಗೆ. ತಿನ್ನುವ ವಸ್ತು ಏನಾರ್ ಇದ್ದರೆ ದಾಳಿ ಮಾಡಿವೆ. ಅವ್ಕೆ ಹೆದ್ರಿಕೆನೇ ಇಲ್ಲೆ. ಬೇರೆ ವಸ್ತು ಕೈಲಿದ್ದರೆ ಜಾಗ್ರತೆ ಬೇಕು. ಇಲ್ಲದಿದ್ದರೆ ಕೈಯಿಂದ ಕಿತ್ತ್‌ಕಂಡ್ ಹೋದವೆ. ನಾವ್ ಮೇಲೇರ್‌ತ್ತ ಹೋದಾಂಗೆ ಕೆಳಗಿನ ನೋಟ ರಮಣೀಯ ಆಗಿ ಕಂಡದೆ. ಕೋಟೆನ ಮಹಾದ್ವಾರ ಹಾದ್ ಮುಂದೆ ಹೋದರೆ ದೇವಸ್ತಾನ ಸಿಕ್ಕಿದೆ. ದೇವಸ್ತಾನ ತುಂಬ ದೊಡ್ಡದೇನಲ್ಲ. ಆದರೆ ಆ ಪುಟ್ಟ ಮಂದಿರನ ಹಾಲ್‌ಗಲ್ಲಿಂದ ಪೊರ್ಲಾಗಿ ಕಟ್ಟಿಯೊಳೊ. ನಾವ್ ದೇವರ ದರ್ಶನ ಮಾಡಿಕಂಡ್ ಅರಮನೆಯ ಬಾಗಗಳ್ನ ನೋಡಿಕೆ ಮುಂದುವರ್ದೊ.

ದೇವಾಲಯದ ಅಂಗಣನ ಹಾದ್ ಮುಂದೆ ಹೋದರೆ ಒಂದು ದೊಡ್ಡ ಸಬಾಂಗಣ ಸಿಕ್ಕಿದೆ. ಇದ್ ಇರ್ದು ಎರಡನೆ ಅಂತಸ್ತಿಲಿ. ಇದನ್ನ್ ರಚಿಸಿದ ಹಿಂದೂ ರಜಪೂತ ಶೈಲಿಲಿ. ಅಲ್ಲಿಂದ ಮೂರನೆ ಅಂತಸ್ತಿಲಿ ರಾಜರ, ರಾಣಿಯರ ವಾಸಗೃಹ, ಅಂತಃಪುರಗ ಉಟ್ಟು. ಅಲ್ಲಿರುವ ಮಂಟಪಗ ಚಂದ್ರಕಾಂತ ಶಿಲೆದ್. ಇಲ್ಲಿ ತಾಜಮಹಲ್‌ಲಿ ಇದ್ದಾಂಗೆ ಶಿಲೆನ ಕೆತ್ತಿ ಕೊರ್ದ್ ನಾನಾ ಬಣ್ಣದ ಬೆಲೆ ಬಾಳುವ ಕಲ್ಲ್‌ನ ಹುಡಿ ತುಂಬಿಸಿ ನಾಜೂಕಾಗಿ ರಚಿಸಿದ ಗಿಡ, ಬಳ್ಳಿ, ಹೂಗಳ ಕಲೆಗಾರಿಕೆ ಉಟ್ಟು. ಇದ್ ಪ್ರಕೃತಿಯ ಪ್ರತಿ ರೂಪ. ಕೆಲವು ಚಾವಡಿಗಳಲಿ ಮೊಗಲರ ಮನೆಗಳ ಹಾಂಗೆ ಬೇರೆ ಬೇರೆ ಬಣ್ಣದ ಗಾಜಿನ ಚೂರುಗಳ ಗಾರೆಲಿ ಅಂಟಿಸಿ ಚಿತ್ರ ವಿಚಿತ್ರ ರೂಪಗಳ ನಿರ್ಮಿಸಿ ಅಲಂಕರಿಸಿಯೊಳೊ. ಅಲ್ಲಿ ಒಂದು ಕಡ್ಡಿನ ಗೀರಿ ಹೊತ್ತಿಸಿ ಹಿಡ್ದರೆ ಆ ಗಾಜಿನ ಚೂರುಗಲ್ಲಿ ಲಕೋಪಲಕ್ಷ ಕಡ್ಡಿಗ ಉರಿವ ಬಿಂಬ ಪ್ರತಿಬಿಂಬ ಕಂಡದೆ. ಇದ್ ಆಕಾಶಲಿ ನಕ್ಷತ್ರ ಕಂಡದೆಲ್ಲ ಹಾಂಗೆ. ನಾವ್ಗೆ ಅಲ್ಲಿಂದ ಪಹರೆಂವ ಉರಿವ ಮೇಣದ ಬತ್ತಿ ಹಿಡ್ದ್ ತೋರ್ಸಿತ್. ಅಲ್ಲೆ ಪಕ್ಕಲಿ ಇನ್ನೊಂದು ಅಂತಃಪುರ ಉಟ್ಟು. ಅಲ್ಲಿ ದಿಲ್ಲಿನ ಕೆಂಪು ಕೋಟೆಲಿ ಇರುವ ಹಾಂಗೆ ಹಾಲ್‌ಗಲ್ಲಿನ ಚಾವಡಿ. ಅದರೊಳಗೆ ನೀರ್‌ಹರಿವ ಕಾಲುವೆ, ಕಾರಂಜಿ ಎಲ್ಲ ಉಟ್ಟು. ಇದೆಲ್ಲ ರಜಪೂತರಸರ ರಸಿಕತೆಗೆ ಸಾಕ್ಷಿಯಾಗಿ

ಒಳದ್. ಈ ಆವರಣದ ಒಂದು ಕಡೆ ಮೀರಾಬಾಯಿ ದೇವಾಲಯ ಉಟ್ಟು. ಅಂಬರ ಕೋಟೆ ನೋಡಿ ಅದರ ನಿರ್ಮಾಣಕ್ಕೆ ಬೆರಗಾಗಿ ಮನಸೋಲದೆ ಬರುವಾಂಗಿಲ್ಲೆ. ನಾವ್ಗೆ ಅದರ ನೋಡಿದಷ್ಟ್ ನೋಡೊಕುಂತ ಮನ್ಸಾದರೂ ಸಮಯ ಬೇಕಲ್ಲ? ನಾವ್ ಅಲ್ಲಿಂದ ಹಿಂತಿರಿಗಿ ಬಂದ್ ಜಂತರ್ ಮಂತರ್ ನೋಡಿಕೆ ಹೋದೊ.

ಜಯಪುರಲಿರುವ ಜಂತರ್ ಮಂತರ್ ದಿಲ್ಲಿಲಿರುದಕ್ಕಿಂತ ತುಂಬಾ ದೊಡ್ಡದ್ ಮತ್ತು ವಿಶಾಲ ಪ್ರದೇಶಲಿ ಉಟ್ಟುಂತ ಹಿಂದಿನ ಪತ್ರಲಿ ಬರ್ದಿದ್ದೆ. ಎರಡನೇ ರಾಜಜಯಸಿಂಗ ಸುರೂಗೆ ಇಲ್ಲಿ ಮಾಡಿ ಮತ್ತೆ ದಿಲ್ಲಿಲಿ ಮಾಡ್ದ್. ಮತ್ತೆ ಉಜ್ಜೈಯಿನಿ, ಮಥುರಾ, ವಾರಾಣಾಸಿಲೂ ಮಾಡ್ದ್. ಅಂವ ಅವನ ಕಾಲದ ಹೆಸರಾಂತ ಖಗೋಳ ಜ್ಞಾನಿಗಳ್ಲಿ ಒಬ್ಬನಾಗಿದ್ದದ್ ವಿಶೇಷನೆ. ಇದ್ ಸುಮಾರ್ ಒಂದುವರೆ ಎಕ್ರೆಲಿ ಉಟ್ಟು. ಕುತೂಹಲಕಾರಿ ರಚನೆ. ಇಲ್ಲಿರುವ ಕೆಲವು ರಚನೆಗಳ ಹೆಸರಿಸುದುತಾದರೆ ಅದರ ಹೀಂಗೆಲ್ಲಾ ಕರ್ದವೆ. ಕಾಂತಿವೃತಯಂತ್ರ, ನರಿವಲಯ ಯಂತ್ರ, ಲಘು ಸಾಮ್ರಾಳ್ ಯಂತ್ರ, ಚಕ್ರ ಯಂತ್ರ, ರಾಮಯಂತ್ರ, ಸಮರತ್ ಯಂತ್ರ, ದಾಳಿ ವಲಯ ಯಂತ್ರ, ಜೈ ಪ್ರಕಾಶ್‌ಯಂತ್ರ ಇತ್ಯಾದಿ. ಇದೆಲ್ಲ ಕಾಲ ಮಾನ, ಗ್ರಹಗಳ ಸ್ತಾನಮಾನ, ಗ್ರಹಣ, ಹವಾಮಾನ ಎಲ್ಲ ತಿಳಿಯಕೆ ಅನುಕೂಲವಾಗುವ ಹಾಂಗೆ ರಚಿಸಿದ ರಚನೆಗ.

ಇದಾದ ಮೇಲೆ ಮತ್ತೆ ನಾವ್ ಹೋದ್ದ್ ಗಲ್ತ ಎಂಬಲ್ಲಿಗೆ. ಹಾಂಗೆ ರಾತ್ರಿ ಯಾಗ್ತಾ ಬರ್ತಿತ್ತ್. ಆದರೆ ಚಂದ್ರ ಹಾಂಗೆ ತನ್ನ ಬೆಳ್ದಿಂಗಳ್‌ಂದ ಎಲ್ಲವನ್ನ ಬೆಳ್ಗಿಸಿ ಒಂದು ತರ ಸೊಬಗ್ ಎಲ್ಲ ಕಡೆ ಪಸರಿಸಿತ್ತ್. ಈ ಪ್ರದೇಶಲಿ ನೋಡಕ್ಕಾದ ಜಾಗ. ಇದ್ ಇರುದು ಪರ್ವತಗಳ ಮೇಲೆ, ಕಣಿವೆನ ನಡೂಲಿ ಗುಡ್ಡ ಹತ್ತಿ ಗುಡ್ಡ ಇಳ್ದ್ ಸುತ್ತು ಹಾಕಿ ಹೋಕು. ನಾವ್ ಹೋದ ಹೊತ್ತು ಕತ್ತಲಾದ ಮೇಲೆ ಬೆಳ್ದಿಂಗಳ ಬೆಳ್ಕ್‌ಲಿ. ಆದ್ದರ್‌ಂದ ಆಯಾಸ ಅಷ್ಟ್ ಗೊತ್ತಾತ್ಲೆ. ಒಂದು ವೇಳೆ ಹಗಲಾಗಿದ್ದರೆ ಸಾಕೋ ಸಾಕಾಗಿತ್ತ್. ಅಲ್ಲಿರುವ ದೇವಸ್ತಾನ, ಕೆರೆ, ಅದಕ್ಕೆ ತಕ್ಕ ಮೆಟ್ಲ್, ಅಲ್ಲಿನ ನೋಟ ಎಲ್ಲ ಮನನೀಯ. ಶಾಂತ ವಾತಾವರಣ. ಹಿಂದೆ ಗಾಲವ ಮಹರ್ಷಿ‌ಂತೇಳವ ತಪಸ್ಸ್ ಮಾಡ್ದ ಜಾಗ ಗಡ ಇದ್. ಅದಕ್ಕೆ ಗಾಲ್ತಂತ ಹೆಸ್ರ್ ಬಂದದ್. ಇಲ್ಲಿರುವ ಮುಖ್ಯ ದೇವಾಲಯ ಸೂರ‍್ಯ ದೇವಾಲಯ. ಇಲ್ಲಿನ ಬಣ್ಣಗಾರಿಕೆಗೆ ಮನ ಸೋತದೆ. ಇದನ್ನೆಲ್ಲ ನೋಡಿ ಹಾಸ್ಟೆಲಿಗೆ ಬಾಕಾಕನ ಗಂಟೆ ಒಂಬತ್ತ್ ದಾಟಿತ್ತ್.

ಇಂದ್ ಗುಡ್ಡೆ ಹತ್ತಿ ಇಳ್ದ್ ತುಂಬಾ ಆಯಾಸ ಆಗುಟ್ಟು. ಇಂದ್ ಕುಡ್ದ ನೀರೆಷ್ಟ್‌ಂತ ಲೆಕ್ಕ ಇಲ್ಲೆ. ಅಷ್ಟ್ ಬೆವರ್‌ನು ಹೋಗುಟು. ತಂಣೀರ್ಲಿ ಮೀದ್

ಊಟ ಮುಗ್ಸಿ, ಎರ್ಡ್ ದೊಡ್ಡ ಗ್ಲಾಸ್ ಹಾಲ್ ಕುಡ್ದ್ ಬಚ್ಚೆಲ್ ಕಡ್ಮೆ ಆಗಿ ಹುರುಪು ಬಂದಾಂಗೆ ಆಗುಟು. ಆ ಹುರ್ಪುಲೇ ಇಷ್ಟ್ ಉದ್ದದ ಕಾಗ್ದ ನಿಂಗೆ ಬರ್ದದ್. ಈಗ ರಾತ್ರೆ ಸುಮಾರ್ ಹನ್ನೊಂದು ಗಂಟೆ ನಿದ್ರಾದೇವಿ ಕರೆತ ಉಟ್ಟು. ನನ್ನ ಮಿತ್ರ ರಾಮಚಂದ್ರ ಆಗಲೇ ಕುಂಭಕರ್ಣನ ಅವತಾರ ತಾಳಿಟು. ನಾವು ನಾಳೆ ಬೊಳ್ಪಿಗೆ ಐದ್ ಗಂಟೆ ರೈಲಿಗೆ ಇಲ್ಲಿಂದ ಅಜ್ಮೀರಕ್ಕೆ ಹೋದುಗಡ. ಹಾಂಗಾಗಿ ನಾಲ್ಕ್ ಗಂಟೆಗೆನೇ ಎದ್ರೊಕಾದೆ. ಇಲ್ಲಿ ಎಲ್ಲ ಸವಲತ್ತ್ ಲಾಯ್ಕಾಗಿ ಉಟ್ಟು. ಸವಕಾಶಾಗಿ ನಿದ್ರೆ ಮಾಡೊನೊಂತೇಳಿರೆ ಪುರುಸೊತ್ತು ಇಲ್ಲೆ. ಆದರೆ ನಾವ್ ಬಂದದ್ ಎಲ್ಲ ನೋಡಿಕೆ ತಾನೆ. ನಿದ್ರೆ ಹೊಡೆಕೆ ಅಲ್ಲಲ್ಲ. ಅದೇ ಸಮಾದಾನ. ಇರ್ಲಿ ನಿದ್ರೆ ಜೋರಾಗಿ ಬರ್ತಾ ಉಟ್ಟು. ಹೆಚ್ಚಿನ ವಿಶೇಷ ಮುಂದಿನ ಪತ್ರಲಿ.

ಇತೀ ನಿನ್ನ ಗೆಳೆಯ

ಮುಂಬಯಿ
15–10–1959

ಗೆಳತಿ ಮಾಲಿನಿಗೆ,

ನಾವ್ ಮುಂಬಯಿ ಮುಟ್ಟಿದ್ ನಿರೀಕ್ಷಿಸಿದ ಹೊತ್ತಿಗಿಂತ ತುಂಬಾ ತಡ ಆಗಿ. ಕಾರಣ ಜಯಪುರಲಿ ಹಂಞ ಎಡವಟ್ಟಾತ್. ಅದೂ ಜಯಪುರಲಿ ನಾವ್ಗೆ ಸೋಲಾಕೊ? ಅದರ್‌ಂದಾಗಿ ನಮ್ಮ ಪ್ರೊಫೆಸರ್ ಹಮೀದ್‌ನವು ತಾಳ್ದ ರೌದ್ರಾವತಾರ ನೀ ನೋಡಕಾಗಿತ್ತ್. ನಡ್ದ ಕತೆಂತೇಳಿರೆ ನಾವೆಲ್ಲ ಹೊತ್ತಿಗೆ ಮೊದ್ಲೆ ಕಣ್ಣ್ ಒಸ್ರಿಕಂಡ್ ಅರ್ದ ನಿದ್ದೆಲಿ ಎದ್ದ್ ಕುದುರೆ ಗಾಡಿ ಟಾಂಗಲಿ ಸಾಮಾನೆಲ್ಲ ಹಾಕಿಕಂಡ್ ರೈಲ್ವೇ ಸ್ಟೇಷನಿಗೆ ಬಂದ್ ಇಳ್ದೊ. ಒಟ್ಟಾರೆ ಆ ಗಡಿಬಿಡಿಲಿ ನಮ್ಮ ಪ್ರೊಫೆಸರರ ಚೀಲವೊಂದು ಕಾಣೆ ಆತ್. ಆಚೆಲಿ ರೈಲ್ ಹೊರ್ಡಿಕೂ ತಯಾರಾಗಿ ನಿಂತಿತ್ತ್. ಇದೇ ಅವು ಉರಿದೇಳಿಕ್ಕೆ ಕಾರ್ಣ. ಆ ಕೈ ಚೀಲಕ್ಕೆ ಯಾವನೊ ಒಬ್ಬ ಟಾಂಗದಂವ ಏನೊ ದೊಡ್ಡ ಗಂಟೇ ಇರೊಕುಂತೇಳಿ ಹಾರ್ಸಿತ್. ರೈಲ್ವೇ ಪೋಲೀಸ್‌ನವುಕೆ ದೂರು ಕೊಟ್ಟು ಆತ್. ಕಡೆಗೆ ನಮ್ಮ ಕಡೆಯ ಹಿರಿಯ ಮಕ್ಕಳಿಬ್ಬರ ಪ್ರಯತ್ನಂದ ಹೇಂಗೋ ಕಳವು ಮಾಲ್ ಪತ್ತೆ ಏನೋ ಆತ್. ಆದರೆ ರೈಲ್ ಹೊರ್ಟ್ ಹೋಗಿತ್ತ್. ಆ ಚೀಲಲಿ ಏನಿತ್ತ್? ಮಣ್ಣ್! ಏನೂ ಇತ್ಲೆ. ಅಂತೂ ಐದ್ ಗಂಟೆಗಿದ್ದ ರೈಲ್‌ನ ಕಳ್ಕಂಡ ನಾವು ಒಂಬತ್ತ್ ಗಂಟೆ ರೈಲ್‌ಲಿ ಹೊರ್ಡೊಕಾಗಿ ಬಾತ್. ಹಾಂಗೆ ನಾವು ಅಜ್ಮೀರ ಮುಟ್ಟಿಕಾಕನ ಮದ್ಯಾಹ್ನ ಎರಡ್ ಗಂಟೆ ಆಗಿತ್ತ್. ಇಲ್ಲಿಂದ ಮುಂಬಯಿಗೆ ಬೇರೆ ರೈಲ್‌ಲಿ ಹೋಕಾಗಿತ್ತ್. ಆ ರೈಲ್ ಇದ್ದದ್ ರಾತ್ರಿ ಎಂಟ್‌ವರೆಗೆ. ಹಾಂಗಾಗಿ ಅಜಮೀರಲಿ ಐದಾರ್ ಗಂಟೆ ಬಿಡುವಿತ್ತ್. ಪ್ರೊಫೆಸರ್ ಪಾಪದ ನಮ್ಮ ಮೂವರ ಮತ್ತು ಗೂಡೆಗಳ ಬುಟ್ಟ್ ಉಳ್ದ ಮಕ್ಕಳಿಗೆ ಹಂಞ ದುಡ್ಡ್ ಕೊಟ್ಟ್ ಏನಾದರ್ ತಿಂದ್ ಸಾಯನಿಂತೇಳಿ ಕಳ್ಸಿದೊ. ಆ ಮಕ್ಕ ಏನ್ ಮಾಡ್ದೊ ಪೇಟೆಗೆ ಹೋಗಿ ಸುತ್ತಾಡಿ ಪೊರ್ಲುಲಿ ಊಟ ಮಾಡಿ ಬಂದೊ. ನಾವ್ಗೆ ಸಿಕ್ಕದ್ ಹಳ್ಸೆಲ್ ಪೂರಿ ನೀರ್‌ಕಾಪಿ. ಪುಷ್ಕರ ಒಂದು ಚಾರಿತ್ರಿಕ ಪ್ರದೇಶ. ಇಲ್ಲಿ ನೋಡಿಕೆ ಇರುವ ಮುಖ್ಯ ಸ್ತಳ ಅಂದರೆ ಪುಷ್ಕರಂತೇಳುವ ಸರೋವರ, ದೇಶಲಿ ಮುಖ್ಯವಾಗಿರುವ ಒಂದೇ ಒಂದು ಬ್ರಹ್ಮ ದೇವಸ್ತಾನ ಮತ್ತೆ ಹಂಞ ದೂರಲಿರುವ ಅಜ್ಮೀರ ದರ್ಗ.

ನಾವ್ ಮೂರ್ ಜನ ಅಂದ್ರೆ ನಾನ್, ರಾಮಚಂದ್ರ, ನಾರಾಯಣ ಸ್ವಾಮಿ ಗೂಡೆಗ ಎಲ್ಲ ಸೇರಿ ಮಾತಾಡಿಕಂಡ್ ಪುಷ್ಕರ ಮತ್ತು ಬಹ್ಮ ದೇವಸ್ತಾನ ನೋಡಿಕಂಡ್ ಬರೊನೊಂತೇಳಿ ಹೊರ್ಟೊ. ಮೀರಾ ಮೇಡಮ್ಮ್‌ನವು ನಮ್ಮೊಟ್ಟಿಗೆ ಇದ್ದೊ. ನಮ್ಮ ಮೇಡಮ್ಮ್‌ನವು ಯಂ.ಎ. ಮುಗ್ಸಿದಾಂಗೆ ಉಪನ್ಯಾಸಕರಾಗಿ

ಬಂದೊವು. ಮಕ್ಕಳಾಟಿಕೆ ಇನ್ನೂ ಹೋಗಿತ್ಲೆ. ಅವ್ಕೆ ಚಾರಿತ್ರಿಕ ಸ್ತಳಕ್ಕಿಂತ ಪೇಟೆ ಸುತ್ತುದುಂತೇಳಿರೆ ಬಾರೀ ಕುಸಿ. ಪತ್ತೇಪುರ ಸಿಕ್ರಿಗೆ ಹೋಗಲಿ, ತಾಜಾಮಹಲಿಗೆ ಹೋಗಲಿ, ಕೆಂಪು ಕೋಟೆಗೆ ಹೋಗಲಿ, ಅಂಬೇರಕ್ಕೆ ಬೇಕಾದರೂ ಹೋಗಲಿ ಅಲ್ಲಿನ ವಿಶೇಷ ತಿಳ್ಕಂಬಕೆ ನಿಗಾ ತಕಂಡ ಹಾಂಗೆ ಕಂಡತ್ಲೆ. ಆದರೆ ಉಳಿದ ಎಲ್ಲಾ ವಿಶಷಯಗಳ್ಲಿ ಚುರ್ಕ್. ಹೇಂಗೂ ಮದುವೆ ಆಗದ ಪೋರ್ಲುನ ಮೇಡಮ್ಮ್. ಮಕ್ಕಳೊಟ್ಟಿಗೆ ಲಾಯ್ಕಾಗಿ ಬೆರಿತಿದ್ದೊ. ಹೋಟೆಲಿಗೆ ಕಾಫಿ ಕುಡಿಯಕೆಂತ ಹೋದರೆ ನಮಗೆ ಬೇಕಾದರ ಕೊಡಿಕೆ ಸರ್ವರ್ಸ್ ಇಲ್ಲದಿದ್ದರೆ ಕಾಪಿ, ತಿಂಡಿ ತಂದ್‌ಕೊಡಿಕೆ ಹಿಂದೆ ಮುಂದೆ ನೋಡ್‌ತಿತ್ಲೆ. ಮಾತ್ ಕತೆಲೂ ಮುಂದೆ. ತಮಾಷೆ ಬೇರೆ ಹಾಸ್ಯದ ಮಾತ್‌ಗಳ್‌ಂದ ನಮ್ಮ ಕುಸಿಲಿರುವಾಂಗೆ ಮಾಡ್ತಿದ್ದೊ.

ನಾವ್ ಪುಷ್ಕರಕ್ಕೆಂತೇಳಿ ಹೊರ್ಟದೇನೊ ಸರಿ ಆದರೆ ದಾರಿಲಿ ಗೂಡೆಗಳ ಮನ್ಸ್ ಬೇರಾತ್. ನಾವ್ ಇವರೊಟ್ಟಿಗೆ ಸೇರಿ ಸೋತೊಂತ ಮಾತಾಡಿಕಂಡೊ. ಅಂತೂ ಪುಷ್ಕರಕ್ಕೆ ಹೋದು ಪುಸ್ಕ ಆಗಿ ಪೇಟೆಲಿ ಸುತ್ತಾಡಿ ಹೊತ್ತು ಕಳ್ದೊ.

ಅಜ್ಮೀರಂದ ನಾವ್ ಹೊರ್ಟದ್ ರಾತ್ರಿ 9 ಗಂಟೆಗೆ. ನಾವ್ ಕಾಯ್ದಿರಿಸಿದ ಗಾಡಿ ತಪ್ಪಿತ್ತ್. ಈಗ ಸಿಕ್ಕಿದ ಗಾಡಿಲಿ ಹೋಗುತ್ತಿರುದಲ್ಲ. ಹಾಂಗಾಗಿ ಜಾಗ ಸಿಕ್ಕಿದಲ್ಲಿ ಹತ್ತಿ ಪ್ರಯಾಣ ಮಾಡಕಾಗಿತ್ತ್. ಈಗ ರೈಲ್‌ಲಿ ಪ್ರಯಾಣ ಮಾಡಿ ಅಬ್ಯಾಸಾಗಿತ್ತ್. ಪರಿಸ್ತಿತಿಗೆ ತಕ್ಕ ಹಾಂಗೆ ಹೋಂದಿಕಣೊಕೂ ಗೊತ್ತಾಗಿತ್ತ್. ನಾವ್ ಅಜ್ಮೀರಂದ ಅಹಮದಾಬಾದಿಗಾಗಿ ಪ್ರಯಾಣ ಮುಂದುವರ್ಸಿದೊ. ಒಂದು ಬೋಗಿಲಿ ನಾವ್ ಕೆಲವು ಒಟ್ಟಿಗಿದ್ದೊ. ಆದರೆ ಅಲ್ಲಿ ಜಾಗೆ ಸಾಕಷ್ಟ್ ಇತ್ಲೆ. ಪುಣ್ಯಕ್ಕೆ ಕನ್ನಡ ಗೊತ್ತಿದ್ದ ಯಾರೊ ಇಬ್ಬರ್ ಅದರ್ಲಿದ್ದೊ. ನಾವ್ಗೆ ಮಲ್ಗಿಕೆ ಅವು ಜಾಗ ಮಾಡಿಕೊಟ್ಟೊ. ನಾನ್ ಸೀಟ್‌ಗಳ ನಡುಲಿ ಲಗೇಜ್‌ಗಳ ಸರ್ಸಿ ಮಲ್ಗಿದೆ. ಗೂಡೆಗ ಮೇಡಮ್ಮ್‌ನೊಟ್ಟಿಗೆ ಎಲ್ಲೋ ಬೇರೆ ಕಡೆ ಇದ್ದೊ. ನಿದ್ದೆ ಲಾಯ್ಕ್ ಬಾತ್. ಆಯಾಸಾಗಿತ್ತಲ ಹಾಂಗೆ. ನಾವ್ಗೆ ಎಚ್ಚರ ಆಕನ ದಾರಿ ನಡೂಲಿ ಹತ್ತಿದ ಯಾರೋ ಹೆಂಗ್ಸರ್ ನಮ್ಮ ಸರ್ಸಿ ನಿದ್ರೆ ಮಸ್ತಿಲಿದ್ದೊ. ನಾವ್ಗೆ ಒಂದೂ ಗೋಚರಕ್ಕೆ ಬಂದಿತ್ಲೆ. ಅದ್ ಹೇಂಗೂ ಮೂರನೆ ತರಗತಿ. ಯಾರ್ನೂ ಕೇಳುವಾಂಗಿತ್ಲೆ. ಅಂತೂ ಬೊಳ್ಪಾಗುವಲ್ಲಿವರೆಗೆ ಕಾಲ ಕಳ್ದ್ ಬೊಂಬಾಯಿಗೆ ತಲ್ಪಿ ಜೀವಂತ ಶವವಾಗಿ ಇಳಿಯಕಾದಲ್ಲಿ ಇಳ್ದೊ.

ನಾವ್ ಇಳೆಕಾಕನ ಒಂಬತ್ತ್‌ಗಂಟೆ ಆಗಿತ್ತ್. ನಾವ್ ರೈಲ್ವೆ ನಿಲ್ದಾಣಲಿ ಮಿೊದ್‌ಕಂಡ್, ಬಟ್ಟೆ ಬದಲಾಯ್ಸಿ ಪಕ್ಕದ ಹೋಟೇಲ್‌ಲಿ ಉಪಹಾರ ಮುಗ್ಸಿದೊ. ಮತ್ತೆ ಬಾಡಿಗೆ ಬಸ್ಸ್ ಮಾಡಿಕಂಡ್ ಸಾಮಾನೆಲ್ಲ ಅದರ್ಲಿ ಹೇರಿ ಹೊತ್ತು ನೆತ್ತಿಗೆ ಬರುವಲ್ಲಿವರೇಗೆ ಪೇಟೆಯೆಲ್ಲ ಸುತ್ತಾಡ್ದೊ.

ಮದ್ಯಾಹ್ನ ಊಟ ಆದ ಮೇಲೆ ಮುಂಬಯಿಲಿರುವ ಶಾಂತಾಕ್ರೊಜ್ ವಿಮಾನ ನಿಲ್ದಾಣ ನೋಡಿಕೆಂತ ಅಲ್ಲಿಗೆ ಹೋದೊ. ಇದ್ ನಮ್ಮ ದೇಶದ ದೊಡ್ಡ ವಿಮಾನ ನಿಲ್ದಾಣ. ವಿಶಾಲ ಜಾಗಲಿ ಹಲವಾರ್ ಎಕ್ರೆಲಿ ಆವರ್ಸಿಕಂಡ್ ಉಟ್ಟು. ನಾವ್ ಅಲ್ಲಿಗೆ ಹೋದ ಹಂಞ ಹೊತ್ತಿಗೆ ಐದಾರ್ ವಿಮಾನಗ ಬಂದ್ ಇಳ್ತ್. ಅಲ್ಲಿ ವಿಮಾನ ಹಾರಾಟಕ್ಕೆ ಸಮ್ಮಂದಪಟ್ಟ ಹಲವಾರ್ ವಿಷಯಗಳ ವಿವರಿಸಿದೊ. ಅವೆಲ್ಲ ಪ್ರಯಾಣದ ವಿಮಾನಗ . ಬೇರೆ ತರದ ಯುದ್ಧ ವಿಮಾನಗಳ ನೋಡಿಕೆ ನಮ್ಮ ಬೆಂಗಳೂರೇ ಸರಿ. ನಾವ್ ಅಲ್ಲಿ ಇರಿಕಾಕನ ಬಂದ ವಿಮಾನಗಳಲಿ ಒಂದು ಇಂಡೋನೇಷ್ಯಾಂದ ಬಂದದಾಗಿತ್ತ್. ಆಮೇಲೆ ನಾವ್ ವಿಮಾನಗಳ ನಿಲ್ಲಿಸಿದಲ್ಲಿಗೆ ಹೋಗಿ ವಿಮಾನ ಹತ್ತಿ ಒಳಗೆ ಹೋಗಿ ಕುದ್ರುವ ವ್ಯವಸ್ತೆ ನೋಡಿ ಹಿಂದಿರುಗಿದೊ.

ಬೊಂಬಾಯಿಲಿ ನಾವ್ಗೆ ಉಳ್ಕಂಕೆ ಒಂದು ಕನ್ನಡ ಶಾಲೆನ ಗೊತ್ತು ಮಾಡಿದ್ದೊ. ನಾವ್ ಪ್ರವಾಸಕ್ಕೆ ಕೊಟ್ಟ ದುಡ್ಡು ಅಷ್ಟೆ. ಕರ್ಚ್ ಕಡಿಮೆ ಮಾಡದೆ ಬೇರೆ ದಾರಿ ಇತ್ಲೆ. ಹೇಂಗೊ ಸುದಾರ್ಸಿಕಂಡೊ.

ನಾವ್ 'ಗೇಟ್ ವೇ ಆಪ್ ಇಂಡಿಯಾ'ಂತೇಳುವಲ್ಲಿಗೆ ಹೋಕಾಕನ ಹಿಂಬೊತ್ತಾಗಿತ್ತ್. ಇದಕ್ಕೆ 'ಭಾರತದ ಹೆಬ್ಬಾಗಿಲ್'ಂತ ಕರಿದು. ನೋಡಕಾದ ಜಾಗ ಇದ್. ಅಲ್ಲಿಂದ ಮುಂದೆ 'ಮಲಬಾರ್ ಹಿಲ್ಸ್' ಎಂಬಲ್ಲಿಗೆ ಹೋದೊ. ಇದ್ ಸಮುದ್ರ ಕರಾವಳಿ ಪ್ರದೇಶ. ವಿಶೇಷ ಜಾಗ. ಇಲ್ಲಿ ಒಂದು ಕಡೆ ಸಮುದ್ರ ಇನ್ನೊಂದು ಕಡೆ ಮುಂಬಯಿ ನಗರ. ಇಲ್ಲಿ ಸುಂದರ ಉದ್ಯಾನವನ, ವಿಶ್ರಾಂತಿ ಬವನ, ಶ್ರೀಮಂತ ಮನೆಗ ಇರ್ದು ಇಲ್ಲಿನೆ. ಸಿನೆಮಾ ನಟ ನಟಿಯರ ಮನೆ ಕೂಡ ಇಲ್ಲಿ ಉಟ್ಟು. ಇಲ್ಲಿ ಬೆಳ್ದಿಂಗಳ ರಾತ್ರಿ ನಡಿಯಕೆ ಬಾರೀ ಕುಸಿ. ಬೆಳದಿಂಗಳ್ಲಿ ಮೀಯ್ತಾ ಬಾಕನ ಹುವಿನ ತೋಟ ಹಾದ್ ಬರುವ ಮಂದ ಮಾರುತ ಹೊತ್ತ್ ತರುವ ಪರಿಮಳ ಮನಸ್ಸಿಗೆ ಹಾಯಾಗಿ ಯಾವ್ದೊ ಹೊಸ ಲೋಕನ ಕನ್ಸಿಲಿ ತೇಲಿಸಿದೆ. ಒಂದು ಕಡೆ ಉರಿವ ದೀಪಗಳ ನಕ್ಷತ್ರಲೋಕ, ಚಂದ್ರನ ಬೆಳ್ಕ್‌ಲಿ ತೂಗಾಡುವ ಹೂವಿನ ರಾಶಿ, ಸಮುದ್ರದ ಅಲೆಗಳ ಸದ್ದ್, ಹಾರುವ ನೊರೆಗಳ ರಾಶಿ, ಒಂದು ಅಲೆನ ಬೆನ್ನಟ್ಟಿ ಬರುವ ಇನ್ನೊಂದು ಅಲೆ, ಅವು ಒಂದಕ್ಕೊಂದು ತಾಂಟಿ ಏಳುವ ನೊರೆಗಳ ನೋಟ ಮನಸೆಲ್ಲಾ ಆವರಿಸಿದೆ. ನಾವ್ ಈ ನೋಟನ ಕಣ್‌ತುಂಬಿಸಿಕಂಡ್ ಉಳ್ಕಂಡ ಕರ್ನಾಟಕ ಶಾಲೆಗೆ ಮರಳಿದೊ.

ಕರ್ನಾಟಕ ಶಾಲೆ ನಗರಲಿರುವ ಕನ್ನಡ ಮಕ್ಕಳಿಗಾಗಿ ಮಾತ್ರ. ಅದ್ ಹಾಯರ್ ಪ್ರೈಮರಿ ಶಾಲೆ. ನಾವ್ ಮುಂಬಯಿಗೆ ಹೋದ ಎರ್ಡನೇ ದಿನ ಮಧ್ಯಾಹ್ನ

ಶಾಲೆಗೆ ಹೋಕಾಕನ ಮಕ್ಕ ಆಡ್ತಿದ್ದೊ. ನಾವ್ಗೆ ಕನ್ನಡ ಮಕ್ಕಳ ಕಂಡಾಕನ ಆದ ಕುಸಿ ಅಷ್ಟಿಷ್ಟಲ್ಲ. ಅವ್ಕೂ ಅಷ್ಟೆನೆ. ಅವು ನಮ್ಮ ಕಂಡೊಡನೆ ನಾವ್ಗೆ ಮುತ್ತಿಗೆ ಹಾಕಿ ಮಾತಾಡಿ ಕುಸಿ ಪಟ್ಟೊ. ಹೆಚ್ಚಿನ ಮಕ್ಕ ಗಟ್ಟಿಮುಟ್ಟಾಗಿದ್ದ್ ಆರೋಗ್ಯವಂತರಾಗಿ ಕಾಣ್ತಿದ್ದೊ. ಕನ್ನಡ ಪದ್ಯಹಾಡಿಕಂಡ್ ಅವು ಕುಣ್ದೊ, ಕುಸಿಪಟ್ಟೊ. ನಾವೂ ಅವರೊಟ್ಟಿಗೆ ಸೇರಿ ಕುಣ್ದೊ. ಕೊಡಗಿನ ಮಕ್ಕಳಿಗೆ ಹೇಂಗೂ ಕುಣಿಯಕೆ ಕಲ್ಸೊಂಕುತಿಲ್ಲೆ.

ನಾವ್ ಮುಂಬಯಿಂದ ಹೊರ್ಡುವ ದಿನ ಬೊಳ್ಪಿಗೆ ಹಂಞ ಚರ್ಚೆ ನಡ್ತ್. ನಮ್ಮಲ್ಲಿ ಕೆಲವು ಎಲಿಫೆಂಟಾ ಗುಹೆ ನೋಡಿಕೆ ಹೋಕೆ ಇಷ್ಟಪಟ್ಟರೆ ಇನ್ನ್ ಕೆಲವು ಮಿಲ್ಕ್ ಕಾಲೊನಿಗೆ ಹೋಕುಂತೇಳ್ದೊ. ಎರ್ಡೂ ಕಡೆಗೆ ಹೋಗಿ ಬರುವಷ್ಟ್ ಹೊತ್ತು ಇತ್ಲೆ ಅಂದೇ ನಾವ್ ಹೊರ್ಡ್‌ಕಾದ್. ಟಿಕೆಟೂ ತಕಂಡಾಗಿತ್ತ್. ಎಲಿಫೆಂಟಾ ಒಂದು ಗುಹಾಲಯ. ಅಜಂತಾ, ಎಲ್ಲೋರಗಳಲ್ಲಿರುವ ಹಾಂಗೆ ಶಿಲ್ಪ ಕಲೆ ಮತ್ತು ಬಣ್ಣಗಾರಿಕೆ ಇರುವ ಜಾಗ. ಮಿಲ್ಕ್ ಕಾಲನಿ ಹಾಲ್ ಸಂಗ್ರಹಿಸಿ ಇಡೀ ನಗರಕ್ಕೆ ಹಾಲ್ ಹಂಚುವ ವ್ಯವಸ್ತೆ ಇರುವ ಜಾಗ. ನನ್ನ ಮನ್ಸ್ ಡೋಲಾಯಮಾನ ಸ್ತಿತಿಲಿ ಇತ್ತ್. ಅಂತೂ ಕಡೆಗೆ ನಾವ್ ಹೊದ್ದ್ 'ಮಿಲ್ಕ್ ಕಾಲೊನಿಗೆ'. ಮಿಲ್ಕ್ ಕಾಲೊನಿ ಮುಂಬಯಿಗೆ ಹೋದೊವು ನೋಡೊಕಾದ ಒಂದು ವ್ಯವಸ್ತೆ. ಅಷ್ಟ್ ದೊಡ್ಡ ನಗರಕ್ಕೆ ಇಲ್ಲಿಂದಲೇ ಎಲ್ಲ ಹಾಲ್ ಸರಬರಾಜ್ ಮಾಡ್ದು ಗಡ. ಇಲ್ಲಿ ಹೆಚ್ಚಿನ ಕೆಲ್ಸ ನಡಿದು ಯಂತ್ರಗಳ್‌ಂದ. ನಾವ್ ಅಲ್ಲಿಗೆ ಹೋಕಾಕನ ನಮ್ಮ ಹಾಂಗೆ ನೋಡಿಕೆ ಬಂದ ಜನ ತುಂಬಾ ಇದ್ದೊ. ಅಲ್ಲಿ ಎಲ್ಲರ್ನ ಒಟ್ಟಿಗೆ ಬುಡುದಿಲ್ಲೆ ಪಂಗಡ ಪಂಗಡ ಆಗಿ ಬುಡ್ದು. ನಮ್ಮದ್ ಸಣ್ಣ ಗುಂಪು ಎಲ್ಲಾ ಒಟ್ಟಿಗೆ ಹೋಗಿ ನೋಡಿಕಂಡ್ ಬಂದೊ. ಅಲ್ಲಿ ಹಾಲ್ ಸಂಗ್ರಹಿಸುದು, ಸಂಸ್ಕರಿಸುದು, ಕುಪ್ಪಿ ತೊಳಿದು, ತುಂಬ್ಸುದ್, ಶೀಲ್ ಮಾಡ್ದು ಎಲ್ಲ ಯಂತ್ರವೆ. ಅಲ್ಲಲ್ಲಿ ಕೆಲವು ಕಡೆ ಮನ್ಸರ ಸಹಾಯ ಬೇಕಾದೆ. ನಾವು ಹೇಂಗೂ ಹಳ್ಳಿಯವು ನಾವ್ಗೆ ಆಶ್ಚರ್ಯ ಕಂಡರೆ ವಿಶೇಷ ಅಲ್ಲ. ವಿಜ್ಞಾನ ಮುಂದುವರಿಯುವ ಈ ಕಾಲಲಿ ಯಂತ್ರ ಚಮತ್ಕಾರದ ಪರಿಚಯ ಆದಾಂಗಾತ್.

ಮಿಲ್ಕ್ ಕಾಲನಿಂದ ನಗರಕ್ಕೆ ಹಿಂತಿರ್ಗಿಕಾಕನ ಮಧ್ಯಾಹ್ನ ಆಗಿತ್ತ್. ದಾರಿಲಿ ಊಟ ಮುಗ್ಸಿ, ಶಾಲೆಗೆ ಬಂದ್ ನಮ್ಮ ನಮ್ಮ ಸಾಮಾನ್‌ಗಳ ಗಂಟೆ ಮೂಟೆ ಕಟ್ಟಿ ದಾದರ್ ರೈಲ್ವೆ ನಿಲ್ದಾಣಕ್ಕೆ ಸಾಗಿಸಿ ಮಾರ್ಕೆಟ್ ಕಡೆಗೆ ಹೋದೊ.

ಮುಂಬಯಿ ನಗರ ನವ ನಾಗರೀಕತೆನ ತವರೂರುಂತ ನಾನಿಂಗೆ ಹೇಳಕಾಗಿಲ್ಲೆ. ನಾನಾ ತರದ ಜನರ್, ನಾನಾ ತರದ ಪೇಷನ್, ಕೋಲಗ, ಒಂದಕ್ಕೊಂದು ಮೇಲಾದ ಕಟ್ಟಡಗ ಎಲ್ಲ ನೋಡಿಕೆ ಇಲ್ಲಿಗೆ ಬರೊಕು. ಇಲ್ಲಿ ನಗರನೂ ದೊಡ್ಡದ್ ; ಜನ ಸಂಖ್ಯೆನೂ ದೊಡ್ಡದ್. ನಗರ ಯಾವ ಹೊತ್ತಿಗೂ ಜನರಾಶಿಂದ,

ವಾಹನಗಳ್‌ಂದ ತುಂಬಿದ್ದದೆ. ರಸ್ತೆ ದಾಟುದೆಂದರೆ ಕುತ್ತಿಗೆಗೆ ಬಂದದೆ. ದಿಲ್ಲಿಲಿ ಇಷ್ಟಿತ್ಲೆ. ದಾದರ್ ಮಾರ್ಕೆಟ್‌ಂತೇಳಿರೆ ಇಲ್ಲಿ ಬಾರೀ ದೊಡ್ಡ ಮಾರ್ಕೆಟ್. ಇಲ್ಲಿ ಹೋದ ಮೇಲೆ ಏನ್ ತಕೊಂಬೊದು ಏನ್ ಬುಡ್ದ್‌ಂತ ಗೊತ್ತಾದುಲೆ. ನಾವ್ಗೆ ಏನ್ ತಕೊಂಬೊದಿದ್ರು ಕೈಲಿದ್ದ ದುಡ್ಡು ಅಷ್ಟೇಂತೇಳ್. ಇನ್ನೊಂದು ಸಂಗತಿ ಅಂದ್ರೆ ಬಾಷೆನೂ ಗೊತ್ತಿರೊಕು. ಬಾಯಿ ಚಲಾಕೂ ಬೇಕು. ನನ್ನಂತ ಬೋಳ ಹೋದರೆ ಹತ್ತು ರುಪಾಯಿ ಮಾಲಿಗೆ ನೂರು ರುಪಾಯಿ ಕೊಟ್ಟ್ ದಿವಾಳಿ ಆಗಿ ಬರೊಕಾದು. ನಮ್ಮ ಪೈಕಿ ಯಾರೂ ದೊಡ್ಡ ವ್ಯಾಪಾರ ಮಾಡಿಕೆ ಹೋತ್ಲೆ. ನಾವ್ ಹೋದದ್ದೇ ಏನಾರ್ ತಕಂಕಾಗಿ ಅಲ್ಲ. ಅದ್ ಹೇಂಗುಟ್ಟುಂತ ನೋಡಿಕೆ.

ಇಂದ್ ತಾರೀಕು ಹದಿನಾರ್. ಇಂದ್ ಹಿಂಬೊತ್ತು ಇಲ್ಲಿಂದ ಹೊರ್ಟವೆ. ನಾವ್ ಪೂನಕ್ಕಾಗಿ ಹೋದು. ಇಲ್ಲಿಂದ ರೈಲ್ ಹೊರ್ಡಿಕೆ ಇನ್ನ್ ಒಂದು ಗಂಟೆ ಉಟ್ಟು. ಪ್ರವಾಸದ ಕಾರ್ಯಕ್ರಮ ಪ್ರಕಾರ ನೋಡಕಾದ ಸ್ತಳ ಎಲ್ಲ ನೋಡಿ ಆತ್. ತಾರೀಕು 17ರ ಹಿಂಬೊತ್ತಿಗೆ ಮಡಿಕೇರಿ ಮುಟ್ಟೊಕು ನನ್ನ ಪತ್ರ ಇಲ್ಲಿಗೆ ನಿಲ್ಸಿನೆ. ಮುಂದಿನ ಪತ್ರ ಮೈಸೂರ್‌ಂದ ತಪ್ಪಿರೆ ಊರಿಗೆ ಹೋದ ಮೇಲೆ.

ಇಂತೀ ನಿನ್ನ ಗೆಳೆಯ

ಮೈಸೂರು
17–10–1959

ಗೆಳತಿ ಮಾಲಿನಿಗೆ,

ಮುಂಬಯಿಂದ ಹೊರ್ಟ್ ನಾವ್ ಬೆಂಗಳೂರಿಗಾಗಿ ಮೈಸೂರಿಗೆ ಬಂದ್ ಮಧ್ಯಾಹ್ನದ ಊಟ ಮುಗ್ಸಿ ಮಡಿಕೇರಿಗೆ ಹೋಕೆ ಬಸ್ಸ್ ಕಾದ್‌ಕಂಡ್ ರೈಲ್ವೆ ನಿಲ್ದಾಣಲಿ ಒಳೊ. ಮಡಿಕೇರಿಗೆ ಹೋಗುವ ಆದಿ ಕಾವೇರಿ ಬಸ್ಸ್ ಬಾಕೆ ತುಸು ಹೊತ್ತು ಉಟ್ಟುಗಡ ಹಾಂಗೆ ಬಿಡು ಸಮಯ ಸಿಕ್ಕಿದರ್‌ಂದ ಈ ಕಾಗದ ಬರ್ದೆ.

ಬೊಂಬಾಯಿಂದ ಬೆಂಗಳೂರುವರೆಗಿನ ರೈಲ್ ಪ್ರಯಾಣಲಿ ನಾವ್ ತುಂಬಾ ಕಷ್ಟ ಪಡಕಾಗಿ ಬಾತ್. ಅಲ್ಲಿಂದ ನಾವ್ ಹೊರ್ಟದ್ ಹಿಂಬೊತ್ತು 6ಗಂಟೆಗೆ. ಅದ್ ವಿದ್ಯುತ್ ಶಕ್ತಿಂದ ಓಡುವ ರೈಲ್ ಪೂನಾದವರೆಗೆ ಮಾತ್ರ. ನಮ್ಮ ಕಷ್ಟ ಬೊಂಬಾಯಿಂದಲೇ ಸುರು ಆತ್. ಅಲ್ಲಿ ನಾವು ರೈಲ್ ಹಿಡಿಯಕೆ ವಿಕ್ಟೋರಿಯಾ ನಿಲ್ದಾಣಕ್ಕೆ ಹೋಗದೆ ದಾದರ್‌ಲಿ ಕಾದ್ ನಿಂತದೇ ಪ್ರಮಾದ ಆತ್. ರೈಲ್ ದಾದರ್‌ಗೆ ಬಾಕಾಕನೇ ಜನ ತುಂಬಿ ಹೋಗಿದ್ದೊ. ಹಾಂಗಾಗಿ ಪೂನಾದವರೇಗೆ ನಿತ್ತ್‌ಕಂಡೇ ಪ್ರಯಾಣ ಮಾಡಕಾಗಿ ಬಾತ್. ಪೂನಾ ಮುಟ್ಟಿಕಾಕನ 9ಗಂಟೆಯೇನೋ ಆಗಿತ್ತ್. ನಾವ್ ಅಲ್ಲಿ ಇಳೆಕಾಕನ ಬೆಂಗಳೂರು ರೈಲ್ ಹೊರ್ಡಿಕೆ ತಯಾರಾಗಿತ್ತ್. ಜನ ತುಂಬಿ ಹೋಗಿದ್ದೊ ಆ ರೈಲ್ ಬುಟ್ರೆ ರಾತ್ರೆ ಇಡೀ ರೈಲ್ ನಿಲ್ದಾಣಲಿ ಕೊಳೆಯುವುದಕ್ಕಿಂತ ಹೇಂಗಾರ್ ಮಾಡಿ ಹೋದೇ ಸರಿಂತೇಳಿ ಹತ್ತಿದೊ. ಆದರೆ ಕುದ್ರಿಕೆ ಜಾಗ ಮಾತ್ರ ಇತ್ಲೆ. ಗೂಡೆಗಳಿಗೆ ಎಲ್ಲೋ ಒಂದು ಕಡೆ ಜಾಗ ಸಿಕ್ಕಿತ್ತ್.

ಅದೇ ರೈಲಿಲಿ ದಕ್ಷಿಣ ಭಾರತಕ್ಕೆ ಪ್ರವಾಸ ಹೊರ್ಟ ಅಹಮದಾಬಾದಿನ ಹೈಸ್ಕೂಲ್ ಮಕ್ಕಳ ಪ್ರವಾಸ ತಂಡ ಇತ್ತ್. ಅವು ಒಂದು ದೊಡ್ಡ ಬೋಗಿನ ಕಾಯ್ದಿರಿಸಿದ್ದೊ. ನಮ್ಮ ಪ್ರೊಫೆಸರ್ ನಾವ್ಗೆ ಹಂಞ ಜಾಗ ಕೊಡುವ ಹಾಂಗೆ ವಿನಂತಿ ಮಾಡಿಕಂಡೊ. ಅವು ನಾವ್ಗೆ ಮಲ್ಗಿಕೆ ಅಲ್ಲದಿದ್ದರೂ ಕುದ್ರಿಕೆ ಜಾಗ ಕೊಟ್ಟೊ. ಹಂಞ ಮುಂದೆ ಬಾಕಾಕನ ಅದೇ ರೈಲಿಲಿದ್ದ ಮಿಲ್ಟ್ರಿ ಜನಗ ನಮ್ಮ ಪರದಾಟ ನೋಡಿ ಜಾಗ ಮಾಡಿ ಕೊಟ್ಟೊ. ನಮ್ಮಲ್ಲಿ ಕೆಲವು ಅವರಲ್ಲಿಗೆ ಹೋಗಿ ಪ್ರಯಾಣಿಸಿದೊ.

ನಮ್ಮ ಗಾಡಿ ಬೆಳ್ಗಾಮ್ ಮುಟ್ಟಿಕೆ ಮುಂದೆ ಬೆಳ್ಗಾತ್. ನಾವ್ ಹೋಕಾಕನ ರಾತ್ರಿ ಹೊತ್ತಿ ಬೆಳಗಾಮ್ ದಾಟಿ ಹೋದದರ್‌ಂದ ಆ ಪ್ರದೇಶ ನೋಡಿಕೆ ಆಗಿತ್ಲೆ. ಅಲ್ಲಿನ ಬತ್ತ, ರಾಗಿ, ಜೋಳದ ಹೊಲ ನೋಡಿಕಾಕನ ಇಲ್ಲಿನ ಹೊಲ ಬಾರೀ ಫಲವತ್ತಾದ ನೆಲ ಅಂತ ಗೊತ್ತಾಗ್ತಿತ್ತ್. ಅಷ್ಟ್ ಒಳ್ಳ ಬೆಳೆ ಬೇರೆ ಎಲ್ಲೂ ನಾವು ಕಂಡಿತ್ಲೆ. ಮಾರ್ಗದ ಎರ್ಡೂ ಕಡೆ ಹರ್ಡಿರುವ ಹುಲುಸಾದ ಹೊಲದ

ನಡುಲಿ ರೈಲ್ ಓಡಿಕಾಕನ ಗಾಳಿಗೆ ತೂಗಾಡುವ ಬೆಳೆ ನೋಡ್ದೇ ಒಂದು ಕುಸಿ. ಕಾಳ್ ತುಂಬಿದ ತೆನೆ ತಲೆ ತಗ್ಗಿಸಿ ನಿಂತ ಮೊದೊಳಿಗೆ ಗೂಡೆನ ಹಾಂಗೆ ಕಾಂಬತಿತ್ತ್. ನೊಂದ ದೇಹಕ್ಕೆ, ಸೋತ ಕಣ್ಣ್‌ಗಳಿಗೆ, ಬಾಡಿದ ಮನ್ಸಿಗೆ ಅಲ್ಲಿನ ಪ್ರಕೃತಿ ನೋಟ ಚೈತನ್ಯ ತುಂಬಿತ್ತ್.

ನಾವ್ ದಾರವಾಡ ಹುಬ್ಬಳ್ಳಿ ದಾಟಿ ಹರಿಹರ ಮುಟ್ಟಿಕಾಕನ ಪುನಃ ಕತ್ತಲಾತ್. ಅರ್ಸಿಕೆರೆಲಿ ಅಹಮ್ಮದಾಬಾದಿನ ಪ್ರವಾಸಿ ತಂಡದೊವು ಇಳ್ದೊ. ಅವಿದ್ದ ಕೋಣೆ ಕಾಲಿ ಆತ್. ನಾವ್ಗೆ ಅನುಕೂಲ ಆತ್. ಬೊಳ್ಪಾಕನ ನಾವ್ ಬೆಂಗಳೂರ್ಲಿ ಇಳ್ದೊ ಅಲ್ಲಿ ಮೈಸೂರು ಗಾಡಿ ತಯಾರಾಗಿ ನಿಂತಿತ್ತ್. ಅದರ್ಲಿ ಮೈಸೂರಿಗೆ ಬಂದೊ. ನಾವ್ಗಿಗ ಊರಿಗೆ ಬಂದ ಹಾಂಗೆ ಆಗಿತ್ತ್ ಮಡಿಕೇರಿಗೆ ಹೋಗುವ ಆದಿ ಕಾವೇರಿ ಬಸ್ಸ್ ಹೊರ್ಡಿಕೆ ಹೊತ್ತು ಉಟ್ಟುಂತ ಗೊತ್ತಾತ್. ಮಧ್ಯಾಹ್ನದ ಊಟ ಮುಗ್ಸಿ ಹಾಂಗೆ ಈ ಪತ್ರ ಬರ್ದ್ ಅಂಚೆಗೆ ಹಾಕಿದೆ. ಪ್ರವಾಸದ ಕಡೆ ಪತ್ರ ಮಡಿಕೇರಿಂದ ಬರ್ದನೆ.

ಇತೀ ನಿನ್ನ ಗೆಳೆಯ

ಮಡಿಕೇರಿ
18–10–1959

ಗೆಳತಿ ಮಾಲಿನಿಗೆ,

ನಾವ್ ನಿನ್ನೆ ಮೈಸೂರುಂದ ಹೊರ್ಟ್ ಆದಿಕಾವೇರಿ ಬಸ್ಸಿಲಿ ಬಂದ್ ಮಡಿಕೇರಿಲಿ ಇಳಿಯಕನ ಹಿಂಬೊತ್ತು ಗಂಟೆ 7–30ಏನೋ ಆಗಿತ್ತ್. ಅಲ್ಲಿಗೆ ನಮ್ಮ ಹದಿನಾಲ್ಕ್ ದಿನಗಳ ಪ್ರವಾಸ ಮುಗ್'ದಿತ್ತ್. ನಾವ್ ಹೋದ್ದ್ ಉತ್ತರ ಬಾರತದ ಕೆಲವೇ ಕಡೆಗೆ ಮಾತ್ರ. ನಮ್ಮ ಹಿಂದಿನ ವರ್ಷದ ಪೀಠ ಭೂಮಿ ಪ್ರವಾಸದ ಹಾಂಗೆ ಈ ಸರ್ತಿ ಕೂಡ ಯಾರಿಗೂ ಏನೂ ತೊಂದರೆ ಆಗದೆ ಪ್ರವಾಸ ಮುಗ್ಸಿದ್ ಕುಸಿಯಾಗಿತ್ತ್. ಪ್ರವಾಸದ ಉದ್ದಕ್ಕೂ ನಾವ್ ನೋಡ್ದ ಸಂಗತಿಗ ಕಣ್ಣ್‌ಮುಂದೆ ಹಾದ್ ಹೋಗ್ತಿತ್ತ್. ನಾವ್ ಆಗ್ರಲಿ, ಪತ್ತೇಪುರ ಸಿಕ್ರಿಲಿ, ದೆಹಲಿಲಿ ನೋಡ್ದ ಬಹುಮಟ್ಟಿಗೆ ಗುಲಾಮ ಬಾರತದ ಸಾದನೆ. ಜಯಪುರಲಿ ಗುಲಾಮ ಬಾರತದ ನೆರ್‌ಳ್ಲಿ ನಡ್ದ ಸಾದನೆ. ನಮ್ಮ ನಿಜ ಬಾರತ ಇದೇ ಅಲ್ಲ. ಅದನ್ನ್ ಇನ್ನೂ ಸುತ್ತಾಡಿ ಹುಡ್ಕಿ ನೋಡೊಕು. ಅದಕೆ ವಿಶಾಲ ಬಾರತದ ಉದ್ದಗಲಕ್ಕೆ ಸುತ್ತಿ ಸುತ್ತಿ ಬರೊಕಾದೆ. ಅದ್ ನನ್ನ ಪಾಲಿಗೆ ಯಾಗ ಬಂದದೆಂತ ನೋಡೊಕು. ಆ ಅವಕಾಶ ಬಾಕನ ನೀನೂ ನನ್ನ ಜೊತೆಲಿದ್ದಿಯಾಂತ ನಂಬಿನೆ. ನಾವ್ ಈ ಪ್ರವಾಸಕೆ ಕೊಟ್ಟ ದುಡ್ಡು ರೂಪಾಯಿ ನೂರೈವತ್ತಾದರೆ ಕಳ್ದ ವರ್ಸದ ಪ್ರವಾಸಕ್ಕೆ ಬರೇ ನೂರು ರೂಪಾಯಿ. ಎರ್ಡ್ ಮಾಹಯುದ್ಧ ಕಳ್ದ ಈ ದಿನಗಳ್ಲಿ ಬಡತನ ಎಸ್ಟಿತ್ತ್ ಅಂದ್ರೆ ಈ ಹಣ ಕೊಡ್ಸಿಕೂ ಕುತ್ತಿಗೆಗೆ ಬರ್ತಿತ್.

ಮಾಲಿನಿ, ಇನ್ನ್ ಹೆಚ್ಚಿಗೆ ಬರಿದುಲೆ. ಪ್ರವಾಸ ಹೋಕೆ ಒಪ್ಪಿಗೆ ಕೊಟ್ಟ್ ಕಳ್ಸಿದ, ನನ್ನ ಓದು ಬರಹದ ಹೊಣೆನ ನನ್ನ ಅಪ್ಪನ ಸ್ತಾನಲಿ ನಿತ್ತ್ ನಡ್ಸಿಕೊಡುತ್ತಿರುವ ಅಣ್ಣಂಗೆ, ಅವ್ವಂಗೆ, ಮನೆಯವುಕೆಲ್ಲ ನಾನ್ ಋಣಿ. ನನ್ನ ಸದಾ ಪ್ರೋತ್ಸಾಹಿಸುತ್ತಿರುವ ನಿಂಗೆ ನಾ ಕೃತಜ್ಞತೆ ಈ ಮೂಲಕ ತಿಳ್ಸಿನೆ ಮಾಲಿನಿ ! ನೀನ್ ನಮ್ಮೂರಿಗೆ ಯಾಗ ಬಂದಿಯ. ಮುಂದೆ ನಾವಿಬ್ಬರ್ ಜೊತೆಯಾಗಿ ಬಾರತ ದರ್ಶನ ಪಡೆವಕಾಲ ಕೂಡಿ ಬರ್ಲಿಂತ ಹಾರೈಸಿ ಈ ಪತ್ರ ಕೊನೆಗೊಳ್ಸಿನೆ.

ಇತೀ ನಿನ್ನ ಗೆಳೆಯ



ಸಂಪಾಜೆ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ ಕುಯಿಂತೋಡು ದಾಮೋದರ ಅವು ಕನ್ನಡ ಮತ್ತೆ ಅರೆಭಾಷೆಗಳ್‌ಲಿ ಕೃತಿ ರಚನೆ ಮಾಡಿಯೊಳ. ನಮ್ಮೂರ ಹಾಡು, ಪ್ರೇಮವಿಹಾರ, ನಾನೂ ಹಾಡಿದೆ, ಇವರ ಕವನ ಸಂಕಲನಗ. ಡಾ. ಪ್ರಭಾಕರ ಶಿಶಿಲರ,' ಇರುವುದೆಲ್ಲವ ಬಿಟ್ಟು' ಕಾದಂಬರಿನ ಅರೆಭಾಷೆಗೆ ಅನುವಾದಿಸಿಯೊಳೊ. ಸಂಘಸಂಸ್ಥೆಗಳ ಸ್ಮರಣ ಸಂಚಿಕೆಗಳಿಗೆ ಲೇಖನಗಳ್‌ನ, ಕವನಗಳ್‌ನ ಬರ್ದೊಳೊ. ಇವರ ಹಲವು ಭಕ್ತಿ ಗೀತೆಗ ಮತ್ತೆ ಚಿಂತನಗ ಮಡಿಕೇರಿ ಆಕಾಶವಾಣಿಲಿ ಪ್ರಸರ ಆವುಟು. ಕೃಷಿ, ಪ್ರವಾಸ, ಯಕ್ಷಗಾನ, ಸಂಗೀತ ಇವರ ಹವ್ಯಾಸಗ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ

ರೂ. 100/-